ಸಹಕಾರ ಪರಿಚಯ



ಎಚ್. ಜಯದೇವ್

BVP-1211-27/2/17
1182-(6).

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ದತ್ತಿನಿಧಿ ಪ್ರಕಟಣೆ

ಸಹಕಾರ ಪರಿಚಯ

ಎಚ್. ಜಯದೇವ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೧೮

ಮುನ್ನುಡಿ

ಮಾನವ ಪರಿಸರದ ಶಿಶು; ಅಷ್ಟೇ ಪ್ರಮಾಣದ ಸಂಘಜೀವಿ ಕೂಡ. ನೆರೆಯವರ ನೆರವಿಲ್ಲದೆ ಅವನು ಬದುಕಲಾರ. ಬದುಕು ತುಂಬಾ ಸಂಕೀರ್ಣವಾದದ್ದು. ಅದನ್ನು ಸರಳೀಕರಿಸಲು ಇರುವ ಏಕೈಕ ಮಾರ್ಗ ಸಹಕಾರ ವ್ಯವಸ್ಥೆ. ಹಳ್ಳಿಗಳಿಂದಲೇ ತುಂಬಿರುವ ಭಾರತದಲ್ಲಿ ನಾಣ್ಯ ಚಲಾವಣೆಗೆ ಬರುವ ಮುನ್ನ ಕೇವಲ ವಸ್ತು ವಿನಿಮಯ ಪದ್ಧತಿ ಇತ್ತು. ಅಂದರೆ ತನ್ನಲ್ಲಿರುವ ಒಂದು ವಸ್ತುವನ್ನು ಕೊಟ್ಟು ಅದಕ್ಕೆ ಸಮಬೆಲೆಯ ತನಗೆ ಬೇಕಾದ ಬೇರೊಂದು ವಸ್ತುವನ್ನು ತರುವುದು. ಈ ಪದ್ಧತಿ ನಾಣ್ಯ ಬಂದ ಮೇಲೆ ಕಡಿಮೆಯಾಯಿತು. ಹಳ್ಳಿಗಳಲ್ಲಿ ಸಹಕಾರ ಬೇಸಾಯ ಪದ್ಧತಿ ಇಂದಿಗೂ ಇದೆ. ವೃತ್ತಿ ನಿರತರಂತೂ ಒಬ್ಬರಿಗೊಬ್ಬರು ಆಸರೆ. ಇಂತಹ ಸಹಕಾರ ವ್ಯವಸ್ಥೆಯಿಂದ ವ್ಯಕ್ತಿ ವಿಶ್ವಾಸ, ವಿಕಾಸಗಳು ಸಾಧಿತವಾಗುತ್ತವೆ.

ಈ ಘನೋದ್ದೇಶವನ್ನು ಇಟ್ಟುಕೊಂಡು ಪರಿಷತ್ತು ಹಲವು ಪುಸ್ತಕಗಳನ್ನು ಈ ಮಾಲಿಕೆಯಲ್ಲಿ ತರಲು ಆಲೋಚಿಸಿದಾಗ ಬೆಂಗಳೂರಿನ ಅಪೆಕ್ಸ್ ಬ್ಯಾಂಕ್ ಅವರು ನೆರವಿಗೆ ಬಂದು, ಒಂದು ಲಕ್ಷ ರೂಪಾಯಿಗಳ ದತ್ತಿಯನ್ನಿರಿಸಿ, ಅದರಿಂದ ಬರುವ ಬಡ್ಡಿ ಹಣದಲ್ಲಿ ಪುಸ್ತಕಗಳನ್ನು ತರುವಂತೆ; ವಿಚಾರ ಸಂಕಿರಣಗಳನ್ನು ನಡೆಸುವಂತೆ ಆಶಿಸಿತು. ಅದನ್ನು ಪರಿಷತ್ತು ನಡೆಸಿಕೊಂಡು ಬರುತ್ತಿದೆ. ಅದರ ಪುಣ್ಯಫಲವೇ ಎಚ್. ಜಯದೇವ್‌ರವರ 'ಸಹಕಾರ ಪರಿಚಯ'.

ಪರಿಷತ್ತಿನ ಕೋರಿಕೆಯಂತೆ ಪುಸ್ತಕ ರಚಿಸಿಕೊಟ್ಟ ಶ್ರೀ ಎಚ್. ಜಯದೇವ್ ರವರಿಗೆ, ಅದನ್ನು ಬೆಳಕು ಕಾಣಿಸಲು ಆರ್ಥಿಕವಾಗಿ ನೆರವಾದ ಅಪೆಕ್ಸ್ ಬ್ಯಾಂಕಿಗೆ, ಪರಿಷತ್ತಿನ ಪ್ರಕಟಣ ಸಲಹಾ ಸಮಿತಿಗೆ, ಪದಾಧಿಕಾರಿಗಳಿಗೆ, ಮುದ್ರಕರಿಗೆ ಧನ್ಯವಾದಗಳು.

'ರಾಗಿಣಿ' **ಡಾ. ಸಾ.ಸಿ. ಮರುಳಯ್ಯ**

೧೮ ಜೂನ್ ೧೯೯೮

ಲೇಖಕರ ನುಡಿ

ಸಹಕಾರ ತತ್ತ್ವ ವಿಶ್ವಮಾನ್ಯತೆಯನ್ನು ಪಡೆದಿದೆ. ಸಮತಾವಾದ, ಬಂಡವಾಳಶಾಹಿ ನಡುವಿನ ಸುವರ್ಣ ಮಾಧ್ಯಮಮವೆಂದು ಪರಿಗಣಿತವಾಗಿದೆ. ಅಬಲರ ಆಶಾಜ್ಯೋತಿಯಂತಿರುವ 'ಸಹಕಾರ' ಅಬಲರ ರಕ್ಷಾ ಕವಚವೇ ಹೊರತು ಸಬಲರ ಆಯುಧವಲ್ಲ ಎಂಬುದನ್ನು ಎಲ್ಲ ರಾಷ್ಟ್ರಗಳು ಮನಗಂಡಿವೆ.

ಸಹಕಾರ ಕ್ಷೇತ್ರ ಬೃಹತ್ತಾಗಿ ಬೆಳೆದಿದೆ. ಮಹತ್ವವನ್ನು ಪಡೆದಿದೆ. ಆದರೂ ಸಹಕಾರ ತತ್ತ್ವವನ್ನು ಅರ್ಥ ಮಾಡಿಕೊಂಡು ಅದರಲ್ಲಿ ವಿಶ್ವಾಸವನ್ನು ಮೂಡಿಸಿಕೊಂಡು, ಆಚರಣೆ ಬಗ್ಗೆ ಬದ್ಧತೆಯನ್ನು ಉಂಟು ಮಾಡಿಕೊಳ್ಳುವಂತೆ ಜನರಲ್ಲಿ ಜಾಗೃತಿ ಭಾವನೆಯನ್ನು ಮೂಡಿಸುವುದು ಅಗತ್ಯವೆನಿಸುತ್ತದೆ.

ಈ ದಿಸೆಯಲ್ಲಿ ಈ ಕೃತಿ ಒಂದು ಸಣ್ಣ ಪ್ರಯತ್ನ ಎಂದು ಭಾವಿಸುತ್ತೇನೆ. ಭಾರತವೂ ಒಳಗೊಂಡಂತೆ ವಿವಿಧ ರಾಷ್ಟ್ರಗಳಲ್ಲಿ ಸಹಕಾರ ತತ್ತ್ವ ಹಾಗೂ ಆಚರಣೆ, ಸಹಕಾರ ತತ್ತ್ವದ ಮಹತ್ವ, ಅದರ ಬೆಳವಣಿಗೆ ಹೇಗಿದೆ ಎಂಬುದು ಜನ ಸಾಮಾನ್ಯರಿಗೆ ತಿಳಿದಿರುವಂತೆ ಮಾಡುವ ಪ್ರಯತ್ನ ಇಲ್ಲಿದೆ.

ನನ್ನ ಪ್ರಯತ್ನಕ್ಕೆ ಬೆಂಬಲ ನೀಡಿದವರು ಹಲವರು. ಮುಖ್ಯವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಖ್ಯಾತ ಸಾಹಿತಿಗಳೂ ಆದ ಡಾ.ಸಾ.ಶಿ. ಮರುಳಯ್ಯ, ಅವರ ಬೆಂಬಲ, ಪ್ರೋತ್ಸಾಹ ಈ ಕೃತಿಯ ಸಿದ್ಧತೆಗೆ ನೆರವಾಗಿದೆ. ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಪುಸ್ತಕ ಪ್ರಕಟಣೆಯ ಜವಾಬ್ದಾರಿ ಹೊತ್ತ ಪ್ರತಿಷ್ಠಿತ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಆಭಾರಿಯಾಗಿದ್ದೇನೆ.

ಈ ಕೃತಿ ಕೆಲವರಲ್ಲಾದರೂ 'ಸಹಕಾರ'ದ ಬಗ್ಗೆ ಸದ್ಭಾವನೆ ಮೂಡಿಸಿದರೆ ನನ್ನ ಪ್ರಯತ್ನ ಸಾರ್ಥಕ ಎಂದು ನಾನು ಭಾವಿಸಿ ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಹೆಚ್. ಜಯದೇವ್

ವಿಷಯ ಸೂಚಿ

ಸಹಕಾರ ಪರಿಚಯ

ಮಾನವನು ಸಂಘಜೀವಿ. ಎಲ್ಲರೊಡನೆ ಕೂಡಿ ಬಾಳುವುದು ಅವನ ಸಹಜ ಸ್ವಭಾವ. ಸಾಮಾಜಿಕ ನಡವಳಿಕೆಯಲ್ಲಾಗಲಿ ಅಥವಾ ಆರ್ಥಿಕ ರೀತಿಯಲ್ಲಾಗಲಿ ಇತರರೊಡನೆ ಸೇರಿ ಕೆಲಸ ಮಾಡುವುದು ಅವನಿಗೆ ಹುಟ್ಟಿನಿಂದ ಬಂದ ಸ್ವಭಾವವಾಗಿದೆ. ಇಂತಹ ಕೂಡು ಬಾಳಿನಿಂದ ಮಾನವನು ವ್ಯಕ್ತಿಪರ ಪ್ರಗತಿಯನ್ನು ಅಲ್ಲದೆ ಸಮಾಜದ ಪ್ರಗತಿಯನ್ನು ಸಾಧಿಸಬಹುದು. ಹೀಗೆ ಒಟ್ಟುಗೂಡಿ ಕೆಲಸ ಮಾಡುವ ಪದ್ಧತಿಯನ್ನು ಹೆಚ್ಚು ರೂಢಿಸಿದರೆ ಅದರಿಂದ ರಾಷ್ಟ್ರಾಭಿವೃದ್ಧಿಯಾಗುವುದು. ಹೀಗೆ ಜನರು ಒಟ್ಟುಗೂಡಿ ಕೆಲಸ ಮಾಡುವ ಹವ್ಯಾಸಕ್ಕೆ 'ಸಹಕಾರ' ಎಂದು ಹೆಸರು. ಮಾನವನನ್ನು ಪ್ರಗತಿ ಪಥಕ್ಕೆ ಒಯ್ದು ಮಾನವತ್ವವನ್ನು ಬೋಧಿಸುವುದೇ ಸಹಕಾರ ಪದ್ಧತಿ ಎನ್ನಬಹುದು.

ಈ ಸಹಕಾರ ಮಾನವ ಕುಲ ಹುಟ್ಟಿದಾಗಿನಿಂದ ಪ್ರಾರಂಭವಾಯಿತು ಎನ್ನಬಹುದು. ಒಬ್ಬರನ್ನೊಬ್ಬರು ಅವಲಂಬಿಸದೆ ಸಮಾಜದಲ್ಲಿ ಬದುಕಲು ಸಾಧ್ಯವಿಲ್ಲ. ಪ್ರಾಚೀನ ಕಾಲದಲ್ಲಿ ಅನಾಗರಿಕತೆಯ ನಡುವೆ ವಿನಿಮಯ ಪದ್ಧತಿ ಬಳಕೆಯಲ್ಲಿ ಇದ್ದಿದ್ದನ್ನು ತಿಳಿದಿದ್ದೇವೆ. ಇದು ಒಂದು ರೀತಿಯಲ್ಲಿ 'ಸಹಕಾರ' ಎನ್ನಬಹುದು. ಅಲ್ಲದೆ ಕ್ರಿಮಿ ಕೀಟಗಳಲ್ಲಿಯೂ 'ಸಹಕಾರ' ಪದ್ಧತಿಯನ್ನು ಕಾಣಬಹುದು. ಹೇಗೆಂದರೆ ಉದಾ: ಇರುವೆಗಳು ತಮ್ಮ ಬದುಕಿಗೆ ಬೇಕಾದ ಆಹಾರ ಸಂರಕ್ಷಣೆಗಾಗಿ ಎಲ್ಲವೂ ಸಾಲುಗಟ್ಟಿ ಪರಸ್ಪರ ಸಹಾಯದಿಂದ ಆಹಾರ ಶೇಖರಿಸುವುದನ್ನು ಕಾಣಬಹುದು. ಅಲ್ಲದೆ ಪಕ್ಷಿಗಳು ಪ್ರಾಣಿಗಳು ಒಟ್ಟಿಗೆ ತಮ್ಮ ಬಳಗವನ್ನೆಲ್ಲಾ ಕರೆದು ತಿನ್ನುವ ಸನ್ನಿವೇಶವನ್ನು ಕಾಣಬಹುದು. ಹೀಗೆ ಸಹಕಾರ ಈ ಜಗತ್ತು ಹುಟ್ಟಿದಾರಭ್ಯ ಪ್ರಾರಂಭವಾಯಿತು.

ಅತಿ ಸಾಮಾನ್ಯವಾದ ಅರ್ಥದಲ್ಲಿ ಸಹಕಾರ ಎಂದರೆ ಯಾವುದೋ ಒಂದು ಕೆಲಸವನ್ನು ಅದರಿಂದ ಉಪಯೋಗ ಪಡೆಯುವ ಜನರೆಲ್ಲ ಒಂದುಗೂಡಿ ಮಾಡುವುದು. ಇಂತಹ ಒಂದು ಉದಾ: ಭಾರತದಲ್ಲಿ ನಡೆದು ಬಂದಿರುವ 'ಅವಿಭಕ್ತ' ಕುಟುಂಬ ಪದ್ಧತಿಯಾಗಿದೆ. ಗ್ರಾಮಗಳಲ್ಲಿ

ಸಾಮಾನ್ಯವಾಗಿ, ಸಾಧಾರಣವಾದ ಹಾಗೂ ಅಗತ್ಯವಾದ ಕೆಲಸಗಳನ್ನು ನಿರ್ವಹಿಸಲು ಅಲ್ಲಿಯ ನಾಲ್ಕಾರು ಹಿರಿಯ ಜನರಿಂದ ಕೂಡಿದ ಪಂಚಾಯತಿಗಳಿರುತ್ತಿದ್ದವು, ಇಂತಹ ಪಂಚಾಯ್ತಿಗಳ ನೇತೃತ್ವದಲ್ಲಿ ಊರೊಟ್ಟಿನ ಕೆಲಸಗಳು ನಡೆಯುತ್ತಿದ್ದವು. ಒಂದು ರೀತಿಯಲ್ಲಿ ಇದೂ ಸಹಕಾರವೆ, ಇದರ ಜೊತೆಗೆ ಹಳ್ಳಿಗಳಲ್ಲಿ ಹಣಕಾಸಿನ ವ್ಯವಹಾರದಲ್ಲಿಯೂ ಸಹ ಚೀಟಿಗಳನ್ನು ನಡೆಸುವುದು ಮತ್ತು ಒಟ್ಟಿಗೆ ಪ್ರವಾಸ ಕಾರ್ಯಕ್ರಮ ಕೈಗೊಳ್ಳುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವುದನ್ನು ಗಮನಿಸಿದಾಗ 'ಸಹಕಾರ' ಪದ್ಧತಿಯ ಅವಲಂಬನೆ ತಿಳಿಯುತ್ತದೆ. ಈ ರೀತಿಯಲ್ಲಿ ಸಹಕಾರವು ಮಾನವ ಜೀವನದಲ್ಲಿ ಉಸಿರಾಗಿ ಜೊತೆಯಲ್ಲಿಯೇ ಹುಟ್ಟಿ - ಬೆಳೆದು ಅಂಟಿಕೊಂಡಿರುವ ಮೂಲರತ್ನವಾಗಿದೆ.

ಭಾರತದಲ್ಲಿ ಸಹಕಾರ ಚಳವಳಿ

ಭಾರತದಲ್ಲಿ ಸಹಕಾರ ಚಳವಳಿಯ ವಿಚಾರವನ್ನು ತಿಳಿಯುವುದಕ್ಕೆ ಮುಂಚೆ ಇದಕ್ಕೆ ಹೆಚ್ಚು ಸಂಬಂಧವುಳ್ಳ ಕೆಲವು ವಿಚಾರವನ್ನು ತಿಳಿಯುವುದು ಅಗತ್ಯ. ಮೊದಲನೆಯದಾಗಿ ಭಾರತವು ಒಕ್ಕಲುತನ ಅಥವಾ ವ್ಯವಸಾಯ ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ಉದ್ಯೋಗಗಳನ್ನೇ ಪ್ರಧಾನವಾಗಿ ಉಳ್ಳ ದೇಶ. ಇದರ ಪರಿಣಾಮವಾಗಿ ಹಳ್ಳಿಗಳೇ ಜಾಸ್ತಿ. ಸಾಧಾರಣವಾಗಿ ನೂರಕ್ಕೆ ಎಪ್ಪತ್ತು ಜನರು ಈ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಬಹುಭಾಗ ನೇರವಾಗಿ ಭೂಮಿಯನ್ನು ಜೀವನಕ್ಕೆ ಅವಲಂಬಿಸಿದವರು ಅಥವಾ ಒಕ್ಕಲುತನಕ್ಕೆ ಸಂಬಂಧಪಟ್ಟ ಇತರ ಉದ್ಯೋಗಗಳನ್ನು ಅವಲಂಬಿಸಿದವರು. ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಸರಕಾರಿ ನೌಕರಿ ಮುಂತಾದ ಉದ್ಯೋಗಗಳಿಂದ ಜೀವನ ಮಾಡುವವರ ಸಂಖ್ಯೆ ಕಳೆದ ಇಪ್ಪತ್ತು ವರ್ಷಗಳಿಂದ ಅನೇಕ ಪಟ್ಟು ಬೆಳೆದಿದ್ದರೂ ಸಹ ದೇಶದ ಹೆಚ್ಚು ಭಾಗ ಜನರ ಉದ್ಯೋಗ - ಜೀವನ ವ್ಯವಸಾಯವನ್ನು ಅವಲಂಬಿಸಿದೆ. ಇದರಿಂದಲೆ ಮಳೆ - ಬೆಳೆಗಳು ಸರಿಯಾಗಿ ಆಗದಿದ್ದಲ್ಲಿ ದೇಶದ ಇಡೀ ಆರ್ಥಿಕ ಪರಿಸ್ಥಿತಿಯೇ ಹದಗೆಡುತ್ತದೆ. ಇದರಿಂದ ವ್ಯವಸಾಯವೇ ದೇಶದ ಆರ್ಥಿಕ ಕ್ಷೇತ್ರಕ್ಕೆ ಮೂಲ ಆಧಾರ ಎಂದರೆ ತಪ್ಪಾಗಲಾರದು.

ಭಾರತದಲ್ಲಿ ಜನಸಂಖ್ಯೆಯು ಹೆಚ್ಚು. ಪ್ರಪಂಚದಲ್ಲಿ ಜನಸಂಖ್ಯೆಯಲ್ಲಿ ಎರಡನೆಯ ರಾಷ್ಟ್ರವಾಗಿದೆ. ಇದರಿಂದಾಗಿ ಭೂಮಿಯ ಮೇಲೆ ಜನರ ಒತ್ತಡ ಹಾಗೂ ಅವಲಂಬನೆ ಹೆಚ್ಚು. ಬಹುಭಾಗ ಜನರು ವ್ಯವಸಾಯಕ್ಕೆ ಅಂಟಿಕೊಂಡಿದ್ದರೂ ಸಾಧಾರಣವಾಗಿ ಒಬ್ಬ ರೈತನ ಒಡೆತನಕ್ಕೆ ಅಥವಾ ಹಿಡುವಳಿಗೆ ಒಳಪಟ್ಟ ಕ್ಷೇತ್ರ ಕಡಿಮೆ. ಇದರಿಂದಾಗಿ ಒಬ್ಬ ಸಾಧಾರಣ ರೈತನ ಆದಾಯ ಅನೇಕ ವೇಳೆ, ಅವನ ಹಾಗೂ ಕುಟುಂಬದ ಇಡೀ

ವರ್ಷದ ಜೀವನಕ್ಕೆ ಸಾಕಾಗದು. ಭಾರತದಲ್ಲಿ ವ್ಯವಸಾಯವು ಸಹ ಹಿಂಗಾರು ಮತ್ತು ಮುಂಗಾರು ಮಳೆಗಳನ್ನು ಅವಲಂಬಿಸಿದೆ. ಇದರ ಜೊತೆಗೆ ಕೆಲವು ಕಡೆ ಒಂದೇ ಸಲ ಹೆಚ್ಚು ಮಳೆಯಾಗಿ ಪ್ರವಾಹ, ಬಿರುಗಾಳಿ, ಇವುಗಳಿಂದ ಬೆಳೆ ನಾಶವಾಗುವುದು. ಇದರಿಂದ ನಮ್ಮ ರೈತರು ಕಂಗೆಟ್ಟು ನಿಲ್ಲುತ್ತಾರೆ. ಮತ್ತೊಂದು ಬೆಳೆ ಬರುವವರೆಗೆ ಅವನೂ ಹಾಗೂ ಅವನ ಸಂಸಾರ ಜೀವನ ಸಾಗಿಸಬೇಕು. ಅಲ್ಲದೆ ದನಕರುಗಳಿಗೆ ಆಹಾರ ಒದಗಿಸಬೇಕು. ಇದರಿಂದಾಗಿ ಬೇರೆ ದಾರಿ ಕಾಣದೆ ಸಾಲಕ್ಕೆ ಕೈ ನೀಡುವ ಪ್ರಸಂಗ ಬರುತ್ತದೆ. ಆದರೆ ಸಾಕಷ್ಟು ಆಸ್ತಿಯಿಲ್ಲದ ಬಡರೈತರಿಗೆ ಸಾಲವನ್ನು ನೀಡುವವರು ಯಾರು? ಸಾಲಕ್ಕೆ ಭದ್ರತೆ ಏನು? ಈ ರೀತಿಯಲ್ಲಿ ಸಾಲ ಕೊಟ್ಟರೂ ಹೆಚ್ಚಿಗೆ ಬಡ್ಡಿಯನ್ನು ಕೊಡುತ್ತಾನೆ. ಹೀಗೆ ಬೆಳೆ ಹೋದ ಸಂದರ್ಭ ಒಂದೇ ಅಲ್ಲದೆ, ರೈತನು ಇನ್ನೂ ಅನೇಕ ಸಂದರ್ಭಗಳಲ್ಲಿ ಸಾಲ ಬೇಡುವ ಪದ್ಧತಿಯನ್ನು ಎದುರಿಸುತ್ತಾನೆ. ಮದುವೆ, ಅಂತ್ಯಸಂಸ್ಕಾರ ಅಥವಾ ತಿಥಿ, ಮನೆ ಕಟ್ಟುವುದು, ದನ-ಕರುಗಳನ್ನು ಕೊಳ್ಳುವುದು ಇಂತಹ ಸಂದರ್ಭಗಳಲ್ಲೆಲ್ಲಾ ಸಾಲದ ನೆರವು ಬೇಕಾಗುತ್ತದೆ. ಇದರಿಂದಾಗಿ ನಮ್ಮ ದೇಶದ ರೈತನ ಬಗ್ಗೆ ಒಂದು ಗಾದೆ ಮಾತಿದೆ. "ರೈತನು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಮಕ್ಕಳಿಗೂ ಸಾಲದ ಹೊರೆಯನ್ನು ಬಿಟ್ಟು ಸಾಯುತ್ತಾನೆ".

ಇದೆಲ್ಲದರ ಜೊತೆಗೆ ದೇಶದಲ್ಲಿ ಅಕ್ಷರಸ್ಥರ ಹಾಗೂ ವಿದ್ಯಾವಂತರ ಸಂಖ್ಯೆಯೂ ಕಡಿಮೆ. ಇದರಿಂದಾಗಿ ಒಳ್ಳೆಯ ಹಾಗೂ ದಕ್ಷ ಮುಂದಾಳುಗಳೂ ವಿರಳ. ಜನ ಯಾವುದೇ ಸಂಘ - ಸಂಸ್ಥೆಗಳನ್ನು ಸುಸೂತ್ರವಾಗಿ ನಡೆಸಬೇಕಾದರೆ ಸಾಕಷ್ಟು ವಿದ್ಯಾವಂತರಿದ್ದು ಸಂಘದ ಅಥವಾ ಸಂಸ್ಥೆಯ ಉದ್ದೇಶ, ತಮ್ಮ ಹಕ್ಕು - ಬಾಧ್ಯತೆಗಳನ್ನು ತಿಳಿಯುವುದು ಆವಶ್ಯಕ. ಜೊತೆಗೆ ಒಳ್ಳೆಯ ಮುಂದಾಳುಗಳು ಅಥವಾ ನಾಯಕರು ಜವಾಬ್ದಾರಿ ಹೊತ್ತ ಸ್ಥಾನಕ್ಕೆ ಸಿಕ್ಕಬೇಕು. ಇದು ನಮ್ಮ ದೇಶದ ಹಳ್ಳಿಗಳಲ್ಲಿ ಒಂದು ಕೊರತೆಯೆ. ಇಂತಹ ಸ್ಥಿತಿಯಲ್ಲಿ ಜನ ಸರ್ಕಾರಕ್ಕೆ ಕೊಡಬೇಕಾದ ಕಂದಾಯ, ಸಾಲಗಾರರಿಗೆ ಕೊಡಬೇಕಾದ ಸಾಲ ಅಥವಾ ಬಡ್ಡಿಗಳನ್ನು

ವಸೂಲು ಮಾಡುವ ಪ್ರಯತ್ನಗಳು ನಡೆದಲ್ಲಿ ಜನ ರೊಚ್ಚಿಗೆದ್ದು ತಿರುಗಿ ಬೀಳುವ ಪ್ರಸಂಗಗಳು ಉದ್ಭವವಾದವು.

ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾದ ಮೇಲೆ ಸುಭದ್ರವಾದ ಸರ್ಕಾರ ಹಾಗೂ ಆಡಳಿತ ಏರ್ಪಟ್ಟಿತು. ಭೂಮಿ ಹಾಗೂ ಅದರ ಒಡೆತನ - ಹಕ್ಕು ಇವುಗಳ ಬಗ್ಗೆ ರೆವಿನ್ಯೂ ಇಲಾಖೆಯ ಕಚೇರಿಗಳಲ್ಲಿ ರಿಜಿಸ್ಟರುಗಳು ಇಡಲ್ಪಟ್ಟು, ಯಾವುದೇ ಜಗಳ ವಿವಾದಗಳು ಬಂದಲ್ಲಿ ಅವುಗಳನ್ನು ತೀರ್ಮಾನಿಸಲು ಕಾನೂನುಗಳು ರಚಿತವಾದವು. ಸ್ಥಿರ ಆಸ್ತಿಗಳಲ್ಲಿ ನಡೆಯುವ ವ್ಯವಹಾರಗಳನ್ನು ರಿಜಿಸ್ಟರ್ ಮಾಡಲು ಸಬ್ ರಿಜಿಸ್ಟ್ರಾರ್ ಕಚೇರಿಗಳಾದವು. ಇದರಿಂದ ಭೂಮಿ ಮತ್ತು ಸ್ಥಿರ ಆಸ್ತಿಗಳ ಆಧಾರದ ಮೇಲೆ ಸಾಲ ಕೊಡುವುದು, ಪಡೆಯುವುದು ಸುಲಭವಾಯಿತು. ಹೀಗೆ ಪರಿಹಾರಗಳನ್ನು ಕೊಡುವಾಗ ಹಾಗೂ ಇನ್ನಿತರ ಸಂದರ್ಭಗಳಲ್ಲಿಯೂ ಸಹ ರೈತರಿಗೆ ಸುಲಭವಾಗಿ ಸಾಲ ಸಿಗುವಂತೆ ಮಾಡಬೇಕಾದ ಅಗತ್ಯ ಸರ್ಕಾರಕ್ಕೆ ಕಂಡು ಬರುತ್ತಿತ್ತು.

ಕ್ರಿ.ಶ. ೧೮೮೨ ರಲ್ಲಿ ಮುಂಬೈ ಸರ್ಕಾರ ಸರ್. ವಿಲಿಯಂ ವೆಡರ್‌ಬರ್ನ್ ಅವರನ್ನು ಗ್ರಾಮಾಂತರ ಪ್ರದೇಶಗಳಲ್ಲಿನ ಜನರ ಸಾಲದ ಹೊರೆಗೆ ಕಾರಣಗಳು ಮತ್ತು ಅವುಗಳಿಗೆ ಒದಗಿಸಬಹುದಾದ ಪರಿಹಾರಗಳ ಸಾಧ್ಯತೆ ಕುರಿತು ವರದಿ ಮಾಡಲು ನೇಮಿಸಿತು. ಸರ್ ವಿಲಿಯಂ ವೆಡರ್‌ಬರ್ನ್‌ರವರು ತಮ್ಮ ವರದಿಯಲ್ಲಿ ವ್ಯವಸಾಯ ಬ್ಯಾಂಕುಗಳ ಸ್ಥಾಪನೆ ಹಾಗೂ ಅವುಗಳ ಮುಖಾಂತರ ರೈತರಿಗೆ ಸಾಲ ಸಿಗುವಂತೆ ವ್ಯವಸ್ಥೆ ಮಾಡಲು ಶಿಫಾರಸ್ಸು ಮಾಡಿದರು. ಆದರೆ ಈ ವರದಿ ಸರ್ಕಾರದಿಂದ ಒಪ್ಪಿ ಕಾರ್ಯಗತವಾಗಲಿಲ್ಲ. ಇದಕ್ಕೆ ಬದಲಾಗಿ ತಕಾವಿ ಹಾಗೂ ಜಮೀನು ಸುಧಾರಣೆಗೆ ಸಾಲಗಳನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿತು.

ಮೇಲೆ ಕಂಡಂತೆ ಮುಂಬೈ ಸರ್ಕಾರ ಮಾತ್ರವಲ್ಲದೆ ಎಲ್ಲಾ ಪ್ರಾಂತೀಯ ಸರ್ಕಾರಗಳು ಮತ್ತು ಅನೇಕ ಸಂಸ್ಥಾನ ಸರ್ಕಾರಗಳು ರೈತರಿಗೆ ಸುಲಭವಾಗಿ ಸಾಲ ಸಿಗುವ ವ್ಯವಸ್ಥೆಯನ್ನು ಒಂದಿಲ್ಲೊಂದು ರೀತಿಯಲ್ಲಿ ಅದರಲ್ಲೂ ಬಹುತೇಕ ತಕಾವಿ ಸಾಲಗಳ ರೂಪದಲ್ಲಿ ಒದಗಿಸುವ ವ್ಯವಸ್ಥೆಯನ್ನು ಜಾರಿಗೆ ತಂದವು. ಇದರಿಂದಾಗಿ ರೈತರಿಗೆ ಸಾಲಗಳ

ಆವಶ್ಯಕತೆ ಬಗ್ಗೆ ಸರ್ಕಾರಗಳು ಕಣ್ತೆರೆದು ಗಮನ ಕೊಡುವಂತಾಯಿತು. ಇದರಿಂದ ಆ ವೇಳೆಗಾಗಲೆ ಇಂಗ್ಲೆಂಡ್, ಜರ್ಮನಿಯಲ್ಲಿ ಅಲ್ಲಿಯ ರೈತರ ಶೋಷಣೆಯ ವಿಮೋಚನೆಗೆ ಸಹಕಾರದ ಮೂಲಕ ಕೈಗೊಂಡ ನೀತಿ ನಿಯಮಗಳು ಹೆಚ್ಚು ಪರಿಣಾಮ ಬೀರಿರುವುದನ್ನು ಗಮನಿಸಿದ ಭಾರತ ಸರ್ಕಾರಗಳು, ಭಾರತದಲ್ಲಿ ಸಹಕಾರ ಚಳವಳಿ, ವ್ಯವಸಾಯ ಕ್ಷೇತ್ರದಲ್ಲಿ ಸ್ವಾವಲಂಬನೆ ಪಡೆಯಿತು.

ಭಾರತದ ಸ್ವಾತಂತ್ರ್ಯ ಪೂರ್ವ ಸಹಕಾರ ಚಳವಳಿ

ಭಾರತದಲ್ಲಿ ಹಳ್ಳಿಗಾಡಿನ ಜನರ ಅದರಲ್ಲೂ ಮುಖ್ಯವಾಗಿ ರೈತರ ಕಷ್ಟಗಳಿಗೆ ಪರಿಹಾರವನ್ನೊದಗಿಸುವುದು ಸಮಸ್ಯೆಯಾಗಿ ಅನೇಕ ಪ್ರಾಂತೀಯ ಸರ್ಕಾರಗಳ ಗಮನವನ್ನು ಸೆಳೆದಿದ್ದಾಗ - ಸಹಕಾರವು ಈ ಸಮಸ್ಯೆಯ ಪರಿಹಾರಕ್ಕೆ ದಾರಿಯಾದೀತೆ ಎಂಬುದನ್ನು ಮೊಟ್ಟಮೊದಲು ಯೋಚಿಸಿದ್ದು ಮದ್ರಾಸ್ ಸರ್ಕಾರ. ಮದ್ರಾಸ್ ಸರ್ಕಾರವು ಯೂರೋಪಿನಲ್ಲಿ ಬೆಳೆಯುತ್ತಿದ್ದ ಸಹಕಾರ ಸಂಘಗಳ ರೀತಿ ನೀತಿಗಳನ್ನು ಅಭ್ಯಾಸ ಮಾಡಿ ಅಂತಹ ಸಹಕಾರ ಸಂಘಗಳನ್ನು ನಮ್ಮ ದೇಶದಲ್ಲೂ ಪ್ರಾರಂಭ ಮಾಡಬಹುದಾದ ಸಾಧ್ಯತೆಗಳನ್ನು ಪರೀಕ್ಷೆ ಮಾಡಲು ಸರ್ ಪ್ರೆಡರಿಕ್ ನಿಕಲ್ಸನ್‌ರವರನ್ನು ಯುರೋಪಿಗೆ ಕಳುಹಿಸಿತು. ಸರ್ ನಿಕಲ್ಸನ್‌ರವರಿಗೆ ಜರ್ಮನಿಯಲ್ಲಿನ ರೈಫಿಸಾನ್ ಸಹಕಾರ ಸಂಘಗಳ ರೀತಿ ನೀತಿಗಳು ಮನಸ್ಸಿಗೆ ಹಿಡಿದಿದ್ದಲ್ಲದೆ, ಇಂಡಿಯಾದಲ್ಲೂ ಇಂತಹ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಗ್ರಾಮಾಂತರ ಜನತೆಗೆ ಸಾಲದ ವ್ಯವಸ್ಥೆ ಮಾಡಿದರೆ ಅವು ಫಲಪ್ರದವಾಗಿ ಕೆಲಸ ಮಾಡಬಲ್ಲವು ಎನಿಸಿತು. ಅಂತೆಯೇ ಅವರು ೧೮೮೫ ರಲ್ಲಿ ಮದ್ರಾಸ್ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದರು. ಇದನ್ನು ಅನುಸರಿಸಿ ಮುಂದಿನ ವರ್ಷಗಳಲ್ಲಿ ಮದ್ರಾಸ್ ಪ್ರಾಂತ್ಯ ಮತ್ತು ದೇಶದ ಇತರ ಅನೇಕ ಕಡೆಗಳಲ್ಲಿ ಕೆಲವಾರು ಸಹಕಾರ ಸಂಘಗಳು ಸ್ಥಾಪನೆ ಮಾಡಲ್ಪಟ್ಟವು. ಆಗಿನ್ನೂ ಸಹಕಾರ ಸಂಘಗಳ ಕಾಯದೆ ಆಗಿರಲಿಲ್ಲವಾದ್ದರಿಂದ ಸಹಕಾರ ಸಂಘಗಳನ್ನು ೧೮೮೨ರ ಇಂಡಿಯನ್ ಕಂಪನೀಸ್ ಆ್ಯಕ್ಟ್‌ನ ಮುಖಾಂತರ ರಿಜಿಸ್ಟರ್ ಮಾಡಲಾಗುತಿತ್ತು. ಹೀಗೆ

ಭಾರತ ದೇಶದಲ್ಲಿ ಸಹಕಾರಿ ಚಳವಳಿ ಪ್ರಾರಂಭ ಮಾಡಲು ನಾಂದಿಯಾಯಿತು.

ಹೀಗೆ ಹಲವಾರು ವರ್ಷಗಳ ನಂತರ ರಿಜಿಸ್ಟರ್ ಆಗುತ್ತಿದ್ದ ಸಹಕಾರ ಸಂಘಗಳ ಸಂಖ್ಯೆ ಹೆಚ್ಚಿದಂತೆ ಪ್ರತ್ಯೇಕವಾದ ಸಹಕಾರ ಸಂಘಗಳ ಕಾನೂನಿನ ಅಗತ್ಯತೆ ಸರ್ಕಾರಕ್ಕೆ ಕಂಡಿತು. ಅದೇ ಸಮಯದಲ್ಲಿ ಸಂಯುಕ್ತ ಪ್ರಾಂತ್ಯ ಸರ್ಕಾರಗಳು - ಸ್ಥಳೀಯ ಪರಿಸ್ಥಿತಿಯನ್ನು ಪರಿಶೀಲಿಸಿ ರೈತರ ಸಮಸ್ಯೆಯ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಸೂಚಿಸಲು ಹೆಚ್.ದೂಪರ್ಸೆ ಅವರನ್ನು ನೇಮಿಸಿತು. ದೂಪರ್ಸೆಯವರು ಸಹ ರೈಫಿಸಾನ ಮಾದರಿಯ ಸಹಕಾರ ಸಂಘಗಳನ್ನು ಹಳ್ಳಿಗಳಲ್ಲಿ ಸಂಘಟಿಸಲು ಸಲಹೆ ಮಾಡಿದರು. ಹಾಗೂ ಪಟ್ಟಣ ಸಹಕಾರ ಸಂಘಗಳನ್ನು ಸ್ಥಾಪಿಸಬೇಕೆಂದು ಸೂಚನೆ ನೀಡಿದರು.

೧೮೯೯ ರಲ್ಲಿ ಮದ್ರಾಸ್ ಸರ್ಕಾರ ನಿಕೋಲ್ಸನ್‌ನ ವರದಿಯನ್ನು ಪರಿಶೀಲಿಸಿತು ಹಾಗೂ ೧೯೦೦ನೇ ಡಿಸೆಂಬರಿನಲ್ಲಿ ಕಲ್ಕತ್ತಾದಲ್ಲಿ ಸೇರಿದ ಸಮಿತಿಯು ರೈಫಿಸಾನ್ ಮಾದರಿಯ ಸಂಘಗಳನ್ನು ನಮ್ಮ ದೇಶದಲ್ಲಿಯೂ ಸ್ಥಾಪಿಸಬೇಕೆಂದು ಸಲಹೆ ಮಾಡಿತು. ೧೯೦೧ ರಲ್ಲಿ ರಚಿತವಾದ ಕ್ಷಾಮ ಆಯೋಗವೂ ಸಂಘಗಳ ಸ್ಥಾಪನೆಗೆ ಸಲಹೆ ಮಾಡಿತು.

ಆಗಿನ ಮದ್ರಾಸ್ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್‌ರವರು ಪರಿಸ್ಥಿತಿಯನ್ನು ಅರಿತು, ನಿಕೊಲ್ಸನ್ ಮತ್ತು ದೂಪರ್ಸೆ ಮತ್ತು ಕ್ಷಾಮ ಆಯೋಗದ ಸಲಹೆ ಮಾಡಿದಂತೆ ಸಂಘಗಳ ಸ್ಥಾಪನೆಗಾಗಿ ಶಿಫಾರಸ್ಸು ಮಾಡಲು, ಎಡ್ವರ್ಡ್ ಲಾ, ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದರು. ಸರ್. ಎಡ್ವರ್ಡ್‌ಲಾ - ಸಮಿತಿ ರೂಪಿಸಿದ ಕರಡು ವಿಧೇಯಕ ಮತ್ತು ನಿಯಮಗಳನ್ನು ಪರಿಶೀಲಿಸಿದ ನಂತರ ೧೯೦೩ ರಲ್ಲಿ ಸರ್ ಡೆಂಜಿಲ್ ಇಬಾಸ್ಸಿನ್, ಅವರು ಕೇಂದ್ರ ವಿಧಾನ ಪರಿಷತ್ತಿನಲ್ಲಿ ಶ್ವೇತ ಪತ್ರ ಮಂಡಿಸಿದರು. ಈ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಅನುಮತಿ ದೊರೆಯಿತು.

೧೯೦೪ ನೇ ಮಾರ್ಚ್ ೨೫ ರಂದು ಸಹಕಾರ ಸಂಘಗಳ ಪತ್ತಿನ ಕಾನೂನು ಜಾರಿಗೆ ಬಂದಿತು. ಭಾರತದಲ್ಲಿ ಸಹಕಾರ ಚಳವಳಿ ಪ್ರಾರಂಭ

ವಾಯಿತು. ಈ ಕಾನೂನಿನ ಪ್ರಕಾರ ಹಳ್ಳಿ - ಪಟ್ಟಣಗಳಲ್ಲಿ ಸಾಲದ ಸಂಘಗಳಿಗೆ ಮಾತ್ರ ಅವಕಾಶವಿತ್ತು. ಈ ಸಂಘಗಳು ಸುಲಭ ಬಡ್ಡಿ ದರದಲ್ಲಿ ಹಳ್ಳಿ ಮತ್ತು ಪಟ್ಟಣಿಗರಿಗೆ ಸಾಲ ನೀಡುತ್ತಿದ್ದವು. ಆದರೆ ಕೇವಲ ಈ ಸಂಘಗಳು ತಮ್ಮ ಸದಸ್ಯರುಗಳ ಎಲ್ಲಾ ಅಭಿವೃದ್ಧಿ ಮಾಡಲು ಸಮರ್ಥ ವಾಗಿರಲಿಲ್ಲ. ಈ ಸಂಘಗಳಂತೆ ಕೈಗಾರಿಕೆ, ಗೃಹ ನಿರ್ಮಾಣ, ಮಾರಾಟ ಹಾಗೂ ಗ್ರಾಹಕರ ಸಹಕಾರ ಸಂಘಗಳು ಸ್ಥಾಪನೆಗೊಳ್ಳಬೇಕಾದ ಅಗತ್ಯ ಕಂಡು ಬಂದಿತು.

ಸಹಕಾರ ಚಳವಳಿಯನ್ನು ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸುವ ಅಗತ್ಯ ಕಂಡು ಬಂದದ್ದಕ್ಕಾಗಿ ೧೯೧೨ ರಲ್ಲಿ ಎಲ್ಲಾ ಪ್ರಕಾರದ ಸಹಕಾರ ಸಂಘಗಳು ಸ್ಥಾಪನೆಗೊಳ್ಳುವಂತೆ ನೂತನ ಸಹಕಾರಿ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾನೂನಿನ ಪರಿಣಾಮದಿಂದಾಗಿ ಭಾರತದೇಶದಲ್ಲಿ ಸಹಕಾರ ಚಳವಳಿಯು ಹೆಚ್ಚು ಪ್ರಗತಿ ಹೊಂದಲು ಹಾಗೂ ಹೆಚ್ಚು ಸಂಘಗಳನ್ನು ಸ್ಥಾಪನೆ ಮಾಡಲು ಅವಕಾಶ ನೀಡಿತು. ಇದರಿಂದ ದೇಶದಲ್ಲೆಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಗ್ರಾಹಕರ, ಮಾರಾಟ, ರೂಪಾಂತರ ಕೈಗಾರಿಕೆ ಹಾಗೂ ಗೃಹನಿರ್ಮಾಣ ಇವೇ ಮುಂತಾದ ಸಂಘಗಳು ಸ್ಥಾಪನೆಗೊಂಡವು.

ಮೆಕಲಗಾನ ಸಮಿತಿ ೧೯೧೪:

ಕ್ರಿ.ಶ. ೧೯೧೪ ರಲ್ಲಿ ಭಾರತ ಸರ್ಕಾರವು ಸರ್ ಎಡ್ವರ್ಡ್ ಮೆಕಲಗಾನರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಅಲ್ಲಿಯವರೆಗೆ ನಡೆದುಬಂದ ಸಹಕಾರ ಚಳವಳಿಯ ಸ್ಥಿತಿಯ ಬಗ್ಗೆ ವಿಚಾರ ಮಾಡಿ ಸಹಕಾರ ಸಂಘಗಳನ್ನು ಇನ್ನು ಬಲಗೊಳ್ಳಲು ಏನು ಮಾಡಬೇಕೆಂಬುದು ಶಿಫಾರಸು ಮಾಡಲು ಸಮಿತಿಗೆ ಕೇಳಿತು. ಈ ಶಿಫಾರಸುಗಳು ಇಂಡಿಯಾದಲ್ಲಿ ಸಹಕಾರ ಚಳವಳಿ ಬೆಳೆಯಲು ಕೆಲವು ದಾರಿಗಳನ್ನು, ನಿಯಮಗಳನ್ನು ಹಾಕಿಕೊಟ್ಟವು. ಮೆಕಲಗಾನ ಸಮಿತಿ, ಸಹಕಾರ ಸಂಘಗಳನ್ನು, ೧. ಪ್ರಾಥಮಿಕ ಸಹಕಾರ ಸಂಘಗಳು ೨. ಕೇಂದ್ರ ಸಹಕಾರ ಬ್ಯಾಂಕುಗಳು ೩. ಪ್ರಾಂತೀಯ ಸಹಕಾರ ಬ್ಯಾಂಕುಗಳು ೪. ಮೇಲ್ವಿಚಾರಣಾ ಸಂಘಗಳೆಂದು ನಾಲ್ಕು ವಿಧವಾಗಿ ವಿಂಗಡಿಸಿತು. ಅಲ್ಲಿಂದ

ಮುಂದೆ ಇದೇ ಶಬ್ದಗಳಿಂದ ಅವುಗಳನ್ನು ಕರೆಯಬೇಕೆಂದು ಸಲಹೆ ಮಾಡಿತು.

ಮೆಕಲಗಾನ ಸಮಿತಿಯು ೧೯೧೫ ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿತು. ಹಳ್ಳಿಗಳಲ್ಲಿ ಸಾಧ್ಯವಾದಷ್ಟು ಚಿಕ್ಕ ಆಡಳಿತ ಕ್ಷೇತ್ರವಿರುವ ಪ್ರಾಥಮಿಕ ಸಹಕಾರ ಸಂಘಗಳನ್ನು ಸ್ಥಾಪಿಸಬೇಕೆಂದು ಅಭಿಪ್ರಾಯ ಪಟ್ಟಿತು. ಸಹಕಾರ ಸಂಘಗಳ ಷೇರು ಮತ್ತು ಠೇವಣಿ ಮೂಲಕ ತಮ್ಮ ಸ್ವಂತ ಬಂಡವಾಳವನ್ನು ಹೆಚ್ಚಿಸಿಕೊಂಡು, ಉದ್ದೇಶಗಳಿಗೆ ಅನುಗುಣವಾಗಿ ಸಾಲ ಕೊಡಬೇಕೆಂದು, ಸಹಕಾರದ ಇಲಾಖೆ ಲೆಕ್ಕಗಳ ತನಿಖೆ ಮತ್ತು ಮೇಲ್ವಿಚಾರಣೆ ವ್ಯವಸ್ಥೆ ಮಾಡಬೇಕೆಂದು ಸಮಿತಿ ಹೇಳಿತು. ಮಧ್ಯವರ್ತಿ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ, ಎಲ್ಲಾ ಪ್ರಾಥಮಿಕ ಸಹಕಾರ ಸಂಘಗಳು ಸದಸ್ಯತ್ವವನ್ನು ಪಡೆದು ಅಲ್ಲಿಂದಲೆ ಸಾಲ ಪಡೆಯಬೇಕೆಂದು, ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಒಂದು ಪ್ರಾಂತ್ಯ ಅಪೆಕ್ಸ್ ಬ್ಯಾಂಕ್ ಸ್ಥಾಪಿಸಿ ಎಲ್ಲಾ ಮಧ್ಯವರ್ತಿ ಸಹಕಾರ ಬ್ಯಾಂಕುಗಳು ಅಂತಹ ಅಪೆಕ್ಸ್ ಬ್ಯಾಂಕಿನ ಸದಸ್ಯತ್ವ ಹೊಂದಬೇಕೆಂದು ಸಮಿತಿ ಶಿಫಾರಸು ಮಾಡಿತು. ಇಂದಿಗೂ ಸಹ ಸಹಕಾರ ಚಳವಳಿ ಬಹುಮಟ್ಟಿಗೆ ಈ ಸಮಿತಿ ಹೇಳಿದ ದಾರಿಯಲ್ಲಿ ನಡೆದಿರುವುದನ್ನು ನಾವು ಕಾಣಬಹುದು.

ಕ್ರಿ.ಶ. ೧೯೧೫ ರಿಂದ ಮುಂದೆ ಸಹಕಾರ ಚಳವಳಿ

ಕ್ರಿ.ಶ. ೧೯೧೯ ರಲ್ಲಿ ಮಾಂಟೆಗೊ ಚೆಲಮಸಪರ್ಡ ಸುಧಾರಣೆಗಳ ಫಲವಾಗಿ ಜಾರಿಗೆ ಕೊಟ್ಟ ಗೌರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್‌ನ ಪ್ರಕಾರ ಸಹಕಾರವು ಪ್ರಾಂತ್ಯ ಸರ್ಕಾರಗಳ ವ್ಯಾಪ್ತಿಗೆ ಒಳಪಟ್ಟ ವಿಷಯವಾಗಿ ವರ್ಗಾಯಿಸಲ್ಪಟ್ಟಿತು. ಇದರಿಂದಾಗಿ ಇಲ್ಲಿಂದ ಮುಂದೆ ಸಹಕಾರ ಸಂಘಗಳ ಕಾನೂನು ರಚನೆ, ಸಹಕಾರ ಸಂಘಗಳ ಬೆಳವಣಿಗೆ ಬಗ್ಗೆ ಸರ್ಕಾರದ ನೀತಿ ಇವು ಪ್ರಾಂತೀಯ ಸರ್ಕಾರಗಳ ಅಧಿಕಾರಕ್ಕೆ ಸೇರಿದವು.

ದೇಶದ ವಿವಿಧ ಸಂಸ್ಥಾನಗಳಲ್ಲಿ ಸಹಕಾರವು ಸಂಸ್ಥಾನ ಸರ್ಕಾರಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಅಲ್ಲಿ ಸಹಕಾರ ಕಾನೂನುಗಳ ರಚನೆ ಮತ್ತು ಸಹಕಾರ ಚಳವಳಿ ಬೆಳವಣಿಗೆಯೂ ಸಹ ಸಾಧಾರಣವಾಗಿ ನೆರೆಯ

ಬ್ರಿಟಿಷ್-ಇಂಡಿಯಾ ಪ್ರಾಂತ್ಯಗಳ ಮಾದರಿಯನ್ನು ಅನುಸರಿಸುತ್ತಿತ್ತು. ಮದ್ರಾಸ್ ಮತ್ತು ಮುಂಬೈಯಂತಹ ಪ್ರಾಂತ್ಯ ಸರ್ಕಾರಗಳು ಸಹಕಾರ ಚಳವಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟವು. ದೇಶದಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಬಹುಸಂಖ್ಯೆಯಲ್ಲಿ ಸಹಕಾರ ಸಂಘಗಳೂ ಪ್ರಾರಂಭವಾಗಿ ಬೆಳೆದವು. ಆದರೆ ಆ ಕಾಲದಲ್ಲಿ ಸಹಕಾರ ಸಂಘಗಳ ಸ್ಥಾಪನೆ ಮತ್ತು ಬೆಳವಣಿಗೆ ಬಗ್ಗೆ ಒಂದು ವಿಶಿಷ್ಟ ನೀತಿಯಾಗಲಿ ಅಥವಾ ಸಮಗ್ರಯೋಜನೆಯಾಗಲಿ ಯಾವ ಪ್ರಾಂತ್ಯದಲ್ಲಿಯೂ ನಿರೂಪಿಸಲ್ಪಟ್ಟಿರಲಿಲ್ಲ. ಎಲ್ಲೇ ಆಗಲಿ, ಯಾವುದೇ ರೀತಿಯ ಸಹಕಾರ ಸಂಘ ಸ್ಥಾಪನೆ ಬಗ್ಗೆ ಜನರ ಆಸಕ್ತಿ ಕಂಡುಬಂದರೆ ಅಂತಹ ಸಹಕಾರ ಸಂಘ ಸ್ಥಾಪನೆಯಾಗುತ್ತಿತ್ತು.

ವರ್ಷಗಳು ಕಳೆದಂತೆ ವಿವಿಧ ಪ್ರಾಂತ್ಯ ಸರ್ಕಾರಗಳು ಸಹಕಾರ ಕ್ಷೇತ್ರದಲ್ಲಿ ತಾವು ಸಾಧಿಸಿದ ಪ್ರಗತಿ ಹಾಗೂ ಉಂಟಾದ ಕುಂದು ಕೊರತೆಗಳ ಬಗ್ಗೆ ವಿಚಾರ ನಡೆಸಿ ಅಗತ್ಯ ಬಿದ್ದಂತೆ ಪ್ರತ್ಯೇಕವಾದ ಕಾನೂನುಗಳನ್ನು ರಚಿಸಿಕೊಂಡವು. ಬ್ರಿಟಿಷ್ ಇಂಡಿಯಾದಲ್ಲಿ ಮೊಟ್ಟ ಮೊದಲಿಗೆ ಮುಂಬೈ ಸರ್ಕಾರ ೧೯೨೫ ರಲ್ಲಿ ತನ್ನದೇ ಆದ ಸಹಕಾರ ಸಂಘಗಳ ಕಾನೂನನ್ನು ರಚಿಸಿ ಜಾರಿಗೆ ತಂದಿತು. ಹೀಗೆ ಎಲ್ಲಾ ಇತರೆ ಪ್ರಾಂತೀಯ ಸರ್ಕಾರಗಳು ತಮ್ಮ ತಮ್ಮ ಶಾಸನಗಳನ್ನು ರಚಿಸಿಕೊಂಡವು. ಮೈಸೂರು ಸರ್ಕಾರವು ೧೯೧೮ರಲ್ಲಿ ತನ್ನ ಸಹಕಾರ ಸಂಘಗಳ ಕಾನೂನನ್ನು ರೂಪಿಸಿತು.

೧೯೨೭ ರಿಂದ ಮುಂದೆ ಪ್ರಪಂಚದಲ್ಲಿ ಹಾಗೂ ಭಾರತದಲ್ಲಿ ಉಂಟಾದ ಆರ್ಥಿಕ ಮುಗ್ಗಟ್ಟಿನ ಕೆಟ್ಟ ಪರಿಣಾಮಗಳು ಸಹಕಾರ ಕ್ಷೇತ್ರದ ಮೇಲೂ ಉಂಟಾಗಿ ಬಾರಿ ಪೆಟ್ಟು ಕೊಟ್ಟವು. ವ್ಯವಸಾಯ ಉತ್ಪನ್ನಗಳ ಬೆಲೆ ಬಹಳ ಕಡಿಮೆಯಾದ ಫಲವಾಗಿ ರೈತರ ಕೈಯಲ್ಲಿ ಹಣದ ಅಭಾವವಾಯಿತು. ಸಹಕಾರ ಸಂಘಗಳಿಗೆ ಬೇಕಾದ ಸಾಲಗಳು ಬಾಕಿ ನಿಂತು ಶೇರು ಮತ್ತು ಠೇವಣಿಗಳು ತಗ್ಗಿದವು. ವ್ಯವಹಾರಗಳು ಕಡಿಮೆಯಾಗಿ ಬೆಳವಣಿಗೆ ಕುಂದಿತು. ೧೯೨೭ ರಿಂದ ೧೯೩೪ ರವರೆಗೆ ಅನೇಕ ಸಹಕಾರ ಸಂಘಗಳು ನಿದ್ರಾವಸ್ಥೆಗೆ ಬಂದವು. ಕೇಂದ್ರ ಸಹಕಾರಿ ಬ್ಯಾಂಕುಗಳೂ ಅನೇಕ ಕಡೆಗಳಲ್ಲಿ ವ್ಯವಹಾರ ಕುಗ್ಗಿ ಸೊರಗಿ ನಿಂತವು.

ಸಹಕಾರಿ ಕ್ಷೇತ್ರದಲ್ಲಿ ಒದಗಿದ ಈ ಪರಿಸ್ಥಿತಿಯಿಂದಾಗಿ ಸಹಕಾರ ಸಂಘಗಳನ್ನು ಹೆಚ್ಚಿಸುವುದಕ್ಕೆ ಬದಲಾಗಿ, ಇದ್ದ ಸಹಕಾರ ಸಂಘಗಳನ್ನು ಭದ್ರಗೊಳಿಸುವುದೇ ವಿವಿಧ ಪ್ರಾಂತ್ಯ ಸರ್ಕಾರಗಳಿಗೆ ಮುಖ್ಯ ಕರ್ತವ್ಯವಾಯಿತು. ಈ ಸಮಯದಲ್ಲಿ ಭಾರತದ ರಿಸರ್ವ್ ಬ್ಯಾಂಕ್ ೧೯೩೫ ಏಪ್ರಿಲ್ ೧ರಂದು ಸ್ಥಾಪನೆಗೊಂಡಿತು. ಹಾಗೂ ಈ ಬ್ಯಾಂಕಿನಲ್ಲಿ ವ್ಯವಸಾಯ ಸಾಲ ವಿಭಾಗವು ಪ್ರಾರಂಭವಾಯಿತು. ಆರ್ಥಿಕ ಮುಗ್ಗಟ್ಟು ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದರಿಂದ ಸಹಕಾರ ಚಳವಳಿಯ ಕಾರ್ಯ ಚಟುವಟಿಕೆ ಚೇತರಿಸಿಕೊಳ್ಳತೊಡಗಿತು.

೧೯೩೯ ರಿಂದ ೧೯೪೫ ರವರೆಗಿನ ಸಹಕಾರ ಚಳವಳಿ

ಎರಡನೆಯ ಮಹಾಯುದ್ಧ ಪ್ರಾರಂಭವಾದ ನಂತರ ದೇಶದ ಆರ್ಥಿಕ ಸ್ಥಿತಿ ಬದಲಾಯಿಸಿತು. ಹೆಚ್ಚಿನ ಹಣದ ಉಬ್ಬರದಿಂದಾಗಿ ದುಡ್ಡಿನ ಮುಗ್ಗಟ್ಟು ಕಡಿಮೆಯಾಯಿತು. ಪದಾರ್ಥಗಳ ಬೆಲೆ ಏರತೊಡಗಿದವು. ವ್ಯವಸಾಯಗಾರರು ತಾವು ಹಿಂದೆ ಮಾಡಿಕೊಂಡಿದ್ದ ಸಾಲಗಳನ್ನು ತೀರಿಸತೊಡಗಿದರು. ಇದರಿಂದಾಗಿ ಸಹಕಾರ ಸಂಘಗಳ ಸ್ಥಿತಿ ಉತ್ತಮಗೊಂಡಿತು. ಸುಸ್ತಿಯಲ್ಲಿ ನಿಂತಿದ್ದ ಸಾಲಗಳು ಕಡಿಮೆಯಾಗಿದ್ದರ ಜೊತೆಗೆ ಸಾಲದ ಬೇಡಿಕೆ ಸಹ ಮೊದಲಿಗಿಂತ ಕಡಿಮೆಯಾಯಿತು. ಅಪೆಕ್ಸ್ ಬ್ಯಾಂಕುಗಳಿಗೂ ಸಹ ಪ್ರಾಥಮಿಕ ಸಹಕಾರ ಸಂಘಗಳಿಂದ ಬರಬೇಕಾದ ಬಾಕಿಗಳು ಬರತೊಡಗಿ ಅವುಗಳ ಸ್ಥಿತಿ ಉತ್ತಮಗೊಂಡವು.

ಎರಡನೇ ಮಹಾಯುದ್ಧದ ಕಾಲದಲ್ಲಿ ಬೆಲೆಗಳು ಏರತೊಡಗಿದವು. ಅವಶ್ಯ ವಸ್ತುಗಳ ಆಮದು ಕಡಿಮೆಯಾದುದರಿಂದಲೂ ಮತ್ತು ಇನ್ನಿತರ ಕಾರಣಗಳಿಗಾಗಿ ಅನೇಕ ದಿನಚರಿ ಬಳಕೆಯ ವಸ್ತುಗಳ ಮೇಲೆ ಸರ್ಕಾರ ನಿಯಂತ್ರಣ ವಿಧಿಸಿತು. ನಿಯಂತ್ರಣಕ್ಕೆ ಒಳಪಟ್ಟು ಆಹಾರ ಧಾನ್ಯಗಳು, ಸೀಮೆಎಣ್ಣೆ, ಬಟ್ಟೆ ಇತ್ಯಾದಿ ಸಾಮಗ್ರಿಗಳನ್ನು ಹಂಚಲು ಸಹಕಾರ ಸಂಘಗಳಿಗೆ ಆದ್ಯತೆ ಕೊಡಲಾಯಿತು. ಇದರಿಂದ ಅನೇಕ ಕಡೆ ಮುಚ್ಚಿದ ಸಹಕಾರ ಸಂಘಗಳು ಕೆಲಸ ಮಾಡಲು ಪ್ರಾರಂಭಮಾಡಿದವು. ಅಲ್ಲದೆ ಅನೇಕ ಹೊಸ ಸಹಕಾರ ಸಂಘಗಳು ಪ್ರಾರಂಭವಾದವು. ಸಹಕಾರ

ಸಂಘಗಳ ಬಂಡವಾಳ ಮತ್ತು ಸದಸ್ಯರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಸಹಕಾರ ಚಳವಳಿ ಅಭಿವೃದ್ಧಿ ಹೊಂದತೊಡಗಿತು.

ಕ್ರಿ.ಶ. ೧೯೪೪ ರಲ್ಲಿ ಇಂಡಿಯಾ ಸರ್ಕಾರ ಒಂದು ಸಮಿತಿಯನ್ನು ಶ್ರೀ ಡಿ.ಆರ್. ಗಾಡ್ಗೀಲ್‌ರ ಅಧ್ಯಕ್ಷತೆಯಲ್ಲಿ ನೇಮಿಸಿತು. ಈ ಸಮಿತಿ ಪ್ರತಿ ಪ್ರಾಂತ್ಯದಲ್ಲೂ ಒಂದು ವ್ಯವಸಾಯ ಸಾಲದ ನಿಗಮ ಸ್ಥಾಪಿಸಲು ಶಿಫಾರಸು ಮಾಡಿತು. ಸರ್ಕಾರವಾದರು ಈ ದಿಕ್ಕಿನಲ್ಲಿ ಆಸಕ್ತಿ ತೋರಿಸದೆ ಹೋದುದರಿಂದ ಈ ಸಮಿತಿ ಶಿಫಾರಸುಗಳಂತೆ ಹೆಚ್ಚಿನ ಬದಲಾವಣೆಗಳು ಯಾವುವೂ ಆಗಲಿಲ್ಲ.

ಕ್ರಿ.ಶ. ೧೯೪೫ ರಲ್ಲಿ ಇಂಡಿಯಾ ಸರ್ಕಾರ ಶ್ರೀ ಸರಯ್ಯರವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಿಸಿ ದೇಶಕ್ಕೆ ಒಂದು ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಯನ್ನು ತಯಾರು ಮಾಡುವಂತೆ ಕೇಳಿತು. ಈ ಸಮಿತಿ ಕ್ರಿ.ಶ. ೧೯೪೬ ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ಸಮಿತಿ ಪ್ರಾಥಮಿಕ ಸಹಕಾರ ಸಂಘಗಳು - ಮಾರಾಟ ಸಹಕಾರ ಸಂಘಗಳು, ಮುಂತಾದ ನಾನಾ ರೀತಿಯ ಸಹಕಾರ ಸಂಘಗಳನ್ನು ಪುನರುಜ್ಜೀವನಗೊಳಿಸಿ ಅವುಗಳನ್ನು ಹೆಚ್ಚು ಯಶಸ್ವಿಯಾಗಿ ಮಾಡುವ ಬಗ್ಗೆ ಅನೇಕ ಶಿಫಾರಸುಗಳನ್ನು ಮಾಡಿತು. ಈ ಸಮಿತಿಗಳು ನೀಡಿದ ಸಲಹೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸ್ವತಂತ್ರ ಸಂಗ್ರಾಮದ ಹೋರಾಟ ಅಡಚಣೆಯೊಡ್ಡಿತು.

ಭಾರತ ಸರ್ಕಾರ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾರಂಭ ಮಾಡಿದ ಮೇಲೆ ಸಹಕಾರ ಚಳವಳಿಗೆ ನವಚೈತನ್ಯ ದೊರೆಯಿತು. ಸರ್ಕಾರವು ಸಹಕಾರ ಚಳವಳಿಯಿಂದಲೆ ಜನರ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಅರಿತು ಪ್ರತಿ ಪಂಚವಾರ್ಷಿಕ ಯೋಜನೆಯಲ್ಲಿ ಒಂದೊಂದು ತಜ್ಞ ಸಮಿತಿ ನೇಮಿಸಿ ಸಮಿತಿ ಕೊಟ್ಟ ಸಲಹೆಗಳನ್ನು ಕಾರ್ಯಾಚರಣೆಗೆ ತರಲು ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಿತು. ಇದರಿಂದ ದೇಶದಲ್ಲಿ ಸಹಕಾರ ಚಳವಳಿ ಹೆಚ್ಚು ಪ್ರಗತಿ ಹೊಂದಲು ಅವಕಾಶವಾಯಿತು. ಹೀಗೆ ಭಾರತದೇಶದಲ್ಲಿ ಸಹಕಾರ ಚಳವಳಿ ವಿವಿಧ ಹಂತಗಳಲ್ಲಿ ಬೆಳೆದು ಬಂದಿತು.

ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಹಕಾರ ಚಳವಳಿ ಅಭಿವೃದ್ಧಿ

ರಾಷ್ಟ್ರದ ಯೋಜನೆಗಳಲ್ಲಿ ಸಹಕಾರಕ್ಕೆ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಸಹಕಾರವನ್ನು ಯೋಜನೆ, ಅಭಿವೃದ್ಧಿ ಹಾಗೂ ಸಾಮಾಜಿಕ ಅಭಿವೃದ್ಧಿಯ ಬುನಾದಿ ಎಂದು ಪರಿಗಣಿಸಲಾಗಿದೆ. ಸಹಕಾರ ಯೋಜನಾ ಸಮಿತಿಯು ಆರ್ಥಿಕ ಯೋಜನೆಯನ್ನು ಪ್ರಜಾಸತ್ತಾತ್ಮಕವಾಗುವುದಕ್ಕೆ ಸೂಕ್ತ ಮಾಧ್ಯಮವಾಗಿದ್ದು ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಅದು ಸ್ಥಳೀಯ ಸಂಸ್ಥೆಯಾಗಿ ಯೋಜನೆಯ ಪರವಾಗಿ ಸಾರ್ವಜನಿಕ ಅಭಿಪ್ರಾಯಕ್ಕೆ ಶಿಕ್ಷಣ ನೀಡುವ ಹಾಗೂ ಕಾರ್ಯಗತ ಕೈಗೊಳ್ಳುವ ಮಹತ್ವದ ಕಾರ್ಯಗಳನ್ನು ಪೂರೈಸುತ್ತದೆ.

ಪ್ರಥಮ ಪಂಚವಾರ್ಷಿಕ ಯೋಜನೆ :

೧೯೫೦-೫೧ರಲ್ಲಿ ಅನುಷ್ಠಾನಗೊಳಿಸಲಾದ ಪ್ರಥಮ ಪಂಚವಾರ್ಷಿಕ ಯೋಜನೆಯು ಸಹಕಾರ ಆಂದೋಲನವನ್ನು ಯೋಜಿತ ಕಾರ್ಯಕ್ರಮದ ಅವಿಭಾಜ್ಯ ಅಂಗವೆಂದು ವರ್ಣಿಸಿದೆ. ಪ್ರಥಮ ಯೋಜನೆಯು ಸಹಕಾರದ ಮೂಲವಾದ ಪರಸ್ಪರ ಸಹಾಯಕತ್ವ ಪೂರಕವಾದ ಸ್ವಸಹಾಯ ಮತ್ತು ಉಳಿತಾಯ ಮನೋಭಾವನೆಗಳೊಂದಿಗೆ ಸಹಕಾರವು ರಚನಾತ್ಮಕ ಮಾದರಿಯ ಜೀವನದಲ್ಲಿ ಸ್ವಾವಲಂಬನೆಯ ಗಾಢವಾದ ಭಾವನೆಯನ್ನು ನಿರ್ಮಿಸುತ್ತದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಕ್ಕೆ ಸಂಬಂಧಿಸಿದ ಪ್ರಮುಖ ಲಕ್ಷಣಗಳು ಹೀಗಿವೆ:

೧. ಪ್ರಜಾಸತ್ತಾತ್ಮಕ ಯೋಜನೆಯ ಸಾಧನವಾಗಿ ಪರಸ್ಪರ ಸಹಾಯ ಸಾಮಾಜಿಕ ಉದ್ದೇಶಗಳನ್ನೊಳಗೊಂಡ ಸಹಕಾರ ಪ್ರಥಮ ಯೋಜನೆಯ ಅನುಷ್ಠಾನ ಕಾರ್ಯಕ್ರಮಗಳ ಆವಶ್ಯಕ ಲಕ್ಷಣವಾಗಿದೆ.

೨. ಗ್ರಾಮಮಟ್ಟದಲ್ಲಿ ಸಹಕಾರ ಸಂಸ್ಥೆಗಳು ಪಂಚಾಯಿತಿಗಳೊಂದಿಗೆ ನಿಕಟ ಸಂಬಂಧ ಹೊಂದಿರಬೇಕು.

೩. ಸದಸ್ಯರ ವಿವಿಧೋದ್ದೇಶಗಳನ್ನು ಪೂರೈಸುವುದಕ್ಕೋಸ್ಕರ ಪ್ರತಿಯೊಂದು ಗ್ರಾಮದಲ್ಲಿ ಒಂದು ಸಹಕಾರ ಸಂಘವನ್ನು ಹೊಂದುವ ಪ್ರಯತ್ನ ಆಗಬೇಕು.

೪. ಸಹಕಾರ ಯೋಜನಾ ಸಮಿತಿಯು ಗೊತ್ತುಪಡಿಸಿದಂತೆ ಐವತ್ತರಷ್ಟು ಗ್ರಾಮಗಳು ಹಾಗೂ ಶೇಕಡ ೩೦ರಷ್ಟು ಗ್ರಾಮೀಣ ಜನತೆಯನ್ನು ಆಧರಿಸುವ ಗುರಿಯನ್ನು ೧೯೫೫-೫೬ರ ಹೊತ್ತಿಗೆ ಸಾಧಿಸಬೇಕು.

೫. ವ್ಯವಸಾಯ ಉತ್ಪಾದನೆಗಾಗಿ ಸಹಕಾರ ಕ್ಷೇತ್ರವು ದೀರ್ಘಾವಧಿ ಸಾಲ ೧೩೦ ಕೋಟಿ ರೂಪಾಯಿ, ೧೦೦ ಕೋಟಿ ರೂಪಾಯಿ ಅಲ್ಪಾವಧಿ ಸಾಲ, ಹಾಗೂ ೨೫ ಕೋಟಿ ರೂಪಾಯಿಗಳ ಮಧ್ಯಮಾವಧಿ ಸಾಲ ನೀಡುವಂತಾಗಬೇಕು.

೬. ರಾಜ್ಯವು ಸಹಕಾರ ಬೇಸಾಯ-ಸಂಘಗಳ ರಚನೆಗೆ ಉತ್ತೇಜನ ನೀಡಬೇಕು.

೭. ಸಹಕಾರ ಕ್ಷೇತ್ರದ ಪುರೋಭಿವೃದ್ಧಿಗೆ ಸಾಕಷ್ಟು ತರಬೇತಿ ಹೊಂದಿದ ಸಿಬ್ಬಂದಿಯ ಅಗತ್ಯತೆಯ ಬಗ್ಗೆ ಪ್ರತಿಪಾದಿಸಬೇಕಾಗಿದೆ.

೮. ರೈತರಿಗೆ ಅವರು ಬೆಳೆದ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿ ಕೊಡುವ ಸಹಕಾರ-ಮಾರಾಟವನ್ನು ಅಭಿವೃದ್ಧಿಗೊಳಿಸುವ ಅಗತ್ಯತೆ ಯನ್ನು ಒತ್ತಿ ಹೇಳಲಾಗಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆ : ೧೯೫೫-೬೦

ವಿವಿಧ ರಾಜ್ಯಗಳಲ್ಲಿ ವ್ಯವಸಾಯ ಪತ್ತು ಮತ್ತು ಮಾರಾಟ ಕುರಿತಂತೆ ಸಹಕಾರದ ಅಭಿವೃದ್ಧಿಯ ಬಗ್ಗೆ ಕಾರ್ಯ ಯೋಜನೆಗಳನ್ನು ಸಿದ್ಧಪಡಿಸಲಾಯಿತು. ದ್ವಿತೀಯ ಯೋಜನೆಯಲ್ಲಿ ಈ ಕೆಳಗಿನವುಗಳ ಬಗ್ಗೆ ವಿಶೇಷವಾದ ಗಮನ ನೀಡಲಾಯಿತು.

೧. ದೊಡ್ಡ ಪ್ರಮಾಣದ ಸಂಘಗಳ ಸ್ಥಾಪನೆ.

೨. ಪ್ರತಿಯೊಂದು ಜಿಲ್ಲೆಯಲ್ಲಿ ಸಶಕ್ತ ಕೇಂದ್ರ ಸಹಕಾರ ಬ್ಯಾಂಕನ್ನು ಸ್ಥಾಪಿಸುವ ದೃಷ್ಟಿಯಿಂದ ಸಹಕಾರ ಬ್ಯಾಂಕಿಂಗ್ ಕ್ಷೇತ್ರದ ಧ್ರುವೀಕರಣ.

೩. ಪ್ರಾಥಮಿಕ ಮಾರಾಟ ಸಂಘಗಳ ಸಂಘಟನೆ ಅಥವಾ ಪುನರ್ ಸಂಘಟನೆ.

೪. ಕೇಂದ್ರ ಭೂ ಅಡಮಾನ ಬ್ಯಾಂಕುಗಳು ಇಲ್ಲದ ರಾಜ್ಯಗಳಲ್ಲಿ ಅವುಗಳ ಸ್ಥಾಪನೆ.

೫. ರೂಪಾಂತರ ಚಟುವಟಿಕೆಗಳಿಗೆ ಪ್ರೋತ್ಸಾಹ ಹಾಗೂ ಈ ಉದ್ದೇಶಕ್ಕಾಗಿ ಪ್ರತ್ಯೇಕ ಸಂಘಗಳ ಸ್ಥಾಪನೆ.

೬. ಲೆಕ್ಕ ತಪಾಸಣೆ ಹಾಗೂ ಇತರೆ ಶಾಸನಾತ್ಮಕ ಕಾರ್ಯಗಳಿಗೆ ಸುಧಾರಣೆ ತರುವುದಕ್ಕೋಸ್ಕರ ಇಲಾಖೆ ಹಾಗೂ ಸಾಂಸ್ಥಿಕ ಸಿಬ್ಬಂದಿಗಳ ಬಲವರ್ಧನೆ.

೭. ರಾಜ್ಯ ಹಾಗೂ ರಾಷ್ಟ್ರೀಯ ಖ್ಯಾತಿಯ ಮಾರಾಟ ಕೇಂದ್ರಗಳಲ್ಲಿ ಉಗ್ರಾಣದ ಸೌಲಭ್ಯಗಳನ್ನು ಹೆಚ್ಚಿಸಲು ಕೇಂದ್ರ ಹಾಗೂ ರಾಜ್ಯ ಉಗ್ರಾಣ ಕೇಂದ್ರಗಳ ಸ್ಥಾಪನೆ.

೮. ರಾಜ್ಯಮಟ್ಟದಲ್ಲಿ ಪರಿಹಾರ ಹಾಗೂ ಭರವಸೆಯ ನಿಧಿಯ ಸ್ಥಾಪನೆ.

೯. ಸಹಕಾರ ಇಲಾಖೆ : ಸಂಸ್ಥೆಗಳಲ್ಲಿನ ಸಿಬ್ಬಂದಿ ತರಬೇತಿ ನೀಡಲು ಹಾಗೂ ಸಂಘಗಳ ಸದಸ್ಯರು ಮತ್ತು ಪದಾಧಿಕಾರಿಗಳಿಗೆ ಶಿಕ್ಷಣ ವ್ಯವಸ್ಥೆ ಮಾಡುವುದು ಇವೇ ಮುಂತಾದವು ಮುಖ್ಯ ವಾಗಿದ್ದವು.

ತೃತೀಯ ಪಂಚವಾರ್ಷಿಕ ಯೋಜನೆ : ೧೯೬೧-೬೬

ಮೂರನೆಯ ಪಂಚವಾರ್ಷಿಕ ಯೋಜನೆಯು ಪ್ರಮುಖವಾಗಿ ಈ ಕೆಳಗಿನ ಉದ್ದೇಶಗಳನ್ನು ಹೊಂದಿತ್ತು.

೧. ೩ನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಸಹಕಾರ ಪತ್ತಿನ ಕ್ಷೇತ್ರವು ಎಲ್ಲಾ ಗ್ರಾಮಗಳನ್ನು ಹಾಗೂ ಶೇಕಡ ೬೦ ರೈತ ಜನಾಂಗವನ್ನು ಒಳಗೊಂಡಿರಬೇಕು.

೨. ರಾಜ್ಯ ಸರ್ಕಾರವು ಎಲ್ಲಾ ಹಂತಗಳಲ್ಲಿ ಪಾಲ್ಗೊಳ್ಳಬೇಕು. ಪ್ರಾಥಮಿಕ ಹಂತದಲ್ಲಿ ಸದಸ್ಯರ ವಂತಿಗೆಗೆ ಸರಿಸಮಾನವಾದ ರೀತಿಯಲ್ಲಿ ರಾಜ್ಯ ಪಾಲುಗಾರಿಕೆಗೆ ಗರಿಷ್ಟ ೫೦೦೦ ರೂಪಾಯಿಗಳಾಗಿರತಕ್ಕದ್ದು.

೩. ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘಗಳನ್ನು ಸ್ವಾಯತ್ತ ಘಟಕಗಳನ್ನಾಗಿಸುವ ಆಡಳಿತ, ಇತ್ಯಾದಿ.

೪. ಸಹಕಾರ ಪತ್ತಿಗೆ ಸಂಬಂಧಿಸಿದಂತೆ ೫೩೦ ಕೋಟಿ ರೂಪಾಯಿಗಳ ಅಲ್ಪಾವಧಿ ಮಧ್ಯಮಾವಧಿ ಸಾಲ ನೀಡಿಕೆ.

೫. ಸಹಕಾರ ಮಾರಾಟ ಮತ್ತು ರೂಪಾಂತರ ಹಾಗೂ ಪತ್ತು ಮತ್ತು ಮಾರಾಟ ಸಂಯೋಜನೆಗೆ ಉತ್ತೇಜನ.

೬. ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆವಶ್ಯಕ ಸರಕುಗಳ ವಿತರಣೆ, ಗ್ರಾಹಕರ ಸಹಕಾರ ಸಂಘಗಳಿಂದಾಗಬೇಕು.

೭. ಸಹಕಾರ ತಳಹದಿಯ ಮೇಲೆ ಚಿಕ್ಕ ಉದ್ದಿಮೆಗೆ ಪ್ರೋತ್ಸಾಹ.

೮. ವಿವಿಧ ಹಂತಗಳಲ್ಲಿ ಸಹಕಾರ ಇಲಾಖೆಯ ಸಿಬ್ಬಂದಿಯ ಬಲವರ್ಧನೆ.

೯. ಬೆಳೆಯುತ್ತಿರುವ ಸಹಕಾರ ಶಿಕ್ಷಣ ಮತ್ತು ತರಬೇತಿಯ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಲು ರಾಜ್ಯ ಮತ್ತು ಜಿಲ್ಲಾ ಸಹಕಾರ ಯೂನಿಯನ್‌ಗಳನ್ನು ಬಲಪಡಿಸಬೇಕು.

೧೦. ಸಾಲ ನೀಡದ ಸಹಕಾರ ಸಂಘಗಳಾದ ಗೃಹ ನಿರ್ಮಾಣ, ಬೇಸಾಯ, ಮೀನುಗಾರಿಕೆ ಹಾಗೂ ಹಾಲಿನ ಸಂಘಗಳನ್ನು ಕುರಿತಂತೆ ವಿಸ್ತೃತ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆ : ೧೯೬೯-೧೯೭೪

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ, ಸಹಕಾರ ಕ್ಷೇತ್ರದ ಸ್ಥಿರತೆ ಹಾಗೂ ಬೆಳವಣಿಗೆ ಉದ್ದೇಶ ಹೊಂದಲಾಗಿತ್ತು. ಸಹಕಾರ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ವ್ಯವಸಾಯ ಸಂಘಗಳು ಹಾಗೂ ಗ್ರಾಹಕರ ಸಂಘಗಳಿಗೆ ಕೇಂದ್ರ ಸ್ಥಾನವನ್ನು ನೀಡಲಾಗಿತ್ತು. ಬಹುಮಟ್ಟಿಗೆ ರೈತರಿಗೆ ಬೇಕಾಗುವ ಸೇವಾ ಸೌಲಭ್ಯಗಳನ್ನು ಸಾಂಸ್ಥೀಕರಣಗೊಳಿಸುವ ಪರಿಕಲ್ಪನೆಯನ್ನು ತನ್ನದಾಗಿಸಿಕೊಂಡಿತು. ಯೋಜನೆಯ ಗುರಿಯು ಎಲ್ಲಾ ಗ್ರಾಮಗಳು ಹಾಗೂ ೩/೪ ರಷ್ಟು ಜನತೆಯನ್ನು ಸಹಕಾರಿ ಕಕ್ಷೆಯಲ್ಲಿ ಅಳವಡಿಸಿಕೊಳ್ಳುವುದು.

ಸಹಕಾರ ಮತ್ತು ವ್ಯವಸ್ಥೆಯ ಮೂಲಭೂತ ಸಮಸ್ಯೆ ದೊಡ್ಡ ಸಂಖ್ಯೆಯ ಅಶಕ್ತ ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘಗಳನ್ನು ಹೊಂದಿರುವುದಾಗಿತ್ತು. ೪ನೇ ಯೋಜನೆಯ ಮಹತ್ವದ ಕಾರ್ಯ ಪ್ರಾಥಮಿಕ ವ್ಯವಸಾಯ ಪತ್ತು ವ್ಯವಸ್ಥೆಯನ್ನು ಪುನರ್ಘಟಿಸಿ ಸಶಕ್ತ ಘಟಕಗಳನ್ನಾಗಿಸುವುದು. ಅಶಕ್ತ ಕೇಂದ್ರ ಸಹಕಾರ ಬ್ಯಾಂಕುಗಳ ಪುನರುಜ್ಜೀವನ, ಸುಸ್ತಿಸಾಲಗಳ ಮಿತಗೊಳಿಸುವಿಕೆ ಹಾಗೂ ಠೇವು ಸಂಗ್ರಹಣೆ ಆಗಿತ್ತು. ನಾಲ್ಕನೇ ಯೋಜನೆಯ ಅಂತ್ಯಕ್ಕೆ ೭೫೦ ಕೋಟಿ ರೂಪಾಯಿಗಳ ಅಲ್ಪಾವಧಿ, ಮಧ್ಯಮಾವಧಿ ಸಾಲ ಹಾಗೂ ೭೦೦ ಕೋಟಿ ರೂಪಾಯಿಗಳ ದೀರ್ಘಾವಧಿ ಸಾಲ ಪೂರೈಕೆಯ ಗುರಿ ಇಟ್ಟುಕೊಳ್ಳಲಾಗಿತ್ತು.

ನಾಲ್ಕನೇ ಯೋಜನೆ ಮುಖ್ಯ ಪ್ರಯತ್ನ, ಪತ್ತಿನ ಸಹಕಾರ ಸಂಘಗಳ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳ ನೀತಿ ಧೋರಣೆಗಳನ್ನು ಸಣ್ಣ ರೈತರತ್ತ ಕೇಂದ್ರೀಕರಿಸುವುದಾಗಿತ್ತು. ಈ ಹಿನ್ನಲೆಯಲ್ಲಿ ಈ ಸಂಸ್ಥೆಗಳ ಸಾಲ ನೀಡುವ ನೀತಿಗಳಲ್ಲಿ ಈ ಕೆಳಗಿನ ಗಮನಾರ್ಹ ಬದಲಾವಣೆಗಳು ಕಂಡುಬಂದವು.

೧. ಒಂದು ಸಂಘದಲ್ಲಿ ಲಭ್ಯವಿರುವ ಸಂಪನ್ಮೂಲಗಳು ಎಲ್ಲಾ ಸದಸ್ಯರ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗದೇ ಇದ್ದಾಗ ಆದ್ಯತೆಯ ಮೇಲೆ ಸಂಘವು ಸಣ್ಣ ರೈತರ ಆವಶ್ಯಕತೆಗಳನ್ನು ಪೂರೈಸುವ ಭರವಸೆ ನೀಡಬೇಕು.

೨. ದೊಡ್ಡ ರೈತರು ಶೇರು ಬಂಡವಾಳಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವಂತಿಗೆ ಸಲ್ಲಿಸಲು ಕೋರುವುದು.

೩. ಭೂ ಅಭಿವೃದ್ಧಿ ಬ್ಯಾಂಕುಗಳು ಸಣ್ಣ ರೈತರಿಗೆ ನೀಡುವ ದೀರ್ಘಾವಧಿ ಸಾಲಗಳ ಮರುಪಾವತಿ ಅವಧಿಯನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ರೂಪಿಸುವುದು.

ಐದನೆಯ ಪಂಚವಾರ್ಷಿಕ ಯೋಜನೆ : ೧೯೭೪-೧೯೭೯

ಈ ಯೋಜನೆಯಲ್ಲಿ ಸಶಕ್ತ ಸಹಕಾರ ಕ್ಷೇತ್ರದ ನಿರ್ಮಾಣ ಹಾಗೂ ರೈತರ, ಕಾರ್ಯಕರ್ತರ, ಗ್ರಾಹಕರ ಆವಶ್ಯಕತೆಗಳಿಗೆ ಒತ್ತು ಕೊಡುವುದು ರಾಷ್ಟ್ರೀಯ ನೀತಿಯ ಪ್ರಮುಖ ಉದ್ದೇಶವಾಗಿತ್ತು. ಐದನೆಯ ಯೋಜನೆಯು ಸಹಕಾರ ಅಭಿವೃದ್ಧಿ ಕುರಿತು ನಾಲ್ಕು ವಿಶಿಷ್ಟ ಉದ್ದೇಶಗಳನ್ನು ಹೊಂದಿತ್ತು.

೧. ವ್ಯವಸಾಯ - ಸಹಕಾರ ಸಂಘಗಳ (ಪತ್ತು, ಪೂರೈಕೆ ಮಾರಾಟ ಮತ್ತು ರೂಪಾಂತರ) ಜಾಲವನ್ನು ಬಲಪಡಿಸುವುದು.

೨. ಗ್ರಾಹಕ ಕೇಂದ್ರೀಕೃತ - ವಿತರಣಾ ವ್ಯವಸ್ಥೆಯಲ್ಲಿನ ಪ್ರಮುಖ ಸಾಧನಗಳಾಗಿ ಸಶಕ್ತ ಗ್ರಾಹಕ ಸಹಕಾರ ಕ್ಷೇತ್ರದ ನಿರ್ಮಾಣ.

೩. ವಿಶೇಷವಾಗಿ ಸಹಕಾರ ಪತ್ತು ಕ್ಷೇತ್ರದಲ್ಲಿರುವ ಪ್ರಾದೇಶಿಕ ಅಸಮತೋಲಗಳನ್ನು ನಿವಾರಿಸುವುದು.

೪. ಸಣ್ಣ, ಅತಿ ಸಣ್ಣ ರೈತರು ಹಾಗೂ ಸಮಾಜದ ದುರ್ಬಲ ವರ್ಗದವರ ಸೇವೆಯಲ್ಲಿ ನಿರತವಾಗುವ ಸಹಕಾರ ಸಂಘಗಳ ಚಟುವಟಿಕೆಗಳನ್ನು ಪೂರೈಸುವುದು.

ಆರನೆಯ ಪಂಚವಾರ್ಷಿಕ ಯೋಜನೆ : ೧೯೮೦-೧೯೮೫

ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕಂಡುಬಂದ ಸಮಸ್ಯೆಗಳು ಹಾಗೂ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು, ಆರನೆಯ ಯೋಜನೆಯಲ್ಲಿ ಈ ಕೆಳಗಿನ ಕಾರ್ಯಗಳಿಗೆ ವಿಶೇಷ ಗಮನ ನೀಡಲಾಯಿತು.

೧. ಸದಸ್ಯರ ವಿಭಿನ್ನ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಗ್ರಾಮ ಮಟ್ಟದ ಪ್ರಾಥಮಿಕ ಸಂಘಗಳನ್ನು ಪರಿಣಾಮಕಾರಿ ವಿವಿಧೋದ್ದೇಶ ಘಟಕಗಳನ್ನಾಗಿಸಲು ಕಾರ್ಯಯೋಜನೆಯ ಸಿದ್ಧತೆ.

೨. ಗ್ರಾಮೀಣ ಬಡಜನತೆಯ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸುವಂತಾಗಲು ಸಹಕಾರ ಸಂಘಗಳ ಪ್ರಯತ್ನಗಳು ಫಲಪ್ರದವಾಗಲು ಸಹಕಾರ ನೀತಿ-ಧೋರಣೆಗಳಲ್ಲಿ ಮರು ಪರಿಶೀಲನೆ.

೩. ಒಕ್ಕೂಟ ಸಂಸ್ಥೆಗಳ ಪುನಶ್ಚೇತನ-ಇದರಿಂದ ಅವುಗಳ ಸದಸ್ಯ ಘಟಕಗಳು ರಭಸದಿಂದ ಬೆಳೆಯುತ್ತಿರುವ ವ್ಯವಸಾಯ ಕ್ಷೇತ್ರ, ತೋಟಗಾರಿಕೆ, ಆಹಾರ ರೂಪಾಂತರ, ಕೋಳಿ ಸಾಕಾಣಿಕೆ, ಹೈನುಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆಗಳಿಗೆ ಅಗತ್ಯ ಮತ್ತು ಸಲಕರಣೆಗಳ ಪೂರೈಕೆ ಮಾರಾಟ ಹಾಗೂ ಇತರೆ ಸೌಲಭ್ಯಗಳ ಪೂರೈಕೆ.

೪. ನಿರ್ವಹಣಾ ಸ್ಥಾನಗಳ ವೃತ್ತಿಪರ ಶ್ರೇಣಿಗಳ ಅಭಿವೃದ್ಧಿ.

ಏಳನೆಯ ಪಂಚವಾರ್ಷಿಕ ಯೋಜನೆ : ೧೯೮೫-೯೦

ಏಳನೆಯ ಯೋಜನೆಯಲ್ಲಿ ಸಹಕಾರ ಅಭಿವೃದ್ಧಿಯು ಈ ಕೆಳಗಿನ ಕಾರ್ಯಗಳನ್ನು ಒಳಗೊಂಡಿರುತ್ತದೆ.

೧. ವಿವಿಧೋದ್ದೇಶ ಸಶಕ್ತ ಘಟಕಗಳಾಗಿ ಕಾರ್ಯ ಮಾಡುವಂತಾಗಲು ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘಗಳ ಪುರೋಭಿವೃದ್ಧಿ.

೨. ದುರ್ಬಲ ವರ್ಗದವರಿಗೆ ಪತ್ತು ಹಾಗೂ ಸಲಕರಣೆ ಪೂರೈಸುವಲ್ಲಿ ಆದ್ಯತೆ ನೀಡುವಂತೆ ನೀತಿ ಧೋರಣೆಗಳ ಹೊಂದಾಣಿಕೆ.

೩. ಉತ್ತರ ಪೂರ್ವ ಭಾರತದಲ್ಲಿನ ಅಭಿವೃದ್ಧಿ ಆಗದ ಕ್ಷೇತ್ರಗಳಲ್ಲಿ ವಿಶೇಷ ಸಹಕಾರ ಯೋಜನೆಗಳನ್ನು ಕಾರ್ಯಗತಗೊಳಿಸುವುದು.

೪. ಸಾರ್ವಜನಿಕ ವಿತರಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಹಕಾರ ಕ್ಷೇತ್ರವನ್ನು ಬಲಪಡಿಸುವುದು.

೫. ವೃತ್ತಿಪರ ಆಡಳಿತದ ಉತ್ತೇಜನ ಹಾಗೂ ಕಾರ್ಯಕ್ಷಮತೆ ಸುಧಾರಿಸುವಲ್ಲಿ ಪರಿಣಾಮಕಾರಿ ತರಬೇತಿಯ ಬಲವರ್ಧನೆ.

ಎಂಟನೆಯ ಪಂಚವಾರ್ಷಿಕ ಯೋಜನೆ : ೧೯೯೧-೯೫

ಎಂಟನೆಯ ಯೋಜನೆಯ ಪ್ರಣಾಳಿಕೆಯಲ್ಲಿ ಸಹಕಾರದ ಬಗ್ಗೆ ಹಾಗೂ ಸಹಕಾರ ಅಭಿವೃದ್ಧಿ ಕುರಿತು ವಿಶೇಷ ಪ್ರಸ್ತಾಪ ಮಾಡದಿದ್ದರೂ, ಬದಲಾದ ಆರ್ಥಿಕ ನೀತಿ ಧೋರಣೆಗಳ ಹಿನ್ನೆಲೆಯಲ್ಲಿ ಸಹಕಾರಕ್ಕೆ ಈ ಕೆಳಗಿನ ಕ್ಷೇತ್ರಗಳಲ್ಲಿ ಸಾಕಷ್ಟು ಅವಕಾಶಗಳಿವೆ.

೧. ವ್ಯವಸಾಯ-ವಿಶೇಷವಾಗಿ ವ್ಯವಸಾಯ ಪತ್ತು ಹಾಗೂ ಮಾರಾಟ.

೨. ವ್ಯವಸಾಯ ಆಧಾರಿತ ಉದ್ದಿಮೆಗಳ ಹಾಗೂ ಆಹಾರ ರೂಪಾಂತರ ಉದ್ದಿಮೆಗಳು.

೩. ಹೈನುಗಾರಿಕೆಯಲ್ಲಿ ಪಶು-ಸಂಗೋಪನೆ.

೪. ಬಡತನ ನಿರ್ಮೂಲನೆಯಲ್ಲಿ ಗ್ರಾಮೀಣ ಅಭಿವೃದ್ಧಿ.

೫. ಮಹಿಳೆಯರು.

೬. ನೀರಾವರಿ.

೭. ಪರಿಸರ ಸಂರಕ್ಷಣೆ.

೮. ಗ್ರಾಮೀಣ ಹಾಗೂ ಸಣ್ಣ ಉದ್ದಿಮೆಗಳು.

೯. ಗ್ರಾಮೀಣ ವಿದ್ಯುದೀಕರಣ.

೧೦. ಗುಡ್ಡುಗಾಡು ಜನರ ಅಭಿವೃದ್ಧಿ.

ಸಹಕಾರದ ಉಗಮ

೧೮ನೇ ಶತಮಾನದಲ್ಲಿ ಪ್ರಾರಂಭವಾದ (೧೭೬೦) ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದಾಗಿ ಸಹಕಾರವು ಇಂಗ್ಲೆಂಡ್ ದೇಶದಲ್ಲಿ ಪ್ರಥಮವಾಗಿ ಪ್ರಾರಂಭವಾಯಿತು. ಕೈಗಾರಿಕಾ ಕ್ರಾಂತಿಯ ಪರಿಣಾಮ ದಿಂದಾಗಿ ಹೊಸ ಹೊಸ ಯಂತ್ರಗಳ ಪರಿಶೋಧನೆಯಿಂದಾಗಿ, ಕಂಪನಿ ಪದ್ಧತಿ ಜಾರಿಗೆ ಬಂದಿತು. ಇಂತಹ ಕಂಪನಿಯ ಪ್ರಾರಂಭದಿಂದಾಗಿ, ಇಂಗ್ಲೆಂಡ್ ದೇಶದಲ್ಲಿ ನಿರುದ್ಯೋಗ ಸಮಸ್ಯೆ, ಬಡವ, ಬಲ್ಲಿದನೆಂಬ ಭೇದ ಭಾವನೆ ಆರಂಭವಾಯಿತು. ಪರಿಣಾಮ ಮಾಲೀಕ, ಕಾರ್ಮಿಕ ಎಂಬ ವರ್ಗ ನಿರ್ಮಾಣವಾಯಿತು. ಮಾಲೀಕರಿಂದ ಕಾರ್ಮಿಕ ಶೋಷಣೆ ಆರಂಭವಾಯಿತು. ಜನತೆಯ ಮಾನಸಿಕ ಶಾಂತಿ ಕದಡಿಹೋಗಿ, ಬಡತನ ಮತ್ತು ನಿರುದ್ಯೋಗಗಳ ಸಂಖ್ಯೆ ಹೆಚ್ಚಾಯಿತು. ಈ ಮೇಲಿನ ಕಾರಣ ಗಳಿಂದಾಗಿ ಸಮಾಜದಲ್ಲಿ ಅಶಾಂತಿ, ಅವ್ಯವಸ್ಥೆ, ಅಸ್ಥಿರತೆ ಕಾಣಿಸ ತೊಡಗಿದವು. ಇಂತಹ ಪರಿಸ್ಥಿತಿಯಲ್ಲಿ ಸಹಕಾರದ ಪಿತಾಮಹನಾದ ರಾಬರ್ಟ್ ಓವನ್ ಜನ್ಮ ತಾಳಿದನು.

ರಾಬರ್ಟ್ ಓವನ್

ಇವರು ೧೭೭೧ನೇ ಮೇ ೧೪ರಂದು ನ್ಯೂಟೌನ್‌ನಲ್ಲಿ ಜನ್ಮ ತಾಳಿದರು. ೯ನೇ ವಯಸ್ಸಿನಲ್ಲಿ ಹೊಟ್ಟೆಪಾಡಿಗಾಗಿ ಜವಳಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದರು. ಕೆಲವು ಕಾಲ ಅಲ್ಲಿದ್ದು ಮ್ಯಾಂಚೆಸ್ಟರ್ ಎಂಬ ಪಟ್ಟಣಕ್ಕೆ ಬಂದು ಅಲ್ಲಿ ಒಂದು ನೂಲಿನ ಗಿರಣಿಯಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿ ದುಡಿಯುವ ಕಾರ್ಮಿಕರ ಬದುಕು ಮಾನವನ ಬದುಕಾಗಿರಲಿಲ್ಲ. ಅಂದರೆ ಆ ರೀತಿಯಲ್ಲಿ ಮಾಲೀಕರು ಕಾರ್ಮಿಕರ ಶೋಷಣೆ ಮಾಡುತ್ತಿದ್ದರು.

ಕಾರ್ಮಿಕರಿಗೆ ಕೈ ತುಂಬಾ ಸಂಬಳ ದೊರೆಯಬೇಕು. ಬರಿದಾದ ಅವರ ಹೊಟ್ಟೆ ತುಂಬಬೇಕು. ಮಕ್ಕಳಿಗೆ ಶಿಕ್ಷಣ ದೊರೆಯಬೇಕು ಹಾಗೂ ಉತ್ತಮ ವಸತಿ ದೊರೆಯಬೇಕೆಂದು ತಾನು ಬಹುಕಾಲದಿಂದಲೂ ಕಾಣುತ್ತಿದ್ದ ಕನಸನ್ನು ನನಸಾಗಿಸುವ ಕಾಲ ಬಂದಿತು. ರಾಬರ್ಟ್ ಓವನ್ ಒಂದು ಕಂಪನಿಯ ಮಾಲೀಕನಾಗುವ ಸುದೈವ ಒದಗಿ ಬಂದಿತು. ಇವರು ಮಾಲೀಕರಾದ ಕೂಡಲೆ ಹಲವಾರು ನಿಯಮಗಳನ್ನು ಮಾಡಿದರು. ೧೦ ವರ್ಷದೊಳಗಿನ ಚಿಕ್ಕಮಕ್ಕಳು ದುಡಿಯುವುದನ್ನು ನಿಷೇಧಿಸಿದರು. ದುಡಿಯುವ ಅವಧಿಯನ್ನು ಕಡಿಮೆ ಮಾಡಿದನು. ಕಾರ್ಮಿಕರ ಮಕ್ಕಳಿಗಾಗಿ ಶಿಶುವಿಹಾರ ಸ್ಥಾಪಿಸಿದನು. ಯೋಗ್ಯ ಸಂಬಳ ಮಾಡಿದನು ಮತ್ತು ಗಳಿಸಿದ ಲಾಭವನ್ನು ಸಾರ್ವಜನಿಕ ಶಿಕ್ಷಣ ಮತ್ತು ಕಾರ್ಮಿಕರ ಕಲ್ಯಾಣಕ್ಕಾಗಿ ವ್ಯಯ ಮಾಡಿದನು.

ಓವನರ ಬಗ್ಗೆ ಜನರು ಮಹತ್ವ ನೀಡಲಿಲ್ಲ. ಉತ್ಪಾದಕರ, ಗ್ರಾಹಕರ ನಡುವಿನ ವ್ಯಕ್ತಿಗಳನ್ನು ಅವನು ಅಲ್ಲಗಳೆದನು. ಉತ್ಪಾದನೆ, ಹಂಚಿಕೆ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸಿದನು. ೧೯೫೮ರ ನವಂಬರ್ ೭ರಂದು ನಿಧನ ಹೊಂದಿದನು. ಓವನ್ ಪ್ರಥಮ ಸಹಕಾರಿ ಹಾಗೆಯೇ ಪ್ರಥಮ ಸಮಾಜವಾದಿ ಮತ್ತು ಕಾರ್ಮಿಕರ ಮುಖಂಡ ಮತ್ತು ನವಸಮಾಜದ ನಿರ್ಮಾಪಕ.

ಸಹಕಾರ ಸಂಘದ ಸ್ಥಾಪನೆ

ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಸಾಕಷ್ಟು ಬದಲಾವಣೆ ಗಳೊಂದಿಗೆ ಸಮಾಜದಲ್ಲಿ ಶೋಷಣೆ ಪ್ರಾರಂಭವಾಯಿತು. ಪರಿಣಾಮ ಕಾರ್ಮಿಕರು ತಮ್ಮ ಕಷ್ಟ ನಿರ್ವಹಣೆಗಾಗಿ ಅಲ್ಲಲ್ಲಿ ದೊಂಬಿ ನಡೆಸಿದರು. ಆದರೂ ಸಹ ಸರ್ಕಾರ ಅವರ ರಕ್ಷಣೆಗೆ ಬರಲಿಲ್ಲ. ಬಂಡವಾಳ ಶಾಹಿಗಳು, ಅವರ ಹೇಳಿಕೆಗೆ ಮನ್ನಣೆ ನೀಡಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ೧೮೪೪ರಲ್ಲಿ ಬ್ರಿಟನ್ನಿನ ರಾಕ್‌ಡೇಲ್ ಪಟ್ಟಣದ ನೇಕಾರರು ಮುಂದೇನು ಎಂದು ಯೋಚಿಸಿದರು ಹಾಗೂ ತಮ್ಮ ಕಷ್ಟ ನಿವಾರಣೆಗೆ ತಾವೇ ಮಾರ್ಗ ಕಂಡುಕೊಳ್ಳಲು ವಂತಿಗೆ ಎತ್ತಲು ಪ್ರಾರಂಭಿಸಿದರು. ಒಟ್ಟು ೨೮ಜನ

ನೇಕಾರರು ತಲಾ ಒಂದು ಪೌಂಡ್ ಸಂಗ್ರಹಿಸಿದರು. ನಂತರ ಸಹಕಾರ ಮಾರ್ಗ ಅನುಸರಿಸಿ, ೧೮೪೪ನೇ ಅಕ್ಟೋಬರ್ ೨೪ರಂದು ರಾಕ್‌ಡೇಲ್ ಸೊಸೈಟಿ ಆಫ್ ಈಕ್ವಿಟೇಬಲ್ ಪಯೋನಿರ್ಸ್ ಎಂಬ ಗ್ರಾಹಕರ ಸಂಘವನ್ನು ಸಂಘಟಿಸಿದರು. ೨೮ ಜನರ ಪೈಕಿ ಒಬ್ಬರು ಮಹಿಳೆ ಸಹ ಇದ್ದರು. ಈ ಸಂಘವನ್ನು ನಡೆಸಲು ಸಂಘದ ಸಂಸ್ಥಾಪಕರು ಕೆಲವು ನಿಯಮಗಳನ್ನು ರೂಪಿಸಿದರು. ಇವರು ರೂಪಿಸಿದ ನಿಯಮಗಳಿಂದ ೯ ವರ್ಷದಲ್ಲಿ ಆ ಸಂಸ್ಥೆ ಸಗಟು ಶಾಖೆಯನ್ನು, ೧೫ ವರ್ಷದಲ್ಲಿ ೬ ಶಾಖಾ ಅಂಗಡಿಗಳನ್ನು ಹಾಗೂ ೫೦ ಸಾವಿರ ಸದಸ್ಯರನ್ನು ಪಡೆಯುವಂತಾಯಿತು. ಇವರು ರೂಪಿಸಿದ ನಿಯಮಗಳು ಈಗ ಜಗತ್ತಿನಾದ್ಯಂತ ಸಹಕಾರ ತತ್ತ್ವಗಳಾಗಿ ಪರಿಣಮಿಸಿವೆ.

ಸಹಕಾರ ತತ್ತ್ವಗಳು

ಇಂಗ್ಲೆಂಡಿನಲ್ಲಿ ಗ್ರಾಹಕರ ಸಹಕಾರ ಸಂಘ ರೂಪಿಸಿದಂತ ನಿಯಮಗಳು ಗ್ರಾಹಕರ ಸಂಘಗಳಿಗೆ, ವ್ಯವಸಾಯ, ಹೈನುಗಾರಿಕೆ ಹಾಗೂ ಕೈಗಾರಿಕೆ ಮುಂತಾದ ಕ್ಷೇತ್ರಗಳಿಗೆ ಅನ್ವಯಿಸಿದವು. ಬೇರೆ ಬೇರೆ ರಾಷ್ಟ್ರಗಳಲ್ಲಿ ಅಲ್ಲಿಯ ಸ್ಥಾನಿಕ ಪರಿಸ್ಥಿತಿಗೆ ಅನುಗುಣವಾಗಿ ವಿವಿಧ ಪ್ರಕಾರದ ಸಂಘಗಳು ಅಸ್ತಿತ್ವದಲ್ಲಿ ಬಂದವು. ೧೮೯೫ ರಲ್ಲಿ ಸ್ಥಾಪಿಸಲ್ಪಟ್ಟ ಅಂತಾರಾಷ್ಟ್ರೀಯ ಸಹಕಾರ ಮೈತ್ರಿಕೂಟ ತನ್ನ ಸದಸ್ಯತ್ವವನ್ನು ಪಡೆಯಲು ಇಚ್ಛಿಸುವ ಸಹಕಾರಿ ಸಂಘಗಳು ರಾಕ್‌ಡೇಲ್ ತತ್ತ್ವಗಳನ್ನು ಪಾಲಿಸುತ್ತಿರಬೇಕೆಂದು ೧೯೨೧ ರಲ್ಲಿ ಕರಾರನ್ನು ಹಾಕಿತು. ಆಗ ಸಹಕಾರ ತತ್ತ್ವಗಳಾವುವು ಮತ್ತು ಅವುಗಳ ಕರ್ತವ್ಯವೇನು ಎಂಬ ಪ್ರಶ್ನೆಯ ಬಗ್ಗೆ ಸದಸ್ಯ ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯ ವಿದ್ದುದರಿಂದ ೧೯೩೧ ರಲ್ಲಿ ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ ಒಂದು ವಿಶೇಷ ಸಮಿತಿಯನ್ನು ನೇಮಿಸಿತು. ೧೯೩೪ ರಲ್ಲಿ ವರದಿ ಸಲ್ಲಿಸಲ್ಪಟ್ಟಿತು. ಈ ಸಮಿತಿಯ ವರದಿಯನ್ನು ೧೯೩೭ ರಲ್ಲಿ ಪ್ಯಾರಿಸ್ ಅಧಿವೇಶನದಲ್ಲಿ ಚರ್ಚಿಸಿ ಸಹಕಾರ ತತ್ತ್ವಗಳನ್ನು ಈ ಕೆಳಗಿನಂತೆ ಸ್ವೀಕರಿಸಲಾಯಿತು. ಅವುಗಳನ್ನು ಪ್ರಧಾನ ತತ್ತ್ವಗಳು ಮತ್ತು ಐಚ್ಛಿಕ ತತ್ತ್ವಗಳೆಂದು ವಿಂಗಡಿಸಲಾಯಿತು. ಅವುಗಳೆಂದರೆ,

ಪ್ರಧಾನ ತತ್ತ್ವಗಳು

೧. ಮುಕ್ತ ಮತ್ತು ಸ್ವಯಂಪ್ರೇರಿತ ಸದಸ್ಯತ್ವ

೨. ಪ್ರಜಾಸತ್ತಾತ್ಮಕ ಆಡಳಿತ

೩. ಷೇರು ಹಣದ ಮೇಲೆ ಪರಿಮಿತ ಬಡ್ಡಿ

೪. ಲಾಭ ಸಮಾನವಾಗಿ ಹಂಚಿಕೆ

ಐಚ್ಛಿಕ ತತ್ತ್ವಗಳು

೧. ಸಹಕಾರ ಶಿಕ್ಷಣ ಮತ್ತು ತರಬೇತಿ.

೨. ಧಾರ್ಮಿಕ ಮತ್ತು ರಾಜಕೀಯ ತಾಟಸ್ಥ್ಯ.

೩. ನಗದು ವ್ಯಾಪಾರ ಮಾತ್ರ.

೪. ಅಂದಿನ ಮಾರುಕಟ್ಟೆ ಬೆಲೆಗೆ ಉತ್ತಮ ವಸ್ತುಗಳ ಮಾರಾಟ.

೫. ಮಿತವ್ಯಯ ಸಾಧನೆ.

ಈ ಮೇಲಿನ ತತ್ತ್ವಗಳನ್ನು ಎಲ್ಲಾ ಪ್ರಕಾರವಾದ ಸಂಘಗಳಿಗೆ ಅನ್ವಯವಾಗುವುದು ಹಾಗು ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಸದಸ್ಯತ್ವಕ್ಕೆ ಅರ್ಹತೆ ಪಡೆಯಬೇಕಾದರೆ ಪ್ರಧಾನವಾದ ೪ ತತ್ತ್ವಗಳನ್ನು ಕಡ್ಡಾಯವಾಗಿ ಪಾಲಿಸುತ್ತಿರಬೇಕೆಂದು ತಿಳಿಸಲಾಯಿತು. ಐ.ಸಿ.ಎ. ಯು ೧೯೩೭ ರಲ್ಲಿ ಈ ತತ್ತ್ವಗಳನ್ನು ಪ್ರಕಟಿಸಿತ್ತು. ಆದರೆ ೧೯೩೯ ರಲ್ಲಿ ದ್ವಿತೀಯ ಜಾಗತಿಕ ಯುದ್ಧವಾದುದರಿಂದ ಜಗತ್ತಿನ ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿ ಸಾಕಷ್ಟು ಬದಲಾವಣೆಗಳಾದವು. ಈ ಬದಲಾದ ಸನ್ನಿವೇಶದಲ್ಲಿ ೧೯೩೭ ರ ಸಹಕಾರ ತತ್ತ್ವಗಳು ಎಷ್ಟರ ಮಟ್ಟಿಗೆ ಪ್ರಸ್ತುತ ಮತ್ತು ಅಪ್ರಸ್ತುತ ಎಂಬುದನ್ನು ಪುನರ್ ವಿಮರ್ಶಿಸಬೇಕಾದ ಅಗತ್ಯ ಕಂಡು ಬಂದಿತು. ಆದ್ದರಿಂದ ೧೯೬೪ ರಲ್ಲಿ ಸೇರಿದ ಅಧಿವೇಶನವು ಈ ವಿಷಯವನ್ನು ಚರ್ಚಿಸಿ, ಸಹಕಾರ ತತ್ವಗಳ ಪುನರ್ ವಿಮರ್ಶೆಗಾಗಿ ಒಂದು ತಜ್ಞ ಸಮಿತಿಯನ್ನು ನೇಮಿಸಲು ತೀರ್ಮಾನಿಸಿತು. ಈ ತಜ್ಞ ಸಮಿತಿಯಲ್ಲಿ ೫ ರಾಷ್ಟ್ರಗಳಿಂದ ಒಂದೊಂದು ರಾಷ್ಟ್ರದ ಒಬ್ಬೊಬ್ಬರು ಪ್ರತಿನಿಧಿಗಳು ಈ ಕೆಳಗಿನಂತೆ ಪ್ರತಿನಿಧಿಸಲ್ಪಟ್ಟರು.

ಇಂಗ್ಲೆಂಡಿನಿಂದ	ಎರನಾಲ್ಡ್ ಬ್ಯಾನರ್
ಅಮೇರಿಕದಿಂದ	ಹೋವರ್ಡ್ ಹೆಡನ್
ಜರ್ಮನಿಯಿಂದ	ಪ್ರೊ. ಆರ್. ಹೆಂಜಲ್
ಭಾರತದಿಂದ	ಪ್ರೊ. ಡಿ.ಜಿ. ಕಾರ್ವೆ
ರಷ್ಯದಿಂದ	ಪ್ರೊ. ಜಿ. ಬಂಡ್ಲಂಡ್

ಭಾರತ ದೇಶದ ಪ್ರತಿನಿಧಿಯಾದ ಪ್ರೊ. ಡಿ.ಜಿ. ಕಾರ್ವೆ ಅವರು ಈ ಸಮಿತಿಯ ಅಧ್ಯಕ್ಷರಾಗಿ ಒಮ್ಮತದಿಂದ ಚುನಾಯಿಸಲ್ಪಟ್ಟರು. ಈ ಸಮಿತಿಯು ೧೯೩೭ ರಲ್ಲಿ ರೂಪಿಸಿದ ಸಹಕಾರ ತತ್ವಗಳು, ಇಂದಿನ ಬದಲಾದ ಪರಿಸ್ಥಿತಿಗೆ ಎಷ್ಟರ ಮಟ್ಟಿಗೆ ಉಪಯುಕ್ತವಾಗಿದೆ ಹಾಗೂ ಅವುಗಳಲ್ಲಿ ಬದಲಾವಣೆಯ ಆವಶ್ಯಕತೆ ಇದೆಯೇ ಅಥವಾ ಹೊಸ ತತ್ವಗಳನ್ನು ರೂಪಿಸುವ ಆವಶ್ಯಕತೆ ಇದೆಯೇ ಎಂಬ ಅಂಶಗಳನ್ನು ಪರಿಶೀಲಿಸಿ ತನ್ನ ವರದಿಯನ್ನು ಐ.ಸಿ.ಎಂ. ಗೆ ಸಲ್ಲಿಸಿತು. ಈ ವರದಿಯನ್ನು ೧೯೬೬ ರಲ್ಲಿ ವಿಯನ್ನಾದಲ್ಲಿ ಸೇರಿದ ಅಧಿವೇಶನದಲ್ಲಿ ಚರ್ಚಿಸಿ ಈ ಕೆಳಗಿನಂತೆ ತತ್ತ್ವಗಳನ್ನು ಪ್ರಕಟಿಸಲಾಯಿತು.

೧. ಮುಕ್ತ ಸದಸ್ಯತ್ವ.

೨. ಪ್ರಜಾಸತ್ತಾತ್ಮಕ ಆಡಳಿತ.

೩. ಷೇರು ಬಂಡವಾಳದ ಮೇಲೆ ಪರಿಮಿತ ಬಡ್ಡಿ.

೪. ಉಳಿತಾಯದಲ್ಲಿ ಸಮನಾದ ಹಂಚಿಕೆ.

೫. ಸಹಕಾರ ಶಿಕ್ಷಣ.

೬. ಸಹಕಾರಿಗಳಲ್ಲಿ ಪರಸ್ಪರ ಸಹಕಾರ, ಇವುಗಳನ್ನು ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯಿಂದ ಪುನಃ ರೂಪಿಸಲ್ಪಟ್ಟ ಸಹಕಾರಿ ತತ್ತ್ವ ಎನ್ನುತ್ತಾರೆ.

೧೯೩೭ ರಲ್ಲಿ ರಚಿಸಲ್ಪಟ್ಟ ಸಹಕಾರ ತತ್ವಗಳಲ್ಲಿ ಒಟ್ಟು ೭ ತತ್ತ್ವಗಳಿದ್ದರೆ, ೧೯೬೬ ರಲ್ಲಿ ಪುನರ್‌ರಚಿಸಲ್ಪಟ್ಟ ಸಹಕಾರ ತತ್ವಗಳಲ್ಲಿ ಒಟ್ಟು ೬ ತತ್ತ್ವಗಳಿವೆ. ೧೯೩೭ ರ ಸಹಕಾರ ತತ್ತ್ವಗಳಲ್ಲಿ ೨ ಭಾಗವಿದ್ದು ಅಂದರೆ ಪ್ರಧಾನ ತತ್ತ್ವಗಳು ಮತ್ತು ಐಚ್ಛಿಕ ತತ್ತ್ವಗಳಿದ್ದರೆ, ೧೯೬೬ ರಲ್ಲಿ ಪುನರ್‌ರಚಿಸಲ್ಪಟ್ಟ ತತ್ತ್ವಗಳಲ್ಲಿ ಇದು ಕಂಡು ಬರುವುದಿಲ್ಲ. ೧೯೩೭ ರಲ್ಲಿ ರಚಿಸಲ್ಪಟ್ಟ ಸಹಕಾರ ತತ್ತ್ವಗಳಲ್ಲಿ ೨ ತತ್ತ್ವಗಳನ್ನು ಕೈಬಿಟ್ಟು ೧೯೬೬ ರಲ್ಲಿ ಪುನರ್‌ರಚಿಸಲ್ಪಟ್ಟ ತತ್ತ್ವಗಳಲ್ಲಿ ಒಂದು ನೂತನ ಮತ್ತು ಅತಿ ಮಹತ್ವವಾದ, ಆರನೆಯ ತತ್ತ್ವವನ್ನು ಅಳವಡಿಸಲಾಯಿತು. ೬ನೇ ತತ್ತ್ವವೆಂದರೆ

ಪರಸ್ಪರ ಸಹಕಾರದ್ದಾಗಿದೆ. ನಂತರ ೧೯೯೫ ರಲ್ಲಿ ಸಹಕಾರ ತತ್ತ್ವಗಳನ್ನು ಪುನರ್ ವಿಮರ್ಶಿಸಲಾಯಿತು. ಅವುಗಳೆಂದರೆ,

೧. ಮುಕ್ತ ಮತ್ತು ಸ್ವಯಂಪ್ರೇರಿತ ಸದಸ್ಯತ್ವ.

೨. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ.

೩. ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು.

೪. ಸ್ವಾಯತ್ತ ಮತ್ತು ಸ್ವಾತಂತ್ರ್ಯ.

೫. ಶಿಕ್ಷಣ, ತರಬೇತಿ, ಪ್ರಚಾರ.

೬. ಸಹಕಾರ ಸಂಸ್ಥೆಗಳ ನಡುವೆ ಸಹಕಾರ.

೭. ಸಾಮಾಜಿಕ ಕಳಕಳಿ.

೧೯೯೫ ರಲ್ಲಿ ಪುನರ್‌ರಚಿಸಲ್ಪಟ್ಟ ಸಹಕಾರ ತತ್ತ್ವಗಳನ್ನು ಹೆಚ್ಚು ವಿವರವಾದ ಅರ್ಥಗಳನ್ನೊಳಗೊಂಡ ಸರಳ ವಾಕ್ಯಗಳಲ್ಲಿ ವರ್ಣಿಸಲಾಗಿದೆ.

೧. ಮುಕ್ತ ಮತ್ತು ಸ್ವಯಂ ಪ್ರೇರಿತ ಸದಸ್ಯತ್ವ

ಈ ತತ್ತ್ವದಲ್ಲಿ ಮುಕ್ತ ಹಾಗೂ ಸ್ವಯಂಪ್ರೇರಿತ ಸದಸ್ಯತ್ವ ಸಮಾವೇಶಗೊಂಡಿರುತ್ತದೆ. ಸಂಘದ ಸೇವೆಯನ್ನು ಉಪಯೋಗಿಸಿಕೊಳ್ಳಲು ಇಚ್ಛಿಸುವ ಪ್ರತಿ ವ್ಯಕ್ತಿಯು ಸಂಘದಲ್ಲಿ ಸೇರಿ ಇತರ ಸದಸ್ಯರೊಡನೆ, ಸಾಮಾಜಿಕ, ಆರ್ಥಿಕ ಸೌಲಭ್ಯಗಳನ್ನು ಅನುಭವಿಸಲು ಸ್ವತಂತ್ರನಿರುತ್ತಾನೆ. ಅದಕ್ಕಾಗಿ ಅವನು ತನ್ನ ಪಾಲಿನ ಹೊಣೆಗಾರಿಕೆಯನ್ನು ನಿರ್ವಹಿಸಲಿಕ್ಕೂ ಜವಾಬ್ದಾರನಿರುತ್ತಾನೆ. ಆದರೆ ಅವನು ಸದಸ್ಯನಾಗುವಂತೆ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಯಾವುದೇ ರೀತಿಯ ಒತ್ತಾಯ ಅಥವಾ ಪ್ರಭಾವ ಬೀರಕೂಡದು. ಸಂಘದ ಸದಸ್ಯತ್ವವನ್ನು ಅಪೇಕ್ಷಿಸಿ ಬಂದ ಅರ್ಜಿಯನ್ನು ಯಾವುದೇ ರಾಜಕೀಯ, ಧಾರ್ಮಿಕ ಅಥವಾ ಮತಭೇದ, ಲಿಂಗಭೇದ ವೆನ್ನದೆ ಪರಿಶೀಲಿಸಬೇಕು. ಸದಸ್ಯತ್ವದ ಬಗ್ಗೆ ಯಾವುದೇ ನಿರ್ಬಂಧಗಳಿರ ಬಾರದು. ಹಾಗೂ ಒಬ್ಬ ವ್ಯಕ್ತಿಯು ಸದಸ್ಯನಾಗಲು ಸ್ವತಂತ್ರ ಇರುವಷ್ಟೆ, ಆ ಸಂಘದ ಸದಸ್ಯತ್ವದಿಂದ ಹಿಂತೆಗೆದುಕೊಳ್ಳಲಿಕ್ಕೂ ಸ್ವತಂತ್ರನಿರುತ್ತಾನೆ.

ಇದು ಮುಕ್ತ ಸದಸ್ಯತ್ವದ ನೀತಿ. ಎಲ್ಲಾ ವ್ಯಕ್ತಿಗಳಿಗೆ ಎಲ್ಲಾ ಪ್ರಕಾರದ ಸಂಘಗಳಲ್ಲಿ ಸದಸ್ಯನಾಗಲು ಮುಕ್ತ ಅವಕಾಶವಿರುವುದಿಲ್ಲ. ಬೇರೆ ಬೇರೆ ವೃತ್ತಿ ಮಾಡತಕ್ಕ ಜನರು ರಚಿಸಲ್ಪಟ್ಟ ಸಂಘಗಳಲ್ಲಿ ಆಯಾ ವೃತ್ತಿ ಮಾಡತಕ್ಕ ಜನರಿಗೆ ಆ ಸಂಘದಲ್ಲಿ ಮುಕ್ತ ಸದಸ್ಯತ್ವವಿರುತ್ತದೆ. ಉದಾ: ಕೈಗಾರಿಕಾ ಸಂಘದಲ್ಲಿ ಕೈಗಾರಿಕೆಯಲ್ಲಿ ತೊಡಗಿದವರಿಗೆ ಮಾತ್ರ ಮುಕ್ತ ಸದಸ್ಯತ್ವವಿರುತ್ತದೆ. ಹಾಗು ಅವರು ಸಂಘದ ಕಾರ್ಯಕ್ಷೇತ್ರದಲ್ಲಿ ವಾಸಿಸುವ ರಾಗಿರಬೇಕು.

೨. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ

ಸಹಕಾರಿ ಸಂಘಟನೆಯ ಹಿರಿಮೆಯನ್ನು ಎತ್ತಿ ತೋರಿಸುವ ವೈಶಿಷ್ಟ್ಯಗಳಲ್ಲಿ ಸಹಕಾರಿ ಪ್ರಜಾಪ್ರಭುತ್ವವು ಒಂದಾಗಿದೆ. ಇಲ್ಲಿ ಎಲ್ಲಾ ಸದಸ್ಯರು ಸಂಘದ ಮಾಲೀಕರಾಗಿರುತ್ತಾರೆ. ಸಂಘದ ಮಾಲೀಕರಾದ ಸದಸ್ಯರಿಂದಲೇ ಸಂಘದ ಆಡಳಿತ ನಡೆಸಲ್ಪಡುತ್ತದೆ ಹಾಗೂ ಸಂಘದ ಸರ್ವಸದಸ್ಯರ ಸಭೆಗೆ ಅಂತಿಮ ಅಧಿಕಾರವಿರುತ್ತದೆ. ಸಹಕಾರ ಸಂಘವು ಬಂಡವಾಳದ ಕೂಟವಾಗಿರದೆ ಮಾನವೀಯ ಮೌಲ್ಯಗಳ ಸಂಘಟನೆಯಾಗಿರುತ್ತದೆ. ಆದ್ದರಿಂದ ಎಲ್ಲಾ ಸದಸ್ಯರ ಸ್ಥಾನಮಾನವು ಅವರ ಷೇರು ಬಂಡವಾಳ ಎಷ್ಟೇ ಇದ್ದರೂ ಸಮಾನವಾಗಿರುತ್ತದೆ. ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟ ತೀರ್ಮಾನವನ್ನು ಕೈಗೊಳ್ಳುವಲ್ಲಿ, ನೀತಿ ನಿರೂಪಣೆಯಲ್ಲಿ ಎಲ್ಲಾ ಸದಸ್ಯರಿಗೂ ಸಮಾನ ಅವಕಾಶವಿರುತ್ತದೆ. 'ಒಬ್ಬ ಸದಸ್ಯನಿಗೆ ಒಂದೇ ಮತ' ಎನ್ನುವ ತತ್ತ್ವವನ್ನು ಅನುಸರಿಸಲಾಗಿದೆ.

ಸಂಘದ ಸದಸ್ಯರು ಬಂಡವಾಳದ ಒಡೆಯರಷ್ಟೆ ಆಗಿರದೆ ಸಂಘದ ಸೇವೆಗಳನ್ನು ಉಪಯೋಗಿಸುವವರು ಆಗಿರುತ್ತಾರೆ. ತಮಗೆ ಉಪಯುಕ್ತವಾದ ಸೇವೆಗಳನ್ನು ಸಂಘಟಿಸಿ ನಡೆಸಿಕೊಂಡು ಬರುವಂತೆ ಸಂಘವು ಅನುಸರಿಸಬೇಕಾದ ಧೋರಣೆಗಳನ್ನು ಸದಸ್ಯರು ತೀರ್ಮಾನಿಸ ಬೇಕು. ಈ ರೀತಿ ಸಹಕಾರದ ಪ್ರಜಾಪ್ರಭುತ್ವವು, ಸಹಭಾಗಿತ್ವವು ಪ್ರಜಾಸತ್ತೆಯಾಗಿದ್ದು ಸದಸ್ಯರು, ಸದಸ್ಯರಿಂದ, ಸದಸ್ಯರಿಗೋಸ್ಕರ ನಡೆಸಲ್ಪಡುವ ಆಡಳಿತವನ್ನೇ ಪ್ರಜಾಸತ್ತಾತ್ಮಕ ಆಡಳಿತ ಎನ್ನುತ್ತಾರೆ.

೩. ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು

ಸದಸ್ಯರು ಸಹಕಾರ ಸಂಘಗಳ ಮುಖಾಂತರ ತಮ್ಮ ಆರ್ಥಿಕ ಅಭಿವೃದ್ಧಿಪಡಿಸಿಕೊಳ್ಳಲು ಅಥವಾ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಆರ್ಥಿಕ ಚಟುವಟಿಕೆಗಳಾದ ಬಂಡವಾಳ ಶೇಖರಣೆ, ಮಾನವ ಸಂಪನ್ಮೂಲ ಬಳಕೆ, ಉತ್ಪಾದನೆ, ಹಂಚಿಕೆ ಮತ್ತು ಸಂಘದ ಆಡಳಿತ ಇವುಗಳನ್ನು ಸಂಘದ ಮುಖಾಂತರವೇ ಕೈಗೊಂಡು ಜೊತೆಗೆ ಸಂಘವು ಕೈಗೊಳ್ಳುವ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಯೋಜನೆಗಳ ಬಗ್ಗೆ ಚರ್ಚಿಸುವುದು ಮತ್ತು ಆಡಳಿತ ಮಂಡಳಿಯವರಿಗೆ ನಿರ್ದೇಶನ ನೀಡುವುದು. ಅಲ್ಲದೇ ಸಂಘದ ಆಸ್ತಿಗಳನ್ನು ರಕ್ಷಿಸಿ ಸಂಘದ ಉದ್ದೇಶ ಸಾಧನೆಗೆ ಕಾರ್ಯತಂತ್ರ ರೂಪಿಸುವುದು ಈ ತತ್ವದ ಉದ್ದೇಶವಾಗಿದೆ.

೪. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ

ಸಹಕಾರ ಸಂಘ ಯಾವುದೇ ಚಟುವಟಿಕೆ ಕೈಗೊಳ್ಳುವಲ್ಲಿ ಅಲ್ಲಿ ಪರಸ್ಪರ ತಿಳಿವಳಿಕೆ, ನೆರವು, ಆರ್ಥಿಕ ಚಿಂತನೆ, ಸ್ವಸಹಾಯ ವ್ಯಕ್ತಿಗೌರವ ಮತ್ತು ಸಮಾನತೆ, ಸ್ವಾತಂತ್ರ್ಯ, ಬಂಧುತ್ವ ಕಾಣುತ್ತೇವೆ. ಅಂದರೆ ಪರಸ್ಪರ ಸಹಾಯದಿಂದ ಸದಸ್ಯರ ಆರ್ಥಿಕ ಪ್ರಗತಿ ಸಾಧಿಸುವುದು. ಅಂದರೆ ಸಹಕಾರ ಸಂಘಗಳು ಸದಸ್ಯರ ಅಗತ್ಯವಾದ ಸೇವೆ ಕಲ್ಪಿಸಲು ಬೇರೆ ಸಹಕಾರ ಸಂಘ ಸಂಸ್ಥೆಗಳನ್ನು ಅವಲಂಬಿಸಿದೆ. ತಾವೇ ಸ್ವತಃ ಬಂಡವಾಳವನ್ನು ರೂಪಿಸಿಕೊಂಡು ಸಮಾನ ಹಂಚಿಕೆಗೆ ಅವಕಾಶ ಮಾಡಿಕೊಡುವುದು. ಅಲ್ಲದೆ ಆಡಳಿತ ಮಂಡಳಿಯವರು ಅಥವಾ ಸಿಬ್ಬಂದಿ ವರ್ಗದವರು ಜವಾಬ್ದಾರಿಯಲ್ಲಿ ಕಾರ್ಯಪ್ರವೃತ್ತರಾಗದೆಯಿದ್ದಲ್ಲಿ ಅವರ ಸ್ಥಾನಗಳನ್ನು ತೆರವು ಮಾಡಿಸಲು ಸದಸ್ಯನಿಗೆ ಸ್ವಾತಂತ್ರ್ಯವಿರುತ್ತದೆ.

೫. ಸಹಕಾರ ಶಿಕ್ಷಣ ತರಬೇತಿ

ಸಹಕಾರ ಚಳವಳಿಯು ಮುಖ್ಯವಾಗಿ ಜನತಾ ಚಳವಳಿಯಿಂದ ಬೆಳೆದು ಬರಬೇಕಾಗಿದೆ ಹಾಗೂ ಸಹಕಾರ ಚಳವಳಿಯು ಯಶಸ್ವಿಯಾಗ ಬೇಕಾದರೆ ಜನತೆಯಲ್ಲಿ ಹಾಗೂ ಸದಸ್ಯರಲ್ಲಿ ಸಹಕಾರ ಪ್ರಜ್ಞೆ ಮೂಡಬೇಕು.

ಸದಸ್ಯರು ಸಹಕಾರ ತತ್ತ್ವಗಳನ್ನು ಚೆನ್ನಾಗಿ ಅರಿತು ಕಾರ್ಯಕಲಾಪಗಳನ್ನು ನಡೆಸುವಂತಾಗಬೇಕು. ಸಹಕಾರಿ ಕಾನೂನು ಮತ್ತು ನಿಯಮಗಳನ್ನು ತಿಳಿದುಕೊಂಡಿರಬೇಕು. ಇಂತಹ ಅರಿವು ಮತ್ತು ತಿಳಿವಳಿಕೆಯನ್ನು ಜನತೆಯಲ್ಲಿ ಮೂಡಿಸಬೇಕಾದರೆ ಅವರಿಗೆ ಶಿಕ್ಷಣ ನೀಡಬೇಕು. ಸಹಕಾರ ಶಿಕ್ಷಣವನ್ನು ಸದಸ್ಯರಿಗೆ, ಸಮಿತಿ ಸದಸ್ಯರಿಗೆ, ಪದಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಪೂರೈಸಬೇಕು.

೬. ಸಹಕಾರ ಸಂಘಗಳಲ್ಲಿ ಪರಸ್ಪರ ಸಹಕಾರ

ತಮ್ಮ ಸದಸ್ಯರ ಮತ್ತು ಸಮಾಜದ ಹಿತವನ್ನು ಉತ್ತಮವಾದ ರೀತಿಯಲ್ಲಿ ಸಾಧಿಸುವ ಉದ್ದೇಶದಿಂದ ವ್ಯಕ್ತಿಗಳಲ್ಲಿ ಎಲ್ಲಾ ಸಹಕಾರಿ ಸಂಸ್ಥೆಗಳು, ಸ್ಥಾನಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹರಿಸುವ ಎಲ್ಲಾ ರೀತಿಯಿಂದಲೂ ಕ್ರಿಯಾತ್ಮಕವಾಗಿ ಸಹಕರಿಸಬೇಕೆಂಬುದು ಇದರ ಅರ್ಥ. ಅಂದರೆ, ಒಬ್ಬರು ಎಲ್ಲರಿಗಾಗಿ ಎಲ್ಲರೂ ಒಬ್ಬರಿಗಾಗಿ.

೭. ಸಾಮಾಜಿಕ ಕಳಕಳಿ

ಈ ತತ್ತ್ವವು ಸಹಕಾರ ಸಂಘಗಳಲ್ಲಿ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಕಾರ್ಯಪ್ರವೃತ್ತರಾಗುವುದರ ಜೊತೆಗೆ ಸದಸ್ಯರ ಆರೋಗ್ಯ ಪರಿಸರ, ನೈರ್ಮಲ್ಯ, ಶಿಕ್ಷಣ, ನೀರು ಸರಬರಾಜು ಇತ್ಯಾದಿ ಮೂಲಭೂತವಾದ ಸೌಕರ್ಯಗಳನ್ನು ಸದಸ್ಯರಿಗೆ ಸಂಘದ ಮುಖಾಂತರ ಒದಗಿಸುವುದು.

ವಿದೇಶಗಳಲ್ಲಿ ಸಹಕಾರ ಚಳವಳಿ

ಇಂಗ್ಲೆಂಡ್

ರಾಬರ್ಟ್ ಓವನ್ನನು ಹಾಕಿಕೊಟ್ಟ ಮಾರ್ಗದಲ್ಲಿ ಇಂಗ್ಲೆಂಡ್ ದೇಶದ ಲ್ಯಾಂಕಷ್ಟೆರ ಬಳಿಯಿದ್ದ ರಾಕ್‌ಡೇಲ್ ಗ್ರಾಮದ ೨೮ ಮಂದಿ ನೇಯ್ಗೆಯವರು ಮೊದಲು ಸಹಕಾರ ಪದ್ಧತಿಯನ್ನು ಕಾರ್ಯರೂಪಕ್ಕೆ ತಂದರು. ಇವರು ಶ್ರಮಜೀವಿಗಳ ಕಷ್ಟವನ್ನು ಸ್ವತಃ ಅನುಭವಿಸಿ, ತಾವು ಹೂಡಿದ ಮುಷ್ಕರದ ಫಲವಾಗಿ ಕೆಲಸ ಬಿಟ್ಟರು. ಅನಂತರ ಎಲ್ಲರೂ ಒಟ್ಟಿಗೆ ಸೇರಿ ಒಂದು ಸಹಕಾರಿ ಉಗ್ರಾಣವನ್ನು ಸ್ಥಾಪಿಸಿದರು. ಈ ರಾಕ್‌ಡೇಲ್ ಅಗ್ರಗಾಮಿಗಳ ಪ್ರಯತ್ನ ಸಫಲವಾಯಿತು. ಈ ಸಮಾಚಾರ ಎಲ್ಲಾ ಕಡೆಗೂ ಹರಡಿತು. ಅನೇಕ ಕಡೆಗಳಲ್ಲಿ ಈ ತತ್ತ್ವವನ್ನೇ ಅನುಸರಿಸಿ ಇಂತಹ ಸಂಘಗಳು ಸ್ಥಾಪಿತವಾದವು. ರಾಕ್‌ಡೇಲ್ ಸಂಘದ ಮೂಲ ಉದ್ದೇಶಗಳೆಂದರೆ : ೧. ವ್ಯಾಪಾರವನ್ನು ನಗದಾಗಿ ನಡೆಸುವುದು ೨. ಪೇಟೆ ಧಾರಣೆಗೆ ಅನುಗುಣವಾಗಿ ಪದಾರ್ಥಗಳನ್ನು ಮಾರುವುದು ೩. ವೆಚ್ಚವನ್ನೆಲ್ಲ ಕಳೆದು ಉಳಿದ ಲಾಭದಲ್ಲಿ ಸ್ವಲ್ಪ ಭಾಗವನ್ನು ಆಪದ್ಧನವಾಗಿಟ್ಟುಕೊಳ್ಳುವುದು ಮತ್ತು ಸಹಕಾರ ಪ್ರಚಾರ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸುವುದು. ೪. ಬಂಡವಾಳ ಬಡ್ಡಿಯನ್ನು ತೆಗೆದಿಟ್ಟು, ಉಳಿದ ಲಾಭವನ್ನು ಸದಸ್ಯರ ವ್ಯಾಪಾರದ ಮೊಬಲಗಿನ ಮೇಲೆ ಷೇರಿನ ಪ್ರಕಾರ ಹಂಚುವುದು ೫. ಸದಸ್ಯರ ಸಂಘದ ಆಡಳಿತವನ್ನು ಸಮನಾದ ದೃಷ್ಟಿಯಿಂದ ನಡೆಸುವುದು ೬. ಮತವಿಷಯಗಳಲ್ಲಿ ಸಂಘವು ತಾಟಸ್ಥ್ಯದಿಂದಿರುವುದು.

ಮೇಲೆ ಕಂಡ ತತ್ತ್ವಗಳನ್ನು ಅನುಸರಿಸಿ ಸ್ಥಾಪಿತವಾದ ಯಾವ ಸಹಕಾರ ಉಗ್ರಾಣವು ಹೀನಸ್ಥಿತಿಗೆ ಬರಲಿಲ್ಲ. ಈ ಉಗ್ರಾಣಗಳ ಕೆಲಸವು ಆಶ್ಚರ್ಯಕರವಾಗಿದ್ದಿತು. ಲಕ್ಷಾಂತರ ಜನರು ಈ ಉಗ್ರಾಣಗಳಲ್ಲಿ ಕೆಲಸ

ಮಾಡುತ್ತಿದ್ದರು. ಪದಾರ್ಥಗಳು ಸಹಕಾರಿ ಗಿರಣಿಗಳಲ್ಲಿಯೇ ತಯಾರಾಗುತ್ತಿದ್ದವು. ಶ್ರಮಜೀವಿಗಳಿಗೆ ಗಿರಣಿಗಳಿಂದ ವರ್ಷ ಒಂದಕ್ಕೆ ಸುಮಾರು ನಾಲ್ಕು ಕೋಟಿ ಪೌಂಡು ಬಟವಾಡೆಯಾಗುತ್ತಿತ್ತು. ಈ ಉಗ್ರಾಣಗಳೆಲ್ಲ ಒಟ್ಟಿಗೆ ಸೇರಿ ಸಗಟು ವ್ಯಾಪಾರಕ್ಕೆ ಅನುಕೂಲವಾದ ಮಳಿಗೆಯ ಕೇಂದ್ರಸಂಘವನ್ನು ಸ್ಥಾಪಿಸಿದರು. ಐದು ವರ್ಷಗಳ ನಂತರ ೧೮೬೮ ರಲ್ಲಿ ಇಂತಹ ಇನ್ನೊಂದು ಸಂಘವನ್ನು ಸ್ಥಾಪಿಸಿದವು. ಈ ಎರಡು ದೊಡ್ಡ ಕೇಂದ್ರ ಸಂಘಗಳು ನಾನಾ ಶಾಖೆಗಳನ್ನು ಸ್ಥಾಪಿಸಿ ತಮ್ಮ ಸ್ವಂತ ಗಿರಣಿಯಲ್ಲಿ ತಯಾರಾದ ಪದಾರ್ಥಗಳನ್ನು ಮಾರಾಟ ಮಾಡಿದವು. ಈ ಕೇಂದ್ರ ಸಂಘಗಳು ತಮ್ಮ ಸ್ವಂತ ಹಡಗುಗಳಿಂದ ಪದಾರ್ಥಗಳನ್ನು ಸಾಗಿಸಿ ಇತರ ದೇಶಗಳಲ್ಲಿ ಮಳಿಗೆಗಳನ್ನು ಸ್ಥಾಪಿಸಿ ವ್ಯಾಪಾರ ನಡೆಸುತ್ತಿವೆ. ಹೀಗೆ ಇಂಗ್ಲೆಂಡ್ ದೇಶದ ಸಹಕಾರ ಪದ್ಧತಿ ಬೆಳೆದು ಹೆಚ್ಚು ಮನ್ನಣೆ ಗಳಿಸಿದೆ.

ಇಂಗ್ಲೆಂಡ್ ದೇಶದ ೧೫೦೦೦ ಸಹಕಾರ ಸಂಸ್ಥೆಗಳಲ್ಲಿ ೧೨೦೦೦ ಉಗ್ರಾಣಗಳು ಆಗಿದ್ದವು. ಈ ಸಂಘಗಳು ಸದಸ್ಯರಲ್ಲಿ ಮಿತವ್ಯಯ ಪ್ರೇರೇಪಿಸಿ ಸ್ವಸಾಮರ್ಥ್ಯದಿಂದ ಅವರು ತಮ್ಮ ಜೀವನ ಉತ್ತಮಪಡಿಸಿ ಕೊಳ್ಳುವಂತೆ ಮಾಡಿವೆ. ವ್ಯವಸಾಯ, ವಿದ್ಯಾಭ್ಯಾಸ, ವಿದೇಶ ಪ್ರಯಾಣ-ಮುಂತಾದ ಉದ್ಯಮಗಳಿಗೆ ಈ ಸಹಕಾರ ಸಂಘಗಳು ಸಹಾಯ ಮಾಡುತ್ತಿವೆ. ರಾಕ್‌ಡೇಲ್ ಅಗ್ರಗಾಮಿಗಳು, ವಿದ್ಯಾಭ್ಯಾಸ, ಸಹಕಾರ ತತ್ತ್ವ ಪ್ರಚಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದರು. ಸಹಕಾರ ತತ್ತ್ವವು ಜನ ಸಾಮಾನ್ಯರಲ್ಲಿ ಪ್ರಚಾರವಾಗಬೇಕಾದರೆ ವಿದ್ಯಾಭ್ಯಾಸ ಅತ್ಯಗತ್ಯ ಎಂದು ಇಂಗ್ಲೆಂಡಿನಲ್ಲಿ ಭಾವಿಸಲಾಗಿತ್ತು. ರಾಬರ್ಟ್ ಓವನ್ ಸಹಕಾರ ಪದ್ಧತಿಯನ್ನು ಇಂಗ್ಲೆಂಡ್ ದೇಶದ ಜನರಿಗೆ ಮೊಟ್ಟಮೊದಲು ತೋರಿಸಿದನು. ರಾಕ್‌ಡೇಲ್ ಅಗ್ರಗಾಮಿಗಳು ಇದನ್ನು ಚೆನ್ನಾಗಿ ಅತ್ಯುತ್ತಮ ರೀತಿಯಲ್ಲಿ ನಡೆಸಿ ಜಯಭೇರಿ ಹೊಡೆದರು. ಇಲ್ಲಿಯ ಸಹಕಾರ ಅಭಿವೃದ್ಧಿಗೆ ಜನರ ಸಾಮರ್ಥ್ಯವೇ ಕಾರಣ. ಆದರೆ ಸರ್ಕಾರವೂ ಆಗಾಗ ಅಗತ್ಯವಾದ ಕಾನೂನುಗಳನ್ನು ಆಚರಣೆಗೆ ತಂದು ಸಹಾಯ ಮಾಡಿತು.

ದಳ್ಳಾಳಿಗಳನ್ನು ದಯಮಾಡಿ ದೂರಮಾಡಿ, ಅಪಾರ ಲಾಭ ಗಳಿಸುವುದನ್ನು ತಪ್ಪಿಸುವಂತಹ ಓವನ್ನನ ತೀವ್ರ ಅಭಿಲಾಷೆಯು ಅವನ

ಸಹಕಾರ ಪದ್ಧತಿಯಿಂದ ಪೂರ್ಣವಾಗಿ ಯಶಸ್ವಿಯಾಯಿತು. ಸಹಕಾರಿ ಉಗ್ರಾಣ ಸ್ಥಾಪನೆಯಿಂದ ಉತ್ಪಾದಕರು, ಗ್ರಾಹಕರು ನೇರವಾದ ವ್ಯವಹಾರ ಸಂಬಂಧ ಪಡೆಯುವಂತಾಯಿತು. ಓವನ್‌ನ ಮಾರ್ಗದರ್ಶನವನ್ನು ಅರ್ಥಮಾಡಿಕೊಂಡು ಅಸಂಖ್ಯಾತ ಸಹಕಾರ ಉಗ್ರಾಣಗಳನ್ನು ಸ್ಥಾಪಿಸಿದರು. ಇವರ ಯಶಸ್ವಿಯಾದ ಪ್ರಯತ್ನ ಸಹಕಾರದ ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ. ಇವರು ತೋರಿಸಿಕೊಟ್ಟ ಮಾನವತ್ವ ಸಿದ್ಧಾಂತ ವಾಣಿಜ್ಯ ಪ್ರಪಂಚದಲ್ಲಿ ಒಂದು ಹೊಸ ಯುಗವನ್ನು ಸೃಷ್ಟಿಮಾಡಿತು. ಓವನ್ನನ ಮಹಾಪ್ರಯೋಗವು ಕೆಲಸಗಾರರು ಸಹಕಾರ ಪ್ರಯತ್ನದಿಂದ ಸುಖಜೀವನ ನಡೆಸಬಹುದೆಂದು ಅರಿತು ತಮ್ಮ ಆಲಸ್ಯವನ್ನು ದೂರಮಾಡಿ ಒಟ್ಟುಗೂಡಿ ಕೆಲಸ ಮಾಡುವಂತಾಯಿತು.

ಜರ್ಮನ್ ದೇಶದಲ್ಲಿ ಸಹಕಾರ ಚಳವಳಿ

ಸಹಕಾರ ಚಳವಳಿಯ ಬೆಳವಣಿಗೆಗೆ ಜರ್ಮನಿ ದೇಶವು ವಿಶೇಷ ರೀತಿಯಲ್ಲಿ ಸೇವೆ ಸಲ್ಲಿಸಿದೆ. ಲೇವಾದೇವಿ ಸಹಕಾರ ಸಂಘಗಳ ತೌರುಮನೆ ಜರ್ಮನಿ ಎಂದು ಪ್ರಸಿದ್ಧವಾಗಿದೆ. ೧೯ ನೇ ಶತಮಾನದ ಪೂರ್ವಾರ್ಧದಲ್ಲಿ ಜಮೀನ್ದಾರರು, ಕೈಗಾರಿಕೋದ್ಯಮಿಗಳು ಕೂಲಿಕಾರರನ್ನು ಶೋಷಣೆ ಮಾಡುತ್ತಿದ್ದರು. ಕೆಲಸಗಾರರಲ್ಲಿ ಗುಲಾಮರು ಎಂದು ಭಾವಿಸುವಷ್ಟು ಮಟ್ಟಿಗೆ ಇಂತಹ ಶೋಷಣೆ ನಡೆಯಿತು. ಹೀಗೆಯೇ ರೈತರ ಸ್ಥಿತಿಯು ಚಿಂತಾಜನಕವಾಗಿತ್ತು. ರೈತರಿಗೆ ಹಣಕಾಸಿನ ಸಹಾಯ ದೊರಕುತ್ತಿರಲಿಲ್ಲ. ಸಾಲ ಸೌಕರ್ಯವಿರಲಿಲ್ಲ. ಅವರು ಬೆಳೆದ ಧವಸಧಾನ್ಯಗಳೆಲ್ಲ ಜಮೀನ್ದಾರರ ಪಾಲಾಗುತ್ತಿತು.

ಇಂತಹ ಭೀಕರ ಪರಿಸ್ಥಿತಿಯಲ್ಲಿ ರೈಫಿಸಾನ್ ಮಹಾಶಯನು ಬಡಜನರಿಗೆ ಆಲೂಗಡ್ಡೆಯನ್ನು ಸುಲಭವಾಗಿ ದೊರಕಿಸಿಕೊಡುವುದಕ್ಕಾಗಿ ಒಂದು ಸಣ್ಣಹಳ್ಳಿಯಲ್ಲಿ ಒಂದು ಲೇವಾದೇವಿ ಸಂಘವನ್ನು ಸ್ಥಾಪಿಸಿದನು. ಸಂಘದ ಸದಸ್ಯರ ಮನೆ, ಜಮೀನು ಮುಂತಾದವುಗಳ ಆಧಾರವಿಲ್ಲದೆ, ಸ್ವಂತ ಸಂಚಿಕೆಯ ಮೇಲೆ ಸಾಲ ಪಡೆಯಬಹುದಾಗಿತ್ತು. ಈ ಬಗೆಯ ಸಂಘಗಳು ವಿಸ್ತಾರವಾಗಿ ಸ್ಥಾಪನೆಯಾದ ಮೇಲೆ, ಇವು ಬಡವನಾದ,

ಗುಣಾಢ್ಯರಾದ ಸದಸ್ಯರಿಗೆ ಬಂಡವಾಳ ಒದಗಿಸಿ ಅವರು ತಮ್ಮ ಆರ್ಥಿಕ ಜೀವನವನ್ನು ಉತ್ತಮಪಡಿಸಿಕೊಳ್ಳುವಂತೆ ಸಹಾಯ ಮಾಡುತ್ತಿದ್ದವು. ಸದಸ್ಯರ ನೈತಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದು, ಅವರ ಲಾಭದಾಯಕ ಉದ್ಯಮಗಳಿಗೆ ಬಂಡವಾಳ ಒದಗಿಸುವುದು, ಅವರು ಸ್ವಲ್ಪವಾದರೂ ಹಣ ಗಳಿಸುವಂತೆ ಮಾಡುವುದು ಇವೇ ಮುಂತಾದವು ಈ ಸಂಘಗಳ ಉದ್ದೇಶವಾಗಿತ್ತು.

ರೈಫಿಸಾನ್ ಸಂಘಗಳು ಒಂದೊಂದು ಗ್ರಾಮಕ್ಕೆ ಒಂದೊಂದು ಸ್ಥಾಪಿತವಾಗಿ ವಾರಕ್ಕೊಂದು ಸಭೆ ಸೇರಿಸಿ ಸಂಘದ ಆರ್ಥಿಕ ಸ್ಥಿತಿ ಮತ್ತು ಇತರ ಸೌಲಭ್ಯಗಳನ್ನು ಕೂಲಂಕಶವಾಗಿ ಚರ್ಚಿಸಿ ಸೂಕ್ತ ಕಾರ್ಯಕ್ರಮಗಳನ್ನು ನಿಶ್ಚಯ ಮಾಡುತ್ತಿದ್ದರು. ಜರ್ಮನಿ ದೇಶದ ಒಟ್ಟು ರೈತರ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಜನರು ಈ ಸಂಘಗಳ ಸದಸ್ಯರಾಗಿದ್ದರು. ಸಾಹುಕಾರರ ಗುಲಾಮರಾಗಿ ನರಳುತ್ತಿದ್ದ ರೈತರಿಂದ ತುಂಬಿದ ಹಳ್ಳಿಗಳಲ್ಲಿ ರೈಫಿಸಾನ್ ಸಂಘಗಳು ಸ್ವಲ್ಪಕಾಲದಲ್ಲಿಯೇ ರೈತರನ್ನು ಸಾಲದ ಸಂಕೋಲೆಯಿಂದ ಬಿಡುಗಡೆ ಮಾಡಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿದವು. ಅವರಿಗೆ ಬೇಕಾದ ವ್ಯವಸಾಯದ ಸಲಕರಣೆಯನ್ನು ಒದಗಿಸಿದವು. ಇದರಿಂದ ರೈತರ ಸಂಪಾದನೆ ಹೆಚ್ಚಿತು. ಅವರ ಜೀವನ ಉತ್ತಮವಾಯಿತು. ಹೀಗೆ ರೈಫಿಸಾನ್ ಸಹಕಾರ ಸಂಘಗಳು ಜರ್ಮನಿ ದೇಶದಲ್ಲಿ ವ್ಯಾಪಕವಾಗಿ ಸ್ಥಾಪಿಸಲ್ಪಟ್ಟು ದೇಶದ ವ್ಯಾಪಾರವನ್ನು ವ್ಯವಸಾಯವನ್ನು, ಉತ್ತಮ ಪಡಿಸಿದವು. ರೈತರು ತಮಗೆ ಅಗತ್ಯವಾದ ವ್ಯವಸಾಯ ಸಲಕರಣೆಗಳನ್ನು ಸುಲಭವಾಗಿ ಸಕಾಲದಲ್ಲಿ ಪಡೆಯುವುದಕ್ಕೆ ಮಿತವ್ಯಯ ಪದ್ಧತಿ ಅನುಸರಿಸುವುದಕ್ಕೂ, ಆರ್ಥಿಕೋದ್ಯಮಿಗಳಿಗಾಗಿ ಮಾಡಿದ ಸಾಲವನ್ನು ಸಕಾಲದಲ್ಲಿ ತೀರಿಸುವುದಕ್ಕೂ ರೈಫಿಸಾನ್ ಸಂಘಗಳು ವಿಶೇಷ ರೀತಿಯಲ್ಲಿ ಸಹಾಯ ಮಾಡಿವೆ.

ಗ್ರಾಮಾಂತರ ಪ್ರದೇಶದಲ್ಲಿ ಇಂತಹ ಸಹಕಾರ ಸಂಘಗಳು ಕೆಲಸ ಮಾಡುತ್ತಿರುವಾಗಲೆ, ನಗರಗಳ ಕೈಗಾರಿಕಾ ನೀತಿಗೆ ಸಹಾಯ ಮಾಡಲು ಯೋಗ್ಯವಾದ ಮತ್ತೊಂದು ಬಗೆಯ ಸಹಕಾರ ಸಂಘಗಳನ್ನು ಡಿಲಿಟ್ಸ್ ಎಂಬ ಪಟ್ಟಣದಲ್ಲಿ ಹರಮನ್ ಕೂಲ್ಸ್ ಎಂಬ ಮಹನೀಯನು

ಸ್ಥಾಪಿಸಿದನು. ಈ ಸಂಘಗಳು ಹೆಚ್ಚು ಪರಿಚಯವಿಲ್ಲದ ಸದಸ್ಯರನ್ನೊಳಗೊಂಡ ನಿಯಮಿತ ಜವಾಬ್ದಾರಿಯ ಮೇಲೆ ಕೆಲಸ ಮಾಡಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದವು. ಹರಮನ್‌ಕೂಲ್ಸ್‌ನಿಂದ ಸ್ಥಾಪಿತವಾದ ಸಂಘಗಳು ಎರಡು ವಿಧವಾಗಿವೆ. ಒಂದು ಬಂಡವಾಳ ಒದಗಿಸುವುದಕ್ಕೆ, ಇನ್ನೊಂದು ಸ್ವಪ್ರಯತ್ನ ಮಿತವ್ಯಯ ವೃದ್ಧಿಪಡಿಸುವುದಕ್ಕೆ. ಈ ಎರಡು ಬಗೆಯ ಸಂಘಗಳೂ ಸದಸ್ಯರಿಗೆ ಮಾತ್ರ ಸಾಲ ಕೊಟ್ಟು ಅವರನ್ನು ಒಟ್ಟುಗೂಡಿಸಿ ಕೆಲಸ ಮಾಡುವಂತೆ ಮಾಡಿ, ಅವರ ವ್ಯಾಪಾರೋದ್ಯಮಗಳಿಗೆ ಅಗತ್ಯವಾದ ಕೌಶಲ್ಯವನ್ನು, ಶಿಸ್ತನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಅದೇ ಕಾಲದಲ್ಲಿಯೇ ಈ ಸಂಘಗಳು ದೊಡ್ಡ ದೊಡ್ಡ ವ್ಯಾಪಾರೋದ್ಯಮಗಳನ್ನು ಕೈಗೊಂಡು ವಿವಿಧ ವೃತ್ತಿಯ ಸದಸ್ಯರನ್ನು ಕೂಡಿಸಿ ವ್ಯಾಪಕವಾಗಿ ಕಾರ್ಯಕ್ರಮವನ್ನು ಅನುಸರಿಸಿದವು. ಕೈಗಾರಿಕಾ ಸಂಘ ಮತ್ತು ಸಹಕಾರ ತತ್ತ್ವದ ಮೇಲೆ ಪುಸ್ತಕ ಬರೆದು ಜನರಲ್ಲಿ ವಿಶೇಷ ರೀತಿಯ ಪ್ರಚಾರ ಮಾಡಿದನು. ಹೀಗೆ ರೈಫಿಸಾನ್, ಹರ್ವನ್ ಸಕೂಲ್ಸ್ ಇಬ್ಬರೂ ಜರ್ಮನಿ ದೇಶದ ಜನರ ದುಃಸ್ಥಿತಿಯನ್ನು ನೋಡಿ ಮರುಗಿ ಅವರಿಗೆ ಶಾಶ್ವತ ಶಾಂತಿ ಕೊಡತಕ್ಕ ಸಹಕಾರದಿಂದ ಭವ್ಯವಾದುದೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು.

ಡೆನ್ಮಾರ್ಕ್‌ನಲ್ಲಿ ಸಹಕಾರ ಚಳವಳಿ

೧೮೬೪ರಲ್ಲಿ ನಡೆದ ಜರ್ಮನ್ ಯುದ್ಧದ ಫಲವಾಗಿ ಡೆನ್ಮಾರ್ಕ್ ದೇಶದ ಜನರಿಗೆ ವಿಶೇಷ ನಷ್ಟವುಂಟಾಯಿತು. ದೇಶದ ಆರ್ಥಿಕಾಭಿವೃದ್ಧಿಯನ್ನು ಈ ಯುದ್ಧವು ನುಚ್ಚುನೂರು ಮಾಡಿತು. ಇದರ ಪರಿಣಾಮವಾಗಿ ಸಾಮರ್ಥ್ಯವುಳ್ಳ ಡೇನಿಷ್ ಜನರು ಹಸಿವು ಮತ್ತು ಬಡತನದಿಂದ ಪೀಡಿತರಾದರು. ಇಂತಹ ಕಷ್ಟದಿಂದ ಪಾರಾಗುವ ಬಗೆ ಹೇಗೆಂಬುದನ್ನು ಅವರು ಶಾಂತಿಯಿಂದ ಪರಿಶೀಲಿಸಿದರು. ಇಂಗ್ಲೆಂಡ್ ದೇಶದಲ್ಲಿ ಉಂಟಾಗಿದ್ದ ಇದೇ ಬಗೆಯ ಕಷ್ಟಗಳನ್ನು ಅವರು ಹೇಗೆ ಪರಿಹಾರ ಮಾಡಿಕೊಂಡರು ಎಂಬುದನ್ನು ಅವರು ಗಮನಿಸಿದರು. ಅಂತಹ ಅತಿ ಕಷ್ಟದಿಂದ ತಾವು ಪಾರಾಗಬೇಕಾದರೆ ತಾವೆಲ್ಲ ಒಟ್ಟುಗೂಡಿ ಪರಸ್ಪರ ಸಹಾಯದಿಂದ ಕೆಲಸ ಮಾಡಬೇಕೆಂಬುದೇ ಅವರ ಗುರಿಯಾಗಿದ್ದಿತು.

೧೮೬೬ ರಲ್ಲಿ ಮೊದಲನೆ ಸಹಕಾರ ಸಂಘವು ಸ್ಥಾಪಿಸಲ್ಪಟ್ಟಿತು. ಡೆನ್ಮಾರ್ಕ್ ದೇಶವು ೧೬೦೦ ಚದರ ಮೈಲಿ ವಿಸ್ತೀರ್ಣದ ಸಣ್ಣದೇಶ. ಇಂತಹ ಸಣ್ಣ ದೇಶದಲ್ಲಿ ಸುಮಾರು ಎಂಟು ಸಾವಿರಕ್ಕೂ ಹೆಚ್ಚಿನ ಸಹಕಾರ ಸಂಘಗಳು, ಲಕ್ಷಾಂತರ ಸದಸ್ಯರನ್ನೊಳಗೊಂಡು ಕೆಲಸ ಮಾಡಿದವು. ಡೇನಿಷರ ಪ್ರತಿಯೊಂದು ಪದಾರ್ಥದ ಉತ್ಪತ್ತಿ ಮತ್ತು ಮಾರಾಟವನ್ನು ಸಹಕಾರ ಸಂಘಗಳ ಮೂಲಕವೇ ನಡೆಸಲಾಗುತ್ತಿದೆ. ಇಲ್ಲಿಯ ಸಂಘಗಳು ದೇಶದ ರಫ್ತು ವ್ಯಾಪಾರವನ್ನು ನಡೆಯಿಸಿ ಪದಾರ್ಥಗಳಿಗೆ ಉತ್ತಮ ಬೆಲೆಯೂ, ಲಾಭವು ಬರುವಂತೆ ಮಾಡುತ್ತವೆ. ಡೆನ್ಮಾರ್ಕ್ ದೇಶದ ಹಾಲು ಬೆಣ್ಣೆ ವ್ಯಾಪಾರದ ಶೇಕಡಾ ೯೦ ರಷ್ಟು, ವ್ಯವಸಾಯ ಪದಾರ್ಥಗಳ ಶೇಕಡಾ ೮೦ ರಷ್ಟು, ಮಾಂಸವ್ಯಾಪಾರದ ಶೇಕಡಾ ೧೦ ರಷ್ಟು ಅಲ್ಲಿಯ ಸಹಕಾರ ಸಂಘಗಳ ಮೂಲಕವೆ ನಡೆಯುತ್ತಿವೆ. ಸಹಕಾರವೆಂಬ ಅಲೆಯು ಅಲ್ಲಿಯ ಸಾಮಾನ್ಯ ಜನಸಮೂಹವೆಂಬ ಸಮುದ್ರದಿಂದ ಪ್ರಾರಂಭ ವಾಯಿತು. ಸಹಕಾರವೆಂಬ ಬಿತ್ತನೆಯ ಬೀಜವು ಮೊಳೆತು ದೊಡ್ಡ ಮರವಾಗುವುದಕ್ಕೆ ಡೆನ್ಮಾರ್ಕ್ ದೇಶವು ಫಲವತ್ತಾದ ಉತ್ತಮ ಕೃಷಿ ಕ್ಷೇತ್ರವಾಯಿತು.

ಡೆನ್ಮಾರ್ಕ್ ದೇಶದ ಸಹಕಾರಾಭಿವೃದ್ಧಿಗೆ ಅಲ್ಲಿಯ ವಿದ್ಯಾಭ್ಯಾಸ ಕ್ರಮ ಮುಖ್ಯ ಕಾರಣವೆಂದು ಅರ್ಥಶಾಸ್ತ್ರಜ್ಞರು ತಿಳಿಸಿದ್ದಾರೆ. ಅಲ್ಲಿಯ ಶಿಕ್ಷಣ ಕ್ರಮದಿಂದ ಜನರಲ್ಲಿ ದೇಶಪ್ರೇಮ, ಸಾರ್ವಜನಿಕ ಸೇವೆ ಮಾಡಬೇಕೆಂಬ ಕುತೂಹಲ ಹೆಚ್ಚಿತು. ಸಹಕಾರ ಚಳವಳಿ ಪ್ರಾರಂಭವಾಗಿ ಅಭಿವೃದ್ಧಿ ಹೊಂದಿತು. ಸಾವಿರಾರು ಡೇನಿಷ್ ಜನರು ವಯಸ್ಕರ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದರು. ಜನರಲ್ಲಿ ವಿವೇಕ, ತಿಳಿವಳಿಕೆ ಚೆನ್ನಾಗಿ ಹರಡಿದ್ದುದರಿಂದ ಬಾತುಕೋಳಿ ಸಹಜ ನೀರಿಗಿಳಿಯುವಂತೆ ಅಲ್ಲಿಯ ಜನರು ಸಹಕಾರ ಪದ್ಧತಿಯನ್ನು ಉತ್ಸಾಹದಿಂದ ಕೈಗೊಂಡರು. ರೈತಾಪಿ ಜನಗಳಲ್ಲಿ ಕೂಡ ಪ್ರಜಾಪ್ರಭುತ್ವದ ಆಕಾಂಕ್ಷೆ, ಸರ್ವಸಮಾನತಾಭಾವನೆ ಚೆನ್ನಾಗಿ ಬೇರೂರಿದೆ. ಇಂತಹ ಗುಣಗಳು ಸಹಕಾರಾಭಿವೃದ್ಧಿಗೆ ಉತ್ತಮ ವಾತಾವರಣವಾಗಿ ಪರಿಣಮಿಸಿವೆ. ಅಲ್ಲಿಯ ವಿದ್ಯಾಭ್ಯಾಸ ಮತ್ತು ಸಹಕಾರ ಪದ್ಧತಿ ಎರಡೂ ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿರುವುದರಿಂದ ಡೇನಿಷರನ್ನು ಅವು ಆದರ್ಶ ರೈತ ಜನಾಂಗವನ್ನಾಗಿ ಮಾಡಿವೆ.

ಡೇನಿಷ್ ಜನರು ಮೊದಲು ಪಶುಪಾಲನೆ ಮತ್ತು ಇತರ ವ್ಯವಸಾಯ ಕ್ರಮದಲ್ಲಿ ಸಹಕಾರ ಪದ್ಧತಿಯನ್ನು ಕೈಗೊಂಡು ಅನಂತರ ಕ್ರಮವಾಗಿ ಸಹಕಾರ ರೀತಿಯ ಮಾರಾಟ, ಲೇವಾದೇವಿ ಅನುಭೋಗ ಇತ್ಯಾದಿ ಕ್ರಮಗಳನ್ನು ಪರಿಷ್ಕರಿಸಿ ಯಶಸ್ವಿಯಾಗಿಸಿದ್ದಾರೆ. ಡೇನಿಷ್ ಪ್ರಗತಿದಾಯಕ ಸಹಕಾರ ಪದ್ಧತಿಯು ಭಾರತಕ್ಕೆ ಸರ್ವೋತ್ತಮ ಮಾರ್ಗದರ್ಶಿಯಾಗಿದೆ. ಹೀಗೆ ಡೇನಿಷ್ ಸಹಕಾರ ಪದ್ಧತಿಯು ಇಡೀ ಜಗತ್ತಿಗೆ ಮಾರ್ಗದರ್ಶನ ನೀಡುವ ಜಗಜ್ಯೋತಿಯಾಗಿದೆ.

ರಷ್ಯಾ ದೇಶದಲ್ಲಿಯ ಸಹಕಾರ ಚಳವಳಿ

ಸಹಕಾರಾಭಿವೃದ್ಧಿಯ ಉನ್ನತ ಶಿಬಿರವನ್ನು ರಷ್ಯಾ ದೇಶದಲ್ಲಿ ಕಾಣಬಹುದು. ಆದರೆ ರಷ್ಯಾದೇಶದಲ್ಲಿರುವ ಸಹಕಾರ ಪದ್ಧತಿಗೂ, ಜಗತ್ತಿನ ಇತರ ಭಾಗಗಳಲ್ಲಿರುವ ಸಹಕಾರ ಪದ್ಧತಿಗೂ ವ್ಯತ್ಯಾಸವಿದೆ. ಮೊದಲನೇ ಮಹಾಯುದ್ಧಕ್ಕೆ ಮುಂಚೆ ೨೭೦೦೦ ಸಹಕಾರ ಸಂಘಗಳು ಕೆಲಸ ಮಾಡುತ್ತಿದ್ದವು. ೧೯೧೭ ರಲ್ಲಿ ಸಾಮೂಹಿಕ ಕ್ರಾಂತಿಯ ಫಲವಾಗಿ ಇವುಗಳೆಲ್ಲಾ ಹಾಳಾದ ವು. ಸಾಗುಭೂಮಿಯ ತಾಕುಗಳ ಸಂಖ್ಯೆ ಬಹಳ ವಾಗಿದ್ದುದರಿಂದ ಇತರ ದೇಶದಲ್ಲಿ ಕಂಡುಬಂದ ಆಡಚಣೆಗಳು ಇಲ್ಲಿಯೂ ಕಾಣಿಸಿಕೊಂಡವು. ಮಹಾಕ್ರಾಂತಿಯಾದ ಮೇಲೆ ಅಧಿಕಾರಿಗಳು ವ್ಯವಸಾಯ ಕ್ರಮ ಕೈಗೊಂಡರು. ಇದಕ್ಕಾಗಿ ಸೂಕ್ತ ಕಾನೂನು ಮಾಡಿ, ವ್ಯವಸಾಯವು ಸಾಮೂಹಿಕವಾಗಿಯೇ ನಡೆಯಬೇಕೆಂದು ನಿರ್ಧರಿಸಲಾಯಿತು. ಸಹಕಾರವು ಅಲ್ಲಿಯ ಸರ್ಕಾರದ ಅಂಗವಾಯಿತು. ಸಹಕಾರವನ್ನು ರಾಷ್ಟ್ರೀಕರಣ ಮಾಡಲಾಯಿತು. ಸಹಕಾರದಲ್ಲಿ ಅಡಗಿರುವ ಆರ್ಥಿಕ ಶಕ್ತಿ ಯಾವಾಗ ಜನರಿಗೆ ಗೋಚರವಾಯಿತೋ ಆಗ ಇದು ಜಗತ್ತಿನ ಪ್ರಬಲವಾದ ಪ್ರಗತಿಪರ ಆರ್ಥಿಕ ಮತ್ತು ನೈತಿಕ ಚಳವಳಿ ಎಂಬುದು ರಷ್ಯಾದ ಜನರಿಗೆ ಹೊಳೆಯಿತು.

ಈಗ ರಷ್ಯಾ ದೇಶದಲ್ಲಿ 'ಕಲ್ಲೋಸ' ಅಥವಾ 'ಕೂಡೊಕ್ಕಲುತನ' ಎಂಬ ಸಂಸ್ಥೆಗಳು (ಜಾಯಿಂಟ್ ಫಾರ್ಮಿಂಗ್) ಚೆನ್ನಾಗಿ ಬೇರೂರಿವೆ. ಇವು ಸಹಕಾರ ತತ್ತ್ವವನ್ನು ಅನುಸರಿಸಿ ಕೆಲಸ ಮಾಡುತ್ತಿವೆ.

ಕೂಡೊಕ್ಕಲುತನ, ಜಮೀನು ಸಾಗುವಳಿಗೆ ಸರ್ಕಾರವು ಬೇಕಾದಷ್ಟು ಹಣ ಒದಗಿಸುತ್ತದೆ. ಈ ಸಂಸ್ಥೆಗಳಿಗೆ ರಷ್ಯಾ ಸರ್ಕಾರ ಮಾಡಿರುವಷ್ಟು ಅಪರಿಮಿತ ಸಹಾಯ, ಮಿಕ್ಕ ಯಾವ ಸರ್ಕಾರವು ಈ ಬಗೆಯ ಸಹಕಾರ ಸಂಸ್ಥೆಗಳಿಗೆ ಸಹಾಯ ಮಾಡಿಲ್ಲ. ಈ ಸಂಸ್ಥೆಗಳ ಕಾರ್ಯಕ್ರಮವನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

ಮೂರು, ನಾಲ್ಕು ಗ್ರಾಮಗಳು ಒಟ್ಟಿಗೆ ಸೇರಿ ಸುಮಾರು ೨೩೦ ರಿಂದ ೧೨೦೦೦ ಎಕರೆವರೆಗೆ ವಿಸ್ತಾರವಾಗಿರುವ ಜಮೀನನ್ನು ಸಾಮೂಹಿಕವಾಗಿ ಸಾಗುವಳಿ ಮಾಡುವುದಕ್ಕೆ ಒಂದು ದೊಡ್ಡ ಹಿಡುವಳಿಯಾಗಿ ಮಾಡಿಕೊಳ್ಳುತ್ತವೆ. ಇದರ ಸಾಗುವಳಿಗೆ ಅಗತ್ಯವಾದ ಸಹಾಯ ಸಂಪತ್ತನ್ನು ಒದಗಿಸುವ ಸಂಸ್ಥೆಯನ್ನು ಕೂಡೊಕ್ಕಲುತನ ಎಂದು ಕರೆಯಲಾಗಿದೆ. ಸಾಗುಭೂಮಿಯ ವಿಸ್ತೀರ್ಣವು ಸ್ಥಳೀಯ ವ್ಯವಸಾಯ ಕ್ರಮಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತದೆ. ಈ ಸಂಸ್ಥೆಯು ವ್ಯಾಪ್ತಿಗೊಳಪಟ್ಟ ಪ್ರತಿಯೊಂದು ಗ್ರಾಮದ ರೈತನು ಇದರ ಸದಸ್ಯನಾಗಿರಬೇಕು. ಈ ಸಂಸ್ಥೆಗಳಿಗೆ ಸಾಗುಭೂಮಿ, ಒಕ್ಕಲುಮನೆ, ಗೋಮಾಳ, ವ್ಯವಸಾಯದ ಯಂತ್ರೋಪಕರಣ, ಕುರಿಮಂದೆ ಮುಂತಾದುವನ್ನು ಕೊಳ್ಳುವುದಕ್ಕಾಗಿ ಸರ್ಕಾರವು ಹಣಸಹಾಯ ಮಾಡುವುದು. ಸಂಸ್ಥೆಯ ಅಧೀನದಲ್ಲಿರುವ ಜಮೀನಿನಲ್ಲಿ ಲಾಭದಾಯಕ ಫಸಲು ತೆಗೆಯುವುದಕ್ಕೆ ಸರ್ಕಾರವೆ ವ್ಯವಸ್ಥೆ ಮಾಡುತ್ತದೆ. ಯಾವ ಫಸಲನ್ನು ಬೆಳೆಯಬೇಕು? ಎಷ್ಟು ಬೀಜ ಬಿತ್ತಬೇಕು? ಎಷ್ಟು ಗೊಬ್ಬರ ಹಾಕಬೇಕು? ಎಷ್ಟು ಬೆಳೆ ತೆಗೆಯಬೇಕು? ಮುಂತಾದ ವಿವರಗಳನ್ನು ಸರ್ಕಾರವು ಸಂಘಕ್ಕೆ ತಿಳಿಸುತ್ತದೆ. ಅದರಂತೆ ಸಂಘವು ನಿರ್ಧರಿಸಿ ಕೆಲಸ ಮಾಡಬೇಕು. ವ್ಯವಸಾಯತಜ್ಞರನ್ನು ಸರ್ಕಾರ ಸಂಘಗಳಿಗೆ ಕಳುಹಿಸಿಕೊಡುತ್ತದೆ. ಕೂಲಿಕಾರರ ಯೋಗಕ್ಷೇಮ ಸ್ಥಾಪನೆಗಾಗಿ ಅರ್ಟೆಲ್ಸ್ ಎಂಬ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಸಾಮೂಹಿಕ ವ್ಯವಸಾಯ ಸಹಕಾರ ಸಂಘ, ಸಹಕಾರ ಮಾರಾಟ ಸಂಘ, ಸಹಕಾರ ತೀಯ ಉಗ್ರಾಣ ಎಲ್ಲವೂ ಸ್ಥಾಪಿತವಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಿವೆ. ರಷ್ಯಾದೇಶದ ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಕಾಣುವ ವಿಶೇಷವೆಂದರೆ, ಸ್ತ್ರೀಯರು ಗಮನಾರ್ಹ ರೀತಿಯಲ್ಲಿ ಈ ಸಂಘಗಳ

ಕೆಲಸದಲ್ಲಿ ಪಾತ್ರವಹಿಸುತ್ತಿರುವುದರಿಂದ, ಯೋಜನಾ ಮಂಡಳಿಯು ವಿವಿಧ ಭಾಗಗಳ ರಾಷ್ಟ್ರದ ಉತ್ಪನ್ನವನ್ನು ಸಹಕಾರ ಪದ್ಧತಿಯ ಮೂಲಕ ಹೆಚ್ಚಿಸಬಹುದೆಂಬುದನ್ನು ನಿರ್ಧರಿಸುತ್ತದೆ. ಸರ್ಕಾರವು ಈ ತೀರ್ಮಾನದ ಪ್ರಕಾರ ಸಹಕಾರಾಭಿವೃದ್ಧಿ ಕೆಲಸವನ್ನು ವ್ಯವಸ್ಥೆಪಡಿಸುವುದು.

ಜಪಾನ್ ದೇಶದಲ್ಲಿ ಸಹಕಾರ ಚಳವಳಿ

ಸಹಕಾರ ಪದ್ಧತಿಯು ಜಪಾನ್ ದೇಶದಲ್ಲಿ ಭರತಖಂಡದ ಹಾಗೆ ಸರ್ಕಾರದ ಆಶ್ರಯದಲ್ಲಿ ಸ್ಥಾಪಿತವಾಗಿ ಬೆಳೆಯುತ್ತಿದೆ. ಅಸಂಖ್ಯಾತ ಸಹಕಾರ ಸಂಘಗಳು ಇಲ್ಲಿ ಪ್ರಾರಂಭವಾಗಿ ಕ್ಷಾಮಕಾಲದಲ್ಲಿ ಆಹಾರ ಸಾಮಗ್ರಿ ಒದಗಿಸಿದವು. ರೈತಾಪಿ ಜನಗಳಿಗೆ ಪ್ರಯೋಗಶಾಲೆಗಳ ಮೂಲಕ ವಿಶೇಷ ಸಹಾಯ ಕಲ್ಪಿಸುತ್ತಿವೆ. ಕುರಿ, ಮೇಕೆ, ಕೋಳಿ ಮುಂತಾದ ಪ್ರಾಣಿಗಳನ್ನು ಸಾಕುವ ಕ್ರಮವನ್ನು ತಿಳಿಸಿ ಅವುಗಳಿಂದ ಹೆಚ್ಚು ಸಂಪಾದನೆಯಾಗುವಂತೆ ಮಾಡಿವೆ. ಅಲ್ಲಿಯ ಪ್ರಜಾಸ್ವಾತಂತ್ರ್ಯ ಒಲವು, ಸಹಕಾರ ಪದ್ಧತಿಗೆ ಹೆಚ್ಚಿನ ಪ್ರೋತ್ಸಾಹವನ್ನು, ಅನುಕೂಲಗಳನ್ನು ಕಲ್ಪಿಸಿ ಯಶಸ್ವಿಯಾಗುವಂತೆ ಮಾಡಿದೆ. ಜಪಾನ್ ದೇಶದ ರೈತರ ಸಂಘಗಳು ಸಹಕಾರ ರೀತಿಯಲ್ಲಿ ಕೆಲಸ ಮಾಡುತ್ತಿರುವುದು ಇಲ್ಲಿಯ ವೈಶಿಷ್ಟ್ಯ. ರೈತರ ಸಂಘಗಳು ಅವುಗಳ ಸದಸ್ಯರ ಸಂದಾಯ ಅಪರಿಮಿತವಾಗಿದೆ. ಇಲ್ಲಿರುವ ಸಹಕಾರ ಸಂಘಗಳ ಪೈಕಿ ಮುಕ್ಕಾಲು ಭಾಗಕ್ಕಿಂತ ಹೆಚ್ಚಿನ ಸಂಘಗಳು ರೈತರಿಂದ ತಯಾರಾದ ಪದಾರ್ಥಗಳ ಮಾರಾಟದ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಿವೆ. ರೈತರು ಬೆಳೆಯುವ ಅಕ್ಕಿ, ಬಾರ್ಲಿ, ತರಕಾರಿ ಮುಂತಾದವುಗಳನ್ನು ಈ ಸಂಘಗಳು ಶೇಖರಿಸಿ ಲಾಭ ಬರುವ ರೀತಿಯಲ್ಲಿ ಅದನ್ನು ಮಾರಾಟ ಮಾಡಿ ಬಂದ ಲಾಭವನ್ನು ರೈತರಿಗೆ ಹಂಚುತ್ತಿದೆ. ಏಳು ಸಾವಿರಕ್ಕಿಂತ ಹೆಚ್ಚಿನ ಪ್ರಾಥಮಿಕ ವ್ಯವಸಾಯ ಸಂಘಗಳು ಸರಿಯಾದ ರೀತಿಯಲ್ಲಿ ಸಾಲ, ಮಾರಾಟ, ಗೊಬ್ಬರ, ಬೀಜ, ಶಿಕ್ಷಣ ಮುಂತಾದ ಸೌಕರ್ಯಗಳನ್ನು ಒದಗಿಸುತ್ತದೆ.

ಅಮೇರಿಕಾ ಕೆನಡಾ ದೇಶಗಳಲ್ಲಿ ಕೂಡ ಡೆನ್ಮಾರ್ಕ್‌ನಂತೆ ಸಹಕಾರ ಮಾರಾಟ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ಒಟ್ಟು ವ್ಯಾಪಾರದ ಶೇಕಡ ೭೫ ರಷ್ಟನ್ನು ಸಹಕಾರ ಪದ್ಧತಿಯಲ್ಲಿಯೇ ನಡೆಸುತ್ತಿವೆ.

ಯೂರೋಪ್ ಖಂಡದ ಸಹಕಾರ ಪದ್ಧತಿಯನ್ನು ಆದರ್ಶವಾಗಿಟ್ಟುಕೊಂಡು, ಅಮೇರಿಕವು ಸಹಕಾರ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳನ್ನು ಕಳುಹಿಸಿ ಅವರು ಶಿಕ್ಷಣ ಪಡೆದು ಪ್ರಯೋಗಶಾಲೆಯಲ್ಲಿ ಅನುಭವ ಪಡೆದು ಬಂದ ನಂತರ ತಮ್ಮ ಸಹಕಾರ ಪದ್ಧತಿಯನ್ನು ಅಭಿವೃದ್ಧಿ ಪಡಿಸಿವೆ. ಆಗಾಗ್ಗೆ ಅಧಿಕಾರಿಗಳನ್ನು ಸಮಿತಿಗಳನ್ನು, ಇತರ ದೇಶಗಳಿಗೆ ಕಳುಹಿಸಿ ಅಲ್ಲಿಯ ಸಹಕಾರ ಪದ್ಧತಿಯನ್ನು ಆಳವಾಗಿ ವ್ಯಾಸಂಗ ಮಾಡಿ ಬರುವಂತೆ ಅವರಿಂದ ಸೂಚನೆಯನ್ನು ಪಡೆದು ಸಹಕಾರಾಭಿವೃದ್ಧಿಗೆ ಅದು ಸರ್ವ ಪ್ರಯತ್ನ ಮಾಡಿದೆ.

ಅಮೇರಿಕಾ ದೇಶದ ಸಹಕಾರ ಸಂಘಗಳು ಪ್ರಗತಿ ಪಥದ ಶಿಖರವನ್ನು ಮುಟ್ಟಿವೆ. ಸ್ಥಳೀಯವಾದ ಪ್ರತಿಯೊಂದು ಸಂಘವು ತನ್ನದೇ ಆದ ಲಾರಿ, ವ್ಯಾಗನ್, ಟೆಲಿಫೋನ್ ಮುಂತಾದ ಸಾರಿಗೆ ಸೌಕರ್ಯವನ್ನು ಹೊಂದಿ ಸರಬರಾಜು ಮಾಡುತ್ತಿವೆ. ಅಲ್ಲಿಯ ವ್ಯವಸಾಯ ಸಂಘಗಳು ಪೆಟ್ರೋಲ್ ಎಣ್ಣೆಯಿಂದ ಹಿಡಿದು ವ್ಯವಸಾಯಕ್ಕೆ ಅಗತ್ಯವಾದ ಎಲ್ಲಾ ಸಲಕರಣೆಗಳನ್ನು ಸರಬರಾಜು ಮಾಡುತ್ತಿದೆ. ಸಹಕಾರ ರೀತಿಯು ಪದಾರ್ಥಗಳ ವಿತರಣೆಯೂ ಕೂಡ ಬಹು ವಿಸ್ತಾರವಾಗಿ ನಡೆಯುತ್ತಿವೆ. ೧೯೬೦ ರಿಂದ ಈಚೆಗೆ ಪ್ರತಿವರ್ಷವು ವ್ಯವಸಾಯದ ರಸಾಯನಿಕ ಸರಬರಾಜು ಶೇಕಡ ೧೦ ರಂತೆ ವೃದ್ಧಿಯಾಗುತ್ತಿದೆ. ಈ ಸಂಘಗಳು ಸರಬರಾಜು ಮಾಡುತ್ತಿರುವ ಇನ್ನೊಂದು ಮುಖ್ಯ ಪದಾರ್ಥ, ದನಕರುಗಳ ಮೇವು. ಇಡೀ ರಾಷ್ಟ್ರಕ್ಕೆ ಬೇಕಾದ ದನಕರುಗಳ ಮೇವಿನ ಮೂರನೆಯ ಒಂದು ಭಾಗ ಪ್ರಮಾಣದಷ್ಟನ್ನು ಸಹಕಾರ ಸಂಘಗಳು ಸರಬರಾಜು ಮಾಡುತ್ತಿವೆ. ರೈತರಿಗೆ ಬೇಕಾದ ಸಮಸ್ತ ವಸ್ತುಗಳನ್ನು ಮಾರಾಟ ಮಾಡುತ್ತಿವೆ.

ಇತ್ತೀಚೆಗೆ ಸಹಕಾರ ಪದ್ಧತಿಯಲ್ಲಿ ಅಮೇರಿಕಾ ದೇಶದ ಹೊಸ ಪ್ರಯೋಗವೆಂದರೆ ಕೃಷಿಕ್ಷೇತ್ರ ಸೇವಾಕೇಂದ್ರ. ಇದೂ ಒಂದು ಹೊಸ ಬಗೆಯ ಪ್ರಗತಿ ವಿಧಾನ. ಈ ಕೇಂದ್ರಗಳಲ್ಲಿ ಎಲ್ಲಾ ಬಗೆಯ ವಸ್ತುಗಳ ಮಾರಾಟದ ಜೊತೆಗೆ ಲಾರಿ, ಮೋಟಾರು ರಿಪೇರಿ, ಭೋಜನ ಸೌಕರ್ಯ ಮುಂತಾದ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಇಡೀ ದಿನವೆಲ್ಲಾ

ಅಂದರೆ ೨೪ ಗಂಟೆಗಳ ಕಾಲ ಈ ಸಂಘಗಳು ಸೇವಾಕಾರ್ಯ ಕೈಗೊಳ್ಳುತ್ತಿವೆ.

ಅಮೇರಿಕಾ ದೇಶದ ಇಡೀ ಜನಸಂಖ್ಯೆಯ ಶೇಕಡ ೨೫ ರಷ್ಟು ಭಾಗದ ರೈತರಿಗೆ ಕೃಷಿಕ್ಷೇತ್ರದ ಸವಲತ್ತುಗಳನ್ನು ಮತ್ತು ನಿತ್ಯಬಳಕೆಯ ಪದಾರ್ಥಗಳನ್ನು ಈ ಸಹಕಾರ ಸಂಘಗಳು ಸರಬರಾಜು ಮಾಡುತ್ತಿವೆ.

ಗ್ರಾಮಾಂತರ ಪತ್ತಿನ ಪರಿಶೀಲನಾ ಸಮಿತಿ - ಗೋರವಾಲ್ ಸಮಿತಿ

ಭಾರತವು ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮುಖಾಂತರ ಆರ್ಥಿಕಾಭಿವೃದ್ಧಿ ಸಾಧಿಸಲು ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಗ್ರ ಆರ್ಥಿಕಾಭಿವೃದ್ಧಿ ಸಾಧಿಸಲು ಯೋಜಿಸಿತು. ಅದರಂತೆ ಸಹಕಾರ ಕ್ಷೇತ್ರದಲ್ಲಿನ ಅಭಿವೃದ್ಧಿಗಾಗಿ ಅಧ್ಯಯನ ನಡೆಸಿ ಶಿಫಾರಸ್ಸು ಪಡೆಯಲು ೧೯೫೨ ರಲ್ಲಿ ಶ್ರೀ ಗೋರವಾಲರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಸಹಕಾರ ಕ್ಷೇತ್ರದ ಹಿಂದಿನ ಅಭಿವೃದ್ಧಿಗಳನ್ನು ಮತ್ತು ಮುಂದಿನ ಅಭಿವೃದ್ಧಿಗಾಗಿ ಬೇಕಾಗಿರುವ ಸಲಹೆ - ಸೂಚನೆಗಳನ್ನು ೧೯೫೪ ರಲ್ಲಿ ಸಲ್ಲಿಸಿತು. ಈ ಸಮಿತಿಯ ಶಿಫಾರಸ್ಸುಗಳು ಮಹತ್ವಪೂರ್ಣವಾಗಿದ್ದು, ಸಹಕಾರಿ ಆಂದೋಲನದ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲಾಗಿದೆ. ಅದು "ಸಹಕಾರವು ಅಯಶಸ್ವಿಯಾಗಿದೆ, ಆದರೆ ಅದು ಯಶಸ್ಸನ್ನು ಪಡೆಯಲೇಬೇಕು" ಎಂದು ಘಂಟಾಘೋಷವಾಗಿ ಹೇಳಿತು. ಸಹಕಾರವು ಅಯಶಸ್ವಿಯಾಗಲಿಕ್ಕೆ ಕಾರಣಗಳೇನೆಂಬುದನ್ನು ಶೋಧಿಸಿ ಅವುಗಳನ್ನು ನಿವಾರಿಸಲಿಕ್ಕೆ ಮತ್ತು ಸಹಕಾರಿ ಆಂದೋಲನದ ಬೆಳವಣಿಗೆಗೆ ಉಪಯುಕ್ತ ಸೂಚನೆಗಳನ್ನು ನೀಡಿತು.

ಗೋರವಾಲ ಸಮಿತಿಯುವರು ವೇಳೆಗೆ ಸರಿಯಾಗಿ ಕಡಿಮೆ ಬಡ್ಡಿಯಿಂದ ಉತ್ಪಾದನೆಗೆ ಅವಶ್ಯವಾಗಿರುವ ಪತ್ತನ್ನು ಪೂರೈಸುವ ಸಲುವಾಗಿ ಕೆಲವು ಮಹತ್ವದ ಸೂಚನೆಗಳನ್ನು ನೀಡಿದ್ದಾರೆ. ಸಹಕಾರಿ ಪತ್ತು ವಿಫಲವಾಗಲು ಒಳಗಿನ ಮತ್ತು ಹೊರಗಿನ ಕಾರಣಗಳು ಸಾಕಷ್ಟಿವೆ. ಕ್ರಿಯಾತ್ಮಕ, ರಚನಾತ್ಮಕ ಮತ್ತು ಆಡಳಿತಾತ್ಮಕ ಸಂಬಂಧದ ನ್ಯೂನತೆಗಳಲ್ಲದೆ ಸಂಘಗಳನ್ನು ಸಾಗಿಸಿಕೊಂಡು ಹೋಗಲು ತರಬೇತಿ ಹೊಂದಿದ ಸಿಬ್ಬಂದಿಯ

ಅಭಾವವು ಒಂದು ಕಾರಣ ಎಂದಿದೆ. ಇದು ಅಲ್ಲದೆ ಜನರ ಅಜ್ಞಾನ, ಸುಧಾರಿಸಿದ ವಾಹನ ಮತ್ತು ರಸ್ತೆಗಳ ಅಭಾವ, ಆರ್ಥಿಕ ಸಹಾಯವಿಲ್ಲದಿರುವುದು ಇವೆಲ್ಲವೂ ಬಾಹ್ಯ ಕಾರಣಗಳಾಗಿವೆ.

ಮೇಲೆ ವಿವರಿಸಿದ ಕಾರಣಗಳಲ್ಲದೆ ಆಳವಾದ ಬೇರೆ ಕಾರಣಗಳೂ ಉಂಟು. ಅವು ಮುಖ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಹಳ್ಳಿಯ ವ್ಯಾಪಾರಸ್ಥರು, ಸಾಹುಕಾರರಲ್ಲದೆ ಇತರೆ ಸ್ವಾರ್ಥಿಗಳನ್ನು ಸಹಕಾರಿ ಸಂಘವು ಎದುರಿಸಬೇಕಾಗುತ್ತದೆ. ಹಳ್ಳಿಗಳಲ್ಲಿ ವಿಶೇಷವಾಗಿ ಸಂಘದ ನಿರ್ದೇಶಕರು, ಅಧ್ಯಕ್ಷರು ಆಗಿರುತ್ತಾರೆ. ಇಂತಹವರು ಒಳಗಿನಿಂದಲೇ ಸಂಘದ ಪ್ರಗತಿಗೆ ಆತಂಕಕಾರಿಗಳಾಗಿರುತ್ತಾರೆ.

ಈ ಸಮಸ್ಯೆಗಳನ್ನು ಸಮರ್ಪಕವಾಗಿ ಎದುರಿಸುವುದು ಸಹಕಾರದ ಸಹಾಯದಿಂದಲೆ ಸಾಧ್ಯ. ಈ ಸಹಾಯವು ಸಾಕಷ್ಟು ಪ್ರಮಾಣದಲ್ಲಿರ ಬೇಕು. ಅವುಗಳಿಗೆ ಅವಶ್ಯವಿರುವ ಪ್ರಕಾರದ್ದಾಗಿರಬೇಕು. ಅಂದರೆ ಮಾತ್ರ ಪ್ರಬಲ ಹಿತಾಸಕ್ತಿಗಳ ಎದುರು ನಿಲ್ಲಲಿಕ್ಕೆ ಸಾಧ್ಯವಾಗುತ್ತದೆ. ಗ್ರಾಮಾಂತರ ಪತ್ತು ಪರಿಶೀಲನಾ ಸಮಿತಿಯ ಮುಖ್ಯ ಶಿಫಾರಸ್ಸುಗಳು ಯಾವುವೆಂದರೆ ಸಾಲದ ಸಮಗ್ರ ಕಾರ್ಯ ಯೋಜನೆಗೆ ಆಧಾರವಾದ ಮೂರು ಮೂಲ ತತ್ತ್ವಗಳು ಇಂತಿವೆ.

೧. ವಿವಿಧ ಮಟ್ಟಗಳಲ್ಲಿನ ಸಹಕಾರ ಸಂಘ ಸಂಸ್ಥೆಗಳಲ್ಲಿ ಸರ್ಕಾರದ ಪಾಲುಗಾರಿಕೆ.

೨. ಸಾಲ ಮತ್ತಿತರ ಅದರಲ್ಲೂ ಮಾರಾಟ ಮತ್ತು ರೂಪಾಂತರ ಆರ್ಥಿಕ ಕಾರ್ಯ ಚಟುವಟಿಕೆಗಳಲ್ಲಿ ಪೂರ್ಣ ಹೊಂದಾಣಿಕೆ.

೩. ಹಳ್ಳಿಗಳ ಅಗತ್ಯಗಳನ್ನು ಅರಿತ ತರಬೇತಿ ಪಡೆದ ದಕ್ಷತೆಯುಳ್ಳ ಸಿಬ್ಬಂದಿಯ ಮೂಲಕ ಸಹಕಾರಿ ಸಂಘಗಳ ಆಡಳಿತ. ಅಲ್ಲದೆ ಇತರ ಮುಖ್ಯ ಶಿಫಾರಸ್ಸುಗಳೆಂದರೆ,

೧. ಸಹಕಾರಿ ಸಂಘಸಂಸ್ಥೆಗಳ ಶೇರು ಬಂಡವಾಳದಲ್ಲಿ ಸರ್ಕಾರ ಪಾಲ್ಗೊಳ್ಳಬೇಕು.

೨. ಸರ್ಕಾರದ ಪಾಲುಗಾರಿಕೆಯು ಆಧಾರದ ಮೇಲೆ, ಎಲ್ಲಾ ಮಟ್ಟಗಳಲ್ಲಿನ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ, ವ್ಯವಸಾಯ ಸಾಲದ ಸಂಸ್ಥೆಗಳು, ಮಾರಾಟ ಮತ್ತು ರೂಪಾಂತರ ಸಂಘಗಳು, ಹೈನುಗಾರಿಕೆ ಸಂಘಗಳು ಮುಂತಾದವುಗಳನ್ನು ಪುನರ್ ರಚಿಸಲು ರಾಜ್ಯಸರ್ಕಾರಗಳು ಸಾಧ್ಯವಾದಷ್ಟು ಬೇಗ ಕಾರ್ಯಕ್ರಮಗಳನ್ನು ರೂಪಿಸಬೇಕು.

೩. ಶೇರು ಬಂಡವಾಳದಲ್ಲಿ ಸರ್ಕಾರದ ಪಾಲುಗಾರಿಕೆಯು, ರಾಜ್ಯ ಸಹಕಾರಿ ಬ್ಯಾಂಕು ಮತ್ತು ಮಾರಾಟ ಹಾಗೂ ರೂಪಾಂತರ ಸಂಘಗಳು ನೇರವಾಗಿ ಜಿಲ್ಲಾಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ಪ್ರಾಥಮಿಕ ವ್ಯವಸಾಯ ಸಾಲದ ಸಂಘಗಳಲ್ಲಿ ಪರೋಕ್ಷ ವಾಗಿರಬೇಕು.

೪. ರಾಜ್ಯ ಸಹಕಾರಿ ಬ್ಯಾಂಕಿನಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಅಂತಹದೇ ಆದ ಸಾಲದ ಸಂಸ್ಥೆಗಳಿಗೆ ಪ್ರವೇಶವಿರಬೇಕು. ವೈಯಕ್ತಿಕ ಸದಸ್ಯತ್ವವನ್ನು ಪರಿಮಿತಗೊಳಿಸಬೇಕು.

೫. ಎಲ್ಲಾ ಜಿಲ್ಲೆಗಳಲ್ಲಿ ಕೇಂದ್ರ ಸಹಕಾರಿ ಬ್ಯಾಂಕುಗಳಿರಬೇಕು. ಅಲ್ಪಾವಧಿ - ಮಧ್ಯಮಾವಧಿ ಸಾಲ ಹಂಚಿಕೆಗೆ ಮಾತ್ರ ಅವುಗಳ ಕಾರ್ಯ ಪರಿಮಿತಗೊಂಡಿರಬೇಕು. ಇತರ ವ್ಯಾಪಾರದ ಕಾರ್ಯ ಚಟುವಟಿಕೆಗಳಲ್ಲಿ ಅವು ತೊಡಗಬಾರದು.

೬. ಸಹಕಾರಿ ಸಂಸ್ಥೆಯ ಶೇರು ಬಂಡವಾಳದಲ್ಲಿ ಪಾಲ್ಗೊಂಡ ಸರ್ಕಾರ ಸ್ಥಳೀಯ ಆಡಳಿತ ಮಂಡಳಿಗೆ ಹೆಚ್ಚೆಂದರೆ ಮೂರರಲ್ಲೊಂದು (೧/೨) ಭಾಗದಷ್ಟು ಪ್ರತಿನಿಧಿಗಳನ್ನು ನಾಮಕರಣ ಮಾಡಬಹುದು.

೭. ಹಳ್ಳಿಗೊಂದು ಸಂಘ, ಸಂಘಕ್ಕೊಂದು ಹಳ್ಳಿ ಎನ್ನುವ ತತ್ತ್ವ ಭಾರತದಲ್ಲಿ ವಿಫಲಗೊಂಡುದರಿಂದ ಕನಿಷ್ಠ ಐದು ನೂರು, ಹೆಚ್ಚೆಂದರೆ ಒಂದು ಸಾವಿರ ಜನ ಸದಸ್ಯರು, ಸಾಕಷ್ಟು ಶೇರು ಹಣ, ಸಾಕಷ್ಟು ವ್ಯವಹಾರದಂತೆ ಹಳ್ಳಿಗಳ ಗುಂಡಿಗೊಂದರಂತೆ ದೊಡ್ಡ ಪ್ರಮಾಣದ ವ್ಯವಸಾಯ ಸಾಲದ ಸಂಘವಿರಬೇಕು. ಈ

ಸಂಘವು ಕೇಂದ್ರ ಸ್ಥಳದಲ್ಲಿರಬೇಕು. ಸಂಘಕ್ಕೆ ತನ್ನದೇ ಆದ ಕಾರ್ಯಾಲಯ, ಗೋದಾಮು ಇರಬೇಕು. ಸಂಘದಲ್ಲಿ ತರಬೇತಿ ಪಡೆದ ಪೂರ್ಣಾವಧಿ ವೇತನದ ಕಾರ್ಯದರ್ಶಿ ಇರಬೇಕು.

೮. ಇರುವ ಸಣ್ಣ ಪ್ರಮಾಣದ ವ್ಯವಸಾಯ ಸಾಲದ ಸಂಘಗಳನ್ನು ಸಂಯೋಜಿಸಬೇಕು. ಇಲ್ಲವೇ ಪುನಶ್ಚೇತನಗೊಳಿಸಬೇಕು.

೯. ಪ್ರಾಥಮಿಕ ಸಂಘ ನಿಯಮಿತ ಹೊಣೆಗಾರಿಕೆಯದಾಗಿರಬೇಕು.

೧೦. ಹಳ್ಳಿಯ ಸಣ್ಣಪುಟ್ಟ ರೈತರು, ರೈತ ಕಾರ್ಮಿಕರು ಮತ್ತು ಕುಶಲಕರ್ಮಿಗಳೆಲ್ಲರೂ ಸಂಘದ ಸದಸ್ಯರಾಗಲು ಅವಕಾಶವಿರಬೇಕು.

೧೧. ವ್ಯವಸಾಯ ಸಾಲದ ಸಂಘಗಳ ಸದಸ್ಯರಿಗೆ ಉತ್ಪಾದನಾ ಉದ್ದೇಶಿತ ಸಾಲ ಅಥವಾ ಬೆಳೆಸಾಲ ದೊರೆಯಬೇಕು. ಸದಸ್ಯರಿಗೆ ಭೂಮಿ ಆಧಾರದ ಬದಲು ಅವರು ಬೆಳೆಯಬಹುದಾದ ಬೆಳೆಯ ಆಧಾರದ ಮೇಲೆ ಅಲ್ಪಾವಧಿ ಸಾಲವನ್ನು ನೀಡಬಹುದು. ಸಾಧ್ಯವಾದಷ್ಟು ವಸ್ತುಗಳ ರೂಪದಲ್ಲಿ ಈ ಸಾಲವನ್ನೀಯಬೇಕು.

೧೨. ಹಳ್ಳಿಯ ಕಸುಬುದಾರರ ಬೇಡಿಕೆಯನ್ನು ಪ್ರಾಥಮಿಕ ಸಂಘಗಳೆ ಈಡೇರಿಸಬೇಕು. ಅದಕ್ಕಾಗಿ ಸರ್ಕಾರ ಸಾಕಷ್ಟು ಭರವಸೆ ನೀಡಬೇಕು.

೧೩. ಸಾಲ ಮತ್ತು ಮಾರಾಟ ಸಂಯೋಜನೆಯಾಗಬೇಕು.

೧೪. ಪ್ರತಿಯೊಂದು ರಾಜ್ಯದಲ್ಲೂ ಕೇಂದ್ರ ಭೂ ಅಡಮಾನ ಬ್ಯಾಂಕು ಇರಬೇಕು.

೧೫. ಭೂ ಅಡಮಾನ ಬ್ಯಾಂಕುಗಳು ಹಳೆಯ ಸಾಲ ತೀರಿಸಲು ಸಾಲ ನೀಡುವುದಲ್ಲದೆ ಭೂ ಅಭಿವೃದ್ಧಿ, ಒಡ್ಡು ಮತ್ತು ನೀರಾವರಿ ಬಾವಿ ನಿರ್ಮಾಣ, ಪಂಪ್‌ಸೆಟ್ ಜೋಡಣೆ, ಕೃಷಿ ಯಂತ್ರೋಪಕರಣಗಳ ಖರೀದಿ-ಮುಂತಾದವುಗಳಿಗೆ ಸಾಲ ನೀಡುವುದಕ್ಕೆ ಅವಕಾಶವಿರಬೇಕು.

೧೬. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು ಐದು, ಹತ್ತು, ಹದಿನೈದು ವರ್ಷದ ಅವಧಿಯ ಡಿಬೆಂಚರ್ ಸಾಲ ಎತ್ತಬೇಕು.

೧೭. ರಾಜ್ಯ ಮಟ್ಟದಲ್ಲಿರುವ ಮಾರಾಟ ಸಂಘಗಳು ಪುನರ್ರಚನೆಯಾಗಬೇಕು. ಎಲ್ಲಾ ರಾಜ್ಯಗಳಲ್ಲೂ ರಾಜ್ಯ ಸಹಕಾರಿ ಮಾರಾಟ ಸಂಘಗಳನ್ನು ಸ್ಥಾಪಿಸಬೇಕು.

೧೮. ಪ್ರಾಥಮಿಕ ಮಾರಾಟ ಕೇಂದ್ರ, ತಾಲ್ಲೋಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿ ಸಹಕಾರಿ ಮಾರಾಟ ಮತ್ತು ರೂಪಾಂತರ ಸಂಘಗಳನ್ನು ಸಂಘಟಿಸಬೇಕು.

೧೯. ಸಹಕಾರಿ ಸಂಸ್ಥೆಗಳಿಗೆ ಹಣಕಾಸನ್ನು ಒದಗಿಸಲು ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಬ್ಯಾಂಕಿಂಗ್ ಸೌಲಭ್ಯ ಒದಗಿಸಲು ಸಾಧ್ಯವಾಗುವಂತೆ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಇದನ್ನು ರಾಷ್ಟ್ರೀಕರಿಸಿ ಭಾರತೀಯ ಸ್ಟೇಟ್ ಬ್ಯಾಂಕನ್ನು ಸ್ಥಾಪಿಸಬೇಕು.

೨೦. ಭಾರತೀಯ ರಿಸರ್ವ್ ಬ್ಯಾಂಕ್ ರಾಷ್ಟ್ರೀಯ ವ್ಯವಸಾಯ ಸಾಲ (ದೀರ್ಘಾವಧಿ ನಿಧಿಯನ್ನು ರಚಿಸಬೇಕು). ಈ ನಿಧಿಗೆ ವರ್ಷಕ್ಕೆ ೫ ಕೋಟಿ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಹಣವನ್ನು ನೀಡಬೇಕು. ಈ ನಿಧಿಯ ಹಣವನ್ನು ಅಪೆಕ್ಸ್ ಬ್ಯಾಂಕುಗಳಿಗೆ, ಭೂ ಅಡಮಾನ ಬ್ಯಾಂಕುಗಳಿಗೆ ಮತ್ತು ಸಹಕಾರ ಸಂಸ್ಥೆಗಳಲ್ಲಿ ಪಾಲುಗಾರಿಕೆ ಪಡೆಯಲು ಸರ್ಕಾರಕ್ಕೆ ದೀರ್ಘಾವಧಿ ಸಾಲ ನೀಡುವುದು.

೨೧. ಕೇಂದ್ರ ಸರ್ಕಾರ ರಾಷ್ಟ್ರಮಟ್ಟದಲ್ಲೊಂದು, ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಹಾಗೂ ಉಗ್ರಾಣ ಮಹಾಮಂಡಲ ಸ್ಥಾಪಿಸಬೇಕು.

೨೨. ಹೆಚ್ಚು ಜನ ರೈತರು ಸಹಕಾರ ಸಾಲದ ಕ್ಷೇತ್ರದಲ್ಲಿ ಬರುವಂತೆ ಪ್ರಯತ್ನಿಸಬೇಕು.

೨೩. ಸಹಕಾರ ಸಂಘಗಳ ಸಂಘಟನೆಗಾಗಿ, ರಾಜ್ಯ ಸರ್ಕಾರಗಳು ಸಾಧ್ಯವಿದ್ದ ಎಲ್ಲಾ ಪ್ರಯತ್ನ ಕೈಗೊಳ್ಳಬೇಕು.

೨೪. ಭಾರತದ ರಿಸರ್ವ್ ಬ್ಯಾಂಕಿನ, ವ್ಯವಸಾಯ ಸಾಲ ವಿಭಾಗದಲ್ಲಿ ಸಹಕಾರ ತರಬೇತಿ ಕುರಿತು ಕೇಂದ್ರ ಸಮಿತಿಯನ್ನು ರಚಿಸಬೇಕು.

೨೫. ಈ ಸಮಿತಿ ಸಹಕಾರ ಇಲಾಖೆ ಮತ್ತು ಸಹಕಾರಿ ಸಂಸ್ಥೆಗಳ ಅಧಿಕಾರಿಗಳಿಗೆ ಸಹಕಾರದ ಬಗ್ಗೆ ಶಿಕ್ಷಣ ನೀಡಬೇಕು.

ಈ ಎಲ್ಲಾ ಶಿಫಾರಸ್ಸುಗಳೊಂದಿಗೆ ೧೯೫೪ ರಲ್ಲಿ ಆರ್.ಡಿ. ಗೋರವಾಲ್ ಸಮಿತಿ ತನ್ನ ವರದಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಿತು. ಇದನ್ನು ೧೯೫೫ ರಲ್ಲಿ ಸೇರಿದ್ದ ರಾಜ್ಯ ಸಹಕಾರ ಮಂತ್ರಿಗಳ ಸಮ್ಮೇಳನ ಪರಿಶೀಲಿಸಿ ಎಲ್ಲಾ ಸಲಹೆಗಳನ್ನು ಕಾರ್ಯಾಚರಣೆಗೆ ತರಬೇಕೆಂದು ತೀರ್ಮಾನಿಸಿತು.

ಸಹಕಾರ ಪತ್ತಿನ ಸಮಿತಿ-ಮೆಹತಾ ಸಮಿತಿ (೧೯೫೯)

ಎರಡನೆಯ ಯೋಜನಾವಧಿಯಲ್ಲಿ ವ್ಯವಸಾಯ ಸಾಲದ ಹಾಗೆಯೇ ವ್ಯವಸಾಯ ಹುಟ್ಟುವಳಿಗಳು, ಮಾರಾಟ, ರೂಪಾಂತರ ಕಾರ್ಯಚಟುವಟಿಕೆಗಳು ಯಶಸ್ವಿಯಾಗಲು ಅವಕಾಶವಿತ್ತು. ಆದರೆ ವ್ಯವಸಾಯದ ಸಮಸ್ಯೆ ಅಷ್ಟರಿಂದಲೆ ಬಗೆಹರಿಯುವಂತಿರಲಿಲ್ಲ. ಆದ್ದರಿಂದ ಹಳ್ಳಿಗೊಂದು ವ್ಯವಸಾಯೋತ್ಪಾದನಾ ಯೋಜನೆಯಿದ್ದರೆ ಸಾಲ ಪಡೆಯಲು ರೈತರಲ್ಲಿ ಅರ್ಹತೆ ಹೆಚ್ಚುವುದೆಂದು, ಕೇಂದ್ರ ಸರ್ಕಾರ, ಯೋಜನಾ ಆಯೋಗ ಮತ್ತು ರಿಸರ್ವ್ ಬ್ಯಾಂಕಿನ ಅಧಿಕಾರಿಗಳ ತಂಡವೊಂದು ಅಭಿಪ್ರಾಯ ಪಟ್ಟಿತು. ಈ ಕಾರಣಕ್ಕಾಗಿ ಕೇಂದ್ರಸರ್ಕಾರ ೧೯೫೯ ರ ಸೆಪ್ಟೆಂಬರ್‌ನಲ್ಲಿ ಶ್ರೀ ವಿ.ಎಲ್. ಮೆಹ್ತಾರವರ ಅಧ್ಯಕ್ಷತೆಯಲ್ಲಿ ಸಹಕಾರ ಪತ್ತಿನ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯಲ್ಲಿ ಈ ಕೆಳಗಿನ ಅಂಶಗಳನ್ನು ಪರಿಶೀಲಿಸಲು ಸಲಹೆ ನೀಡಲು ನೇಮಿಸಲಾಯಿತು.

೧. ವ್ಯವಸಾಯ ಸಾಲದ ಸಮಿತಿ

೨. ಸಹಕಾರ ಸಂಸ್ಥೆಗಳ ಸಾಲ ನೀತಿ

೩. ವ್ಯವಸಾಯ ಸಾಲದ ಸಂಸ್ಥೆಗಳ ಸ್ಥಿತಿ-ಗತಿ

೪. ಪ್ರಾಥಮಿಕ ವ್ಯವಸಾಯ ಸಾಲ ಸಂಘಗಳ ಸಾಲ ಪಡೆಯುವ ಸಾಮರ್ಥ್ಯದಲ್ಲಿ ಹೆಚ್ಚಳ

೫. ವ್ಯವಸಾಯ ಉತ್ಪಾದನಾ ಯೋಜನೆಗಳಿಗೆ ಅಧಿಕ ಸಾಲ ಸೌಲಭ್ಯ

೬. ಹಳ್ಳಿಯ ಸರ್ಕಾರ ಸಂಘಗಳಲ್ಲಿ ಸರ್ಕಾರ ಪಾಲ್ಗೊಳ್ಳಲು ಅವಕಾಶ

ಮೇಲಿನ ಅಂಶಗಳನ್ನು ಪರಿಶೀಲಿಸಲು ಈ ಸಮಿತಿಯ ಸದಸ್ಯರು ಒಟ್ಟಾಗಿ ಒಬ್ಬೊಬ್ಬರು ದೇಶದಲ್ಲಿನ ವಿವಿಧ ಬಗೆಯ ಸುಮಾರು ೯೦

ಸಂಘಗಳಿಗೆ ಭೇಟಿಕೊಟ್ಟು ಪರಿಶೀಲನಾ ಅವಧಿಯಲ್ಲಿ ಕಂಡುಬಂದ ಅಂಶವೆಂದರೆ ಆರ್ಥಿಕ ಬಲವಿಲ್ಲದ ಸಂಘಗಳ ಸಂಖ್ಯೆ ಹೆಚ್ಚಾಗಿದ್ದು ಸಮರ್ಪಕವಾಗಿ ಕಾರ್ಯಮಾಡುತ್ತಿಲ್ಲ. ಹಾಗೂ ಶೇಕಡ ೪೪ರಷ್ಟು ಜಿಲ್ಲಾಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಆಂತರಿಕ ಸಂಪನ್ಮೂಲಗಳು ಮತ್ತು ದುಡಿಯುವ ಬಂಡವಾಳವಿಲ್ಲವೆಂದು ಕಂಡುಬಂದಿತು. ಈ ಹಿನ್ನೆಲೆಯಲ್ಲಿ ಈ ಕೆಳಗಿನ ಸಲಹೆಗಳನ್ನು ಈ ಸಮಿತಿ ನೀಡಿತು.

೧. ಗ್ರಾಮ ವ್ಯವಸಾಯ ಉತ್ಪಾದನಾ ಯೋಜನೆಗೆ ಹೆಚ್ಚು ಸಂಖ್ಯೆಯಲ್ಲಿ ತಾಂತ್ರಿಕ ಸಿಬ್ಬಂದಿ ಅಗತ್ಯವಿದ್ದು ಅಷ್ಟೊಂದು ಸಿಬ್ಬಂದಿಯನ್ನು ದೊರಕಿಸಲು ಈಗ ಸಾಧ್ಯವಿಲ್ಲದ ಕಾರಣ ರೈತನಿಗೆ ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುವಂತೆ ಸಾಲ ಮತ್ತಿತರ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಈ ಕಾರಣಕ್ಕಾಗಿ ಹಳ್ಳಿಯ ಸಂಘಗಳನ್ನು ಬಲಪಡಿಸಬೇಕು.

೨. ಸೇವೆ ಸಲ್ಲಿಸಲು ವ್ಯವಹಾರ ಕೈಗೊಳ್ಳಲು ಆರ್ಥಿಕ ಘಟಕಗಳಾಗಬಲ್ಲ ಸಹಕಾರಿ ಸಂಘಗಳನ್ನು ಸಂಘಟಿಸಬೇಕು. ಈ ಸಂಘಗಳ ಕಾರ್ಯಕ್ಷೇತ್ರ ಹೆಚ್ಚೆಂದರೆ ೪ ಮೈಲಿಯಿರಬೇಕು. ಸರಾಸರಿ ೩೦೦೦ ಜನಸಂಖ್ಯೆ ಇರುವ ಪ್ರದೇಶವಿರಬೇಕು. ಸಂಘಗಳ ಸಿಬ್ಬಂದಿ ವೆಚ್ಚಕ್ಕಾಗಿ ಸರ್ಕಾರ ಧನಸಹಾಯ ನೀಡಬೇಕು.

೩. ಸಂಘವೊಂದರಲ್ಲಿ ಸರ್ಕಾರ ೧೦೦೦ ರೂಪಾಯಿಗಳಿಂದ ೧೦,೦೦೦ ರೂಪಾಯಿಗಳವರೆಗೆ ಷೇರು ಹಣವನ್ನು ನೀಡಬಹುದು ಅಥವಾ ಸದಸ್ಯರು ನೀಡಿದ ಷೇರು ಹಣಕ್ಕೆ ಸಮವಾಗುವಷ್ಟು ಹಣವನ್ನು ನೀಡಬಹುದು ಮತ್ತು ಹರಿಜನ ಗಿರಿಜನ ಸಹಕಾರಿ ಸಂಘಗಳಲ್ಲಿ ಸರ್ಕಾರ ಹೆಚ್ಚು ಷೇರು ಹಣ ನೀಡಬಹುದು.

೪. ಸಂಘದ ಷೇರು ಹಣದಲ್ಲಿ ಸರ್ಕಾರ ಪಾಲ್ಗೊಳ್ಳಬೇಕಾದರೆ ಸಂಘದಲ್ಲಿದ್ದ ಸದಸ್ಯರಲ್ಲಿ ಶೇಕಡಾ ೬೦ ರಷ್ಟು ಸದಸ್ಯರ ಅನುಮತಿ ನೀಡಬೇಕು. ಇದಕ್ಕೆ ಡಿ.ಸಿ.ಸಿ. ಬ್ಯಾಂಕು ಅನುಮೋದಿಸಿದರೆ ಮಾತ್ರ ಅಂತಹ ಸಂಘಗಳಲ್ಲಿ ಸರ್ಕಾರ ಪಾಲ್ಗೊಳ್ಳಬೇಕು.

೫. ಸ್ವಂತ ಭೂಮಿಯಿಲ್ಲದ ರೈತನೊಬ್ಬ ಪ್ರಾಮಾಣಿಕನಾಗಿದ್ದರೆ, ಸಾಲ ತೀರಿಸುವ ಸಾಮರ್ಥ್ಯ ಪಡೆದಿದ್ದರೆ, ಜಾಮೀನು ಕೊಡಲು ಶಕ್ತನಾಗಿದ್ದರೆ ಅವನಿಗೆ ಸಂಘ ಸಾಲ ನೀಡಬೇಕು.

೬. ಬೆಳೆ ಸಾಲವನ್ನು ಎಲ್ಲಾ ಕಡೆ ಜಾರಿಗೆ ತರಬೇಕು. ಸಾಲದ ಮೊತ್ತ ಭಾಗಶಃ ವಸ್ತುಗಳ ರೂಪದಲ್ಲಿ ವಿತರಣೆ ಮಾಡಬೇಕು.

೭. ರೈತನಿಗೆ ಕೊಡುವ ಸಾಲದ ಹಣ ಅವನ ಷೇರು ಹಣದ ೮ ರಿಂದ ೧೦ ಪಟ್ಟಿಗೆ ಮೀರಬಾರದು.

೮. ಸದಸ್ಯನೊಬ್ಬ ತಾನು ಪಡೆದ ಸಾಲದ ಕೆಲವು ಭಾಗವನ್ನು ಷೇರು ಬಂಡವಾಳಕ್ಕೆ ಪೂರೈಸಬೇಕು.

೯. ಸಾಮಾನ್ಯವಾಗಿ ಸಂಘ ನೀಡುವ ಸಾಲದ ಹಣ ೫೦೦ ರೂಪಾಯಿಗೆ ಒಳಪಟ್ಟಿದ್ದರೆ ಸಾಲಕ್ಕೆ ಆಧಾರ ಅನಗತ್ಯ. ೫೦೦ ರಿಂದ ೧೦೦೦ ರೂಪಾಯಿ ಒಳಗಿನ ಸಾಲಕ್ಕೆ ಅವನ ಭೂಮಿಯ ಮೇಲೆ ಅಧಿಕಾರ ಮತ್ತು ಅದಕ್ಕೂ ಹೆಚ್ಚಿನ ಸಾಲಕ್ಕೆ ಆಸ್ತಿ ಆಧಾರ ಮಾಡಿಕೊಳ್ಳಬೇಕು.

೧೦. ಭೂ ಅಭಿವೃದ್ಧಿಗಾಗಿ ಭೂ ಅಡಮಾನ ಬ್ಯಾಂಕುಗಳು ದೀರ್ಘಾವಧಿ ಸಾಲ ನೀಡುವಾಗ ಭೂಮಿಯ ಪ್ರಸ್ತುತ ಬೆಲೆಗಿಂತ ಅಭಿವೃದ್ಧಿ ಆದನಂತರ ಬರಬಹುದಾದ ಬೆಲೆಯ ಆಧಾರದ ಮೇಲೆ ಸಾಲ ನೀಡಬೇಕು.

೧೧. ಸಹಕಾರಿ ಸಾಲ ರಚನೆಗೆ ಫೆಡರಲ್ ಸ್ವರೂಪದಾಗಿದ್ದರಿಂದ ರಾಜ್ಯ ಮತ್ತು ಕೇಂದ್ರ ಸಹಕಾರಿ ಬ್ಯಾಂಕುಗಳು ಪಟ್ಟಣ ಪ್ರದೇಶದಿಂದ ಠೇವಣಿಗಳನ್ನು ಹೆಚ್ಚಾಗಿ ಆಕರ್ಷಿಸಲು ಯತ್ನಿಸಬೇಕು.

೧೨. ಸರ್ಕಾರ ತಕಾವಿ ಸಾಲಗಳನ್ನು ಸಹಕಾರ ಸಂಘಗಳ ಮೂಲಕವೆ ಹಂಚುವ ವ್ಯವಸ್ಥೆ ಮಾಡಬೇಕು.

೧೩. ಇಡೀ ದೇಶದಲ್ಲಿ ಪತ್ತು ಮತ್ತು ಮಾರಾಟ ಜೋಡಣೆ ಯಶಸ್ವಿಗೊಳ್ಳಬೇಕು.

೧೪. ವಿವಿಧ ಹಂತಗಳಲ್ಲಿನ ವ್ಯವಸಾಯ ಸಾಲದ ಸಂಸ್ಥೆಗಳು ಸಾಲ ಸ್ಥಿರೀಕರಣದ ನಿಧಿಯನ್ನು ರಚಿಸಿಕೊಳ್ಳಬೇಕು.

೧೫. ರಾಜ್ಯ ಸರ್ಕಾರ ಮತ್ತು ಸಹಕಾರ ಇಲಾಖೆಯವರು ಸಂಘಸಂಸ್ಥೆಗಳ ಆಂತರಿಕ ವ್ಯವಹಾರದಲ್ಲಿ ಸಾಧ್ಯವಾದಷ್ಟು ಕೈ ಹಾಕದೆ ಸ್ನೇಹಿತ, ತತ್ತ್ವಜ್ಞಾನಿ ಹಾಗೂ ಮಾರ್ಗದರ್ಶಕನಂತೆ ಕಾರ್ಯ ಮಾಡಬೇಕು.

೧೬. ಸರ್ಕಾರವು ಸಹಕಾರದ ನೀತಿಯನ್ನು ಮೇಲಿಂದ ಮೇಲೆ ಬದಲಾವಣೆ ಮಾಡಬಾರದು.

೧೭. ಸಾಲದ ಬಳಕೆಯ ಮೇಲ್ವಿಚಾರಣೆ ಹೆಚ್ಚು ಪರಿಣಾಮಕಾರಿ-ಯಾಗಬೇಕು.

೧೮. ಸಹಕಾರಿ ಶಿಕ್ಷಣ, ತರಬೇತಿ ಮತ್ತು ಪ್ರಚಾರಕ್ಕೆ ಹೆಚ್ಚಿನ ಮಹತ್ವ ನೀಡಬೇಕು.

ಈ ಎಲ್ಲಾ ಸಲಹೆಗಳನ್ನು ಕೇಂದ್ರ ಸರ್ಕಾರಕ್ಕೆ ಸಮಿತಿಯಿಂದ ಸಲ್ಲಿಸಲ್ಪಟ್ಟಿತು. ಕೇಂದ್ರಸರ್ಕಾರ ೩ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇವುಗಳನ್ನು ಕಾರ್ಯಾಚರಣೆಗೆ ತರಲು ಕ್ರಮ ತೆಗೆದುಕೊಳ್ಳುವಂತೆ ಅಭಿಪ್ರಾಯ ಪಟ್ಟಿತು.

ಪತ್ತು ಪುನರ್ ಪರಿಶೀಲನಾ ಸಮಿತಿ - ವೆಂಕಟಪ್ಪಯ್ಯ ಸಮಿತಿ ೧೯೬೬

೪ ನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ವ್ಯವಸಾಯದ ಉತ್ಪಾದನೆ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಅಗತ್ಯವಾದ ಅಂಶಗಳನ್ನು ಹಾಗೂ ಗ್ರಾಮಾಂತರ ಸಾಲ ಪೂರೈಕೆಯನ್ನು ಪುನರ್ ವಿಮರ್ಶಿಸಲು ಆರ್.ಬಿ.ಐ. ೧೯೬೬ ರ ಜುಲೈ ತಿಂಗಳಲ್ಲಿ ಅಖಿಲ ಭಾರತ ಗ್ರಾಮಾಂತರ ಸಾಲ ಪುನರ್ ಪರಿಶೀಲನಾ ಸಮಿತಿಯನ್ನು ಶ್ರೀ ಬಿ. ವೆಂಕಟಪ್ಪಯ್ಯನವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಈ ಸಮಿತಿಯನ್ನು ಈ ಕೆಳಗಿನ ಅಂಶಗಳನ್ನು ಕುರಿತು ಪುನರ್ ವಿಮರ್ಶಿಸಲು ನೇಮಕ ಮಾಡಲಾಯಿತು.

ಸಹಕಾರ ಪತ್ತಿನ ಸಮಿತಿ

೧. ಗೋರ್ವಾಲ ಸಮಿತಿಯ ಶಿಫಾರಸ್ಸುಗಳಲ್ಲಿ ಕಾಣಿಸಲಾದ ವಿವಿಧ ಸಂಸ್ಥೆಗಳಿಂದ ಗ್ರಾಮಾಂತರ ಸಾಲ ಪೂರೈಕೆಯಲ್ಲಾದ ಪ್ರಗತಿ.

೨. ಸಹಕಾರಿ ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳಿಂದ ವ್ಯವಸಾಯಕ್ಕೆ ಅಥವಾ ಸಾಗುವಳಿ, ವ್ಯವಸಾಯೋತ್ಪನ್ನಗಳ ಮಾರಾಟ, ರೂಪಾಂತರ ಸಂಗ್ರಹಣೆ ಮುಂತಾದ ಕಾರ್ಯಚಟುವಟಿಕೆಗಳಿಗೆ ಅಗತ್ಯವಾದ ಸಾಲ ಪೂರೈಸಬೇಕು.

೩. ಬೆಳೆಸಾಲ ಪದ್ಧತಿಯಲ್ಲಿನ ಪ್ರಗತಿ.

೪. ಹಳ್ಳಿಗಳಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಪ್ರಗತಿ ಮತ್ತು ಮಹತ್ವ.

೫. ಕೆಲವು ಪ್ರದೇಶಗಳಲ್ಲಿ ವ್ಯವಸಾಯ ಸಾಲ ಸಂಸ್ಥೆಗಳ ಸ್ಥಾಪನೆ ಕುರಿತು ಕೈಗೊಂಡ ಕ್ರಮಗಳು.

೬. ವಿವಿಧ ಹಂತಗಳಲ್ಲಿನ ಸಂಸ್ಥೆಗಳಲ್ಲಿ ಹೊಂದಾಣಿಕೆ ಇತ್ಯಾದಿ.

ಈ ಸಮಿತಿ ದೇಶದಲ್ಲಿನ ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಿ ಅವುಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ ತನ್ನ ವರದಿಯನ್ನು ೧೯೬೯ರ ಜುಲೈ ತಿಂಗಳಲ್ಲಿ ಸಲ್ಲಿಸಿತು. ಈ ಸಮಿತಿ ಮಾಡಿರುವ ನೂತನ ಸಲಹೆಗಳೆಂದರೆ, ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಗಳ ರಚನೆ ಹಾಗೂ ಗ್ರಾಮಾಂತರ ವಿದ್ಯುದೀಕರಣ ಸಂಸ್ಥೆಯ ಸ್ಥಾಪನೆ ಅಲ್ಲದೆ ಈ ಕೆಳಗಿನ ಸಲಹೆಗಳನ್ನು ಸಮಿತಿ ನೀಡಿತು.

೧. ಸಹಕಾರ ಸಂಘಗಳ ಪುನಾರಚನೆಯ ಕಾರ್ಯ ೪ ನೇ ಪಂಚವಾರ್ಷಿಕ ಯೋಜನೆಯ ಮೊದಲನೆ ೨ ವರ್ಷಗಳಲ್ಲಿ ಪೂರ್ಣಗೊಳ್ಳಬೇಕು.

೨. ಸಂಘದ ಕಾರ್ಯಕ್ಷೇತ್ರ ೩೦೦೦ಕ್ಕೂ ಹೆಚ್ಚು ಜನಸಂಖ್ಯೆಯಿರುವ ಪ್ರದೇಶಕ್ಕೆ ವಿಸ್ತರಿಸಲು ಅವಕಾಶವಿರಬಹುದು. ಈ ಬಗೆಗೆ ಸಮಿತಿ ಇರಬಾರದು.

73682

೩. ಪ್ರಾಥಮಿಕ ವ್ಯವಸಾಯ ಸಾಲ ಸಂಘಗಳು ಸಾಲ ಸೌಲಭ್ಯ ಹೆಚ್ಚಿಸುವುದರ ಜೊತೆಗೆ ಠೇವಣಿಗಳನ್ನು ಹೆಚ್ಚಾಗಿ ಸ್ವೀಕರಿಸಿ ಕ್ರಮೇಣ ಗ್ರಾಮಾಂತರ ಬ್ಯಾಂಕುಗಳಾಗಿ ಬೆಳೆಯಬೇಕು.

೪. ಎಲ್ಲಾ ಸಹಕಾರ ಸಂಘಗಳು ನಿಯಮಿತ ಹೊಣೆಗಾರಿಕೆ ಮೇಲೆ ಕಾರ್ಯಮಾಡಲು ಕ್ರಮ ತೆಗೆದುಕೊಳ್ಳಬೇಕು.

೫. ವ್ಯವಸಾಯ ಸಾಲಸಂಸ್ಥೆಗಳು ಪೂರ್ಣಾವಧಿಯ ವೇತನ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳಲು ಅವುಗಳಿಗೆ ರೂಪಾಯಿ ೧೫೦೦ ಸಹಾಯ ಧನ ನೀಡಬೇಕು.

೬. ಎಲ್ಲೆಡೆಗೂ ಬೆಳೆ ಸಾಲದ ಪದ್ಧತಿಯನ್ನು ಜಾರಿಗೆ ತರಬೇಕು ಮತ್ತು ಬೆಳೆಸಾಲ ಎ ಮತ್ತು ಬಿ ಘಟಕಗಳಾಗಿ ನೀಡಬೇಕು.

೭. ಬೆಳೆ ಸಾಲದ ಪ್ರಮಾಣವನ್ನು ಸಹಕಾರಿ ಕಾರ್ಯಕರ್ತರ ಸಮ್ಮೇಳನದ ಬದಲು ತಾಂತ್ರಿಕ ಸಭೆಯಲ್ಲಿ ನಿರ್ಣಯಿಸಬೇಕು.

೮. ಸಹಕಾರ ಸಂಘಗಳಲ್ಲಿ ಸುಸ್ತಿ ಬಾಕಿಯ ಪರಿಣಾಮವಾಗಿ ಹಣದ ಸಂಚಯಕ್ಕೆ ಅಡ್ಡಿಯಾಗದಂತೆ ಮಾಡಲು ಸಾಲ ಪಡೆಯುವವರಿಗೆ, ವಿಸ್ತರಣಾ ಸಿಬ್ಬಂದಿ ಹಾಗೂ ಆಡಳಿತಗಾರರಿಗೆ ಸಾಲ ವ್ಯವಸ್ಥೆಯಲ್ಲಿ ಶಿಸ್ತು ಪಾಲನೆಯ ಬಗ್ಗೆ ಯೋಗ್ಯ ತಿಳಿವಳಿಕೆ ನೀಡಬೇಕು.

೯. ಮಳೆ ಬೆಳೆ ಇಲ್ಲದೆ ಕಷ್ಟಪರಿಸ್ಥಿತಿಯಲ್ಲಿದ್ದಾಗ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಬ್ಯಾಂಕುಗಳು ಸ್ಥಿರೀಕರಣ ನಿಧಿಯನ್ನು ಬಳಸಬಹುದು.

೧೦. ಸಾಕಷ್ಟು ಬಲವಿಲ್ಲದ ರಾಜ್ಯ ಸಹಕಾರಿ ಬ್ಯಾಂಕುಗಳಿಗೆ, ರಾಜ್ಯ ಸರ್ಕಾರಗಳು ಹೆಚ್ಚು ಷೇರು ಹಣವನ್ನು ನೀಡಬಹುದು. ಹಾಗೂ ಅಥವಾ ಬ್ಯಾಂಕುಗಳಿಗೆ ಆರ್.ಬಿ.ಐ. ನ ಅಧಿಕಾರಿಯೊಬ್ಬರು ವೀಕ್ಷಕರಾಗಿರಬೇಕು.

೧೧. ಆರ್ಥಿಕವಾಗಿ ಬಲಹೀನಗೊಂಡ ಡಿ.ಸಿ.ಸಿ. ಬ್ಯಾಂಕುಗಳಿಗೆ ರಾಜ್ಯಸರ್ಕಾರಗಳು ಸಾಕಷ್ಟು ದೀರ್ಘಾವಧಿ ಠೇವಣಿ ಹಣವನ್ನು ನೀಡಬೇಕು.

೧೨. ಸಹಕಾರಿ ಬ್ಯಾಂಕು ಅಥವಾ ಸಹಕಾರಿ ಸಂಘಗಳ ಆಡಳಿತ ಮಂಡಳಿ, ಅಗತ್ಯದ ಸುಧಾರಣೆಗಳ ಬಗೆಗೆ ಸಹಕರಿಸದಿದ್ದಲ್ಲಿ ರಾಜ್ಯ ಸರ್ಕಾರ ಆರ್.ಬಿ.ಐ. ನೊಂದಿಗೆ ಸಮಾಲೋಚಿಸಿ ಅಥವಾ ಸಂಸ್ಥೆಯು ಆಡಳಿತವನ್ನು ತನ್ನ ವಿಶೇಷ ಅಧಿಕಾರಿಗಳ ಮೂಲಕ ನಡೆಸಬೇಕು.

೧೩. ಸಣ್ಣ ರೈತರ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಯನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸಬೇಕು. ಈ ಸಂಸ್ಥೆಗಳು ಆಯಾ ಜಿಲ್ಲೆಯಲ್ಲಿ ಸಣ್ಣ ರೈತರು ಯಾರು, ಅವರ ಸಮಸ್ಯೆಗಳೇನು ಎಂಬುದನ್ನು ಅರಿತು, ಅವರಿಗೆ ಬೇಕಾದ ಸೌಲಭ್ಯಗಳನ್ನು ಸಹಕಾರಿ ಸಂಘಗಳ ಮೂಲಕ ಸಾಲ ಸೌಲಭ್ಯ ನೀಡಬೇಕು.

೧೪. ವ್ಯವಸಾಯದ ವಿಶೇಷ ಅಭಿವೃದ್ಧಿಯಲ್ಲಿ ತೊಡಗಿಸಿದ ರೈತರಿಗೆ ವಾಣಿಜ್ಯ ಬ್ಯಾಂಕುಗಳು ಸಾಲ ನೀಡಬೇಕು ಹಾಗೆಯೇ ಸಹಕಾರಿ ಮಾರಾಟ, ರೂಪಾಂತರ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ವಾಣಿಜ್ಯ ಬ್ಯಾಂಕುಗಳು ಸಾಲ ನೀಡಬೇಕು.

೧೫. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳ ವ್ಯವಹಾರದಲ್ಲಿ ಸ್ಪರ್ಧೆ ಆಗದಂತೆ ಮಾಡಲು ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ ಹೊಂದಾಣಿಕೆ ಸಮಿತಿಗಳನ್ನು ರಚಿಸಬೇಕು.

೧೬. ನೀರಾವರಿ ಸೌಲಭ್ಯಗಳನ್ನು ಪಡೆಯುವಲ್ಲಿ ವಿದ್ಯುಚ್ಛಕ್ತಿಯ ಬಳಕೆಯನ್ನು ಹೆಚ್ಚಿಸಲು ಗ್ರಾಮಾಂತರ ವಿದ್ಯುದೀಕರಣ ಸಂಸ್ಥೆಯ ಸ್ಥಾಪನೆ.

೧೭. ಎಸ್.ಬಿ.ಐ. ಮತ್ತು ಇತರೆ ವಾಣಿಜ್ಯ ಬ್ಯಾಂಕುಗಳು, ರಾಸಾಯನಿಕ ಗೊಬ್ಬರ, ಹಂಚಿಕೆಗಾಗಿ ಅಗತ್ಯದ ಹಣಕಾಸನ್ನು ಸಹಕಾರ ಸಂಘಗಳಿಗೆ ಪೂರೈಸಬೇಕು.

೧೮. ರಾಜ್ಯ ಸರ್ಕಾರ ಅಥವಾ ಭಾರತದ ಆಹಾರ ಸಂಸ್ಥೆಯ ಪರವಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಸಹಕಾರಿ ಸಂಘಗಳಿಗೆ ಬೇಕಾಗುವ ಹಣವನ್ನು ಆರ್.ಬಿ.ಐ. ಪೂರೈಸಬೇಕು.

೧೯. ಮಾರಾಟ ಸಂಘಗಳ ಆಡಳಿತಕ್ಕಾಗಿ ಸರ್ಕಾರ ನೀಡುತ್ತಿರುವ ಎರವಲು ಸೇವೆಯನ್ನು ಕ್ರಮೇಣವಾಗಿ ನಿಲ್ಲಿಸಿ ಸಂಘಗಳೇ ತರಬೇತಿ ಹೊಂದಿದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬೇಕು.

೨೦. ಸಹಕಾರಿ ಸಂಸ್ಥೆಗಳ ಮುಖಂಡರಿಗೆ ಸಹಕಾರಿ ಶಿಕ್ಷಣ ನೀಡಬೇಕು ಹಾಗೂ ಸಹಕಾರ ಮತ್ತು ಇಲಾಖೆಗಳ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಬೇಕು.

ಈ ಎಲ್ಲಾ ಸಲಹೆಗಳೊಂದಿಗೆ ತಮ್ಮ ವರದಿಯನ್ನು ಆರ್.ಬಿ.ಐ. ಗೆ ೧೯೬೯ರಲ್ಲಿ ವೆಂಕಟಪ್ಪಯ್ಯ ಸಮಿತಿ ಸಲ್ಲಿಸಿತು.

ಬಿ. ಶಿವರಾಮನ್ ಸಮಿತಿ ೧೯೭೪

ಭಾರತ ಸರ್ಕಾರವು ಕೈಗಾರಿಕಾ ಅಭಿವೃದ್ಧಿ, ಉದ್ದಿಮೆಯನ್ನು ಬಲಪಡಿಸಲು ೧೯೭೪ನೇ ಜುಲೈ ತಿಂಗಳಲ್ಲಿ ಶ್ರೀ ಬಿ. ಶಿವರಾಮನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಸದಸ್ಯ ನೇಕಾರರ ಹಾಗೂ ನೇಕಾರರ ಸಹಕಾರ ಸಂಘಗಳ ಬೇಡಿಕೆ ಹಾಗೂ ಪೂರೈಕೆಗಳನ್ನು ಪರಿಶೀಲಿಸಿ ಉದ್ದಿಮೆ ಅಭಿವೃದ್ಧಿ ಹೊಂದಲು ಈ ಕೆಳಗಿನಂತೆ ಸಲಹೆ ನೀಡಿದರು.

೧. ದೇಶದಲ್ಲಿ ಇರತಕ್ಕ ನೇಕಾರರು ಎಷ್ಟು ಜನ ಇರುವರು ಎಂಬುದರ ಬಗ್ಗೆ ಸಮೀಕ್ಷೆ ನಡೆಸಬೇಕು.

೨. ದೇಶದಲ್ಲಿ ಇರತಕ್ಕ ನೇಕಾರರಲ್ಲೂ ಶೇಕಡ ೬೦ರಷ್ಟು ಜನ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಪಡೆಯಲು ಯತ್ನಿಸಬೇಕು.

೩. ದೇಶದಲ್ಲಿ ಇರತಕ್ಕ ನೇಕಾರರ ಸಹಕಾರಿ ಸಂಘಗಳ ಬಗ್ಗೆ ಸಮೀಕ್ಷೆ ನಡೆಸಬೇಕು. ಅದರಲ್ಲೂ ಬಲಹೀನಗೊಂಡ ಸಂಘಗಳನ್ನು ಒಂದುಗೂಡಿಸಿ ಅಂತಹ ಸಂಘಗಳಿಗೆ ಸರ್ಕಾರ ಸಾಕಷ್ಟು ಆರ್ಥಿಕ ನೆರವನ್ನು ನೀಡಬೇಕು.

೪. ನೇಕಾರರ ಸಹಕಾರ ಸಂಘಗಳಿಗೆ ಬೇಕಾಗುವ ನೂಲು, ಬಣ್ಣ ಮುಂತಾದ ವಸ್ತುಗಳನ್ನು ಮತ್ತು ಉಪಕರಣಗಳನ್ನು ಸರ್ಕಾರ ರಿಯಾಯಿತಿ ದರದಲ್ಲಿ ಸಾಕಷ್ಟು ಪೂರೈಸಬೇಕು.

೫. ರಾಜ್ಯಗಳಲ್ಲಿಯೂ ಖಾಸಗಿ ನೂಲಿನ ಗಿರಣಿಗಳನ್ನು ಇನ್ನು ಮುಂದೆ ಪ್ರಾರಂಭ ಮಾಡಬಾರದು. ಬದಲು ಎಲ್ಲಾ ರಾಜ್ಯಗಳಲ್ಲಿ ಸಹಕಾರಿ ನೂಲಿನ ಗಿರಣಿಗಳು ಹೆಚ್ಚಾಗಿ ಸ್ಥಾಪನೆಗೊಳ್ಳಬೇಕು.

೬. ಸಹಕಾರಿ ನೂಲಿನ ಗಿರಣಿಯಿಂದ ಉತ್ಪಾದಿಸಿದ ಬಟ್ಟೆಗಳನ್ನು ಮಾರಾಟ ಮಳಿಗೆಗಳ ಮೂಲಕ ಅಥವಾ ಗ್ರಾಹಕರ ಸಂಘಗಳ ಮೂಲಕ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು.

೭. ಗ್ರಾಹಕರು ಪ್ರತಿನಿತ್ಯ ಉಪಯೋಗಿಸುವ ಬಟ್ಟೆಗಳನ್ನು ಅಂದರೆ ಧೋತಿ, ಬೆಡ್‌ಶೀಟ್, ನ್ಯಾಪಕಿನ್, ಸೀರೆ ಮುಂತಾದ ಬಟ್ಟೆಗಳನ್ನು ಸಹಕಾರಿ ನೂಲಿನ ಗಿರಣಿಗಳು ಮಾತ್ರ ಉತ್ಪಾದಿಸಬೇಕೆಂಬ ನಿಯಮಗಳನ್ನು ಮಾಡಬೇಕು.

೮. ಕೈಗಾರಿಕಾ ಉದ್ದಿಮೆಯ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮಾಡಲು ಪ್ರತ್ಯೇಕವಾದ ಕೈಗಾರಿಕಾ ಅಭಿವೃದ್ಧಿ ಕಮಿಷನರವರನ್ನು ಅಖಿಲ ಭಾರತ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ನೇಮಕ ಮಾಡಿಕೊಳ್ಳಬೇಕು.

೯. ಕೈಗಾರಿಕಾ ಅಭಿವೃದ್ಧಿ ಬಗ್ಗೆ, ಸಂಶೋಧನೆ ನಡೆಸಲು ಅಖಿಲ ಭಾರತ ಕೈಗಾರಿಕಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ ಸ್ಥಾಪಿಸಬೇಕು.

೧೦. ನೇಕಾರರ ಸಂಘಗಳು ಸಹಕಾರಿ ನೂಲಿನ ಗಿರಣಿಗಳ ಸಮಿತಿಗೆ, ಸಿಬ್ಬಂದಿಗಳಿಗೆ ಯೋಗ್ಯ ಶಿಕ್ಷಣ ಮತ್ತು ತರಬೇತಿ ನೀಡಬೇಕು.

ಈ ಮೇಲೆ ಹೇಳಿರುವ ಎಲ್ಲಾ ಸಲಹೆಗಳನ್ನು ಭಾರತ ಸರ್ಕಾರ ೧೯೭೬ ರಿಂದ ಕಾರ್ಯಾಚರಣೆಗೆ ತಂದಿರುತ್ತದೆ.

ಮುಂದುವರಿದು ಶಿವರಾಮನ್ ಸಮಿತಿಗೂ ಕೆಳಗಿನ ಸಲಹೆಗಳನ್ನು ನೀಡುವಂತೆ ಸರ್ಕಾರ ಕೇಳಿಕೊಂಡಿತು. ಆ ಪ್ರಕಾರ ಬಳಕೆ ಸಾಲಕ್ಕೆ ಸಂಬಂಧಪಟ್ಟಂತೆ ಈ ಸಮಿತಿಯು ಪ್ರಾಥಮಿಕ ಸೇವಾ ಸಹಕಾರ ಸಂಘಗಳು ಸೂಕ್ತವಾದ ವ್ಯವಸ್ಥೆ ಎಂಬುದನ್ನು ಮನಗಂಡಿತು. ಹಾಗೂ ಬಳಕೆ ಸಾಲವನ್ನು ಸಂಘಗಳ ಕಾರ್ಯದರ್ಶಿಗಳೆ ಸಂದರ್ಭಕ್ಕೆ ಅನುಗುಣವಾಗಿ ಸಾಲವನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರತಕ್ಕದೆಂದು ಮತ್ತು ರೈತ ಸದಸ್ಯರಿಗೆ, ಕೃಷಿ ಕಾರ್ಮಿಕರಿಗೆ ಈ ಸಾಲವನ್ನು ನೀಡಬೇಕೆಂದು ಸಲಹೆಮಾಡಿತು. ಇದರಂತೆ

೧. ಸಾಮಾನ್ಯ ಬಳಕೆಗಾಗಿ ೭೫ ರೂಪಾಯಿ

೨. ಸಣ್ಣ ಪುಟ್ಟ ವೆಚ್ಚಗಳಿಗಾಗಿ ೨೫೦ ರೂಪಾಯಿ

೩. ಶಿಕ್ಷಣಕ್ಕಾಗಿ ೧೦೦ ರೂಪಾಯಿ

೪. ಮದುವೆ ಸಮಾರಂಭಗಳಿಗೆ ೨೫೦ ರೂಪಾಯಿ

೫. ಹುಟ್ಟು ಮತ್ತು ಸಾವುಗಳಿಗಾಗಿ ೭೫ ರೂಪಾಯಿ

ಈ ಪ್ರಮಾಣದಲ್ಲಿ ಸಾಲ ನೀಡಬೇಕೆಂದು ಹೇಳಿದ್ದಲ್ಲದೆ, ಈ ಸಮಿತಿಯ ಸಲಹೆಯನ್ನು ಆರ್.ಬಿ.ಐ. ಮತ್ತು ವ್ಯವಸಾಯ ಸಾಲ ಮಂಡಳಿ ಒಪ್ಪಿ ಈ ಸಾಲವನ್ನು ಯಾವುದೇ ಉದ್ದೇಶಕ್ಕೆ ನೀಡಿದರೂ ಸಹ ಸಾಲದ ಮೊತ್ತ ೧೨೦ ರೂಪಾಯಿಗಳಿಗೆ ಹೆಚ್ಚಬಾರದೆಂದು ಹಾಗೂ ಈ ಸಾಲವನ್ನು ೩ ವರ್ಷಗಳ ಅವಧಿಗೆ ಸದಸ್ಯರಿಂದ ಮರುಪಾವತಿ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ಪಟ್ಟಿತು.

ಡಾ: ಎ.ಎಂ. ಖುಸ್ರೋ ಸಮಿತಿ

ಭಾರತದ ಆರ್.ಬಿ.ಐ. ಕೇಂದ್ರ ಸರ್ಕಾರ ಹಾಗೂ ವಿಶ್ವ ಬ್ಯಾಂಕಿನೊಡನೆ ಸಮಾಲೋಚಿಸಿ ೧೯೮೬ ಆಗಸ್ಟ್ ೬ ರಂದು, ಈ ಸಮಿತಿಯನ್ನು ಭಾರತದ ಯೋಜನಾ ಆಯೋಗದ ಮಾಜಿ ಸದಸ್ಯರಾದ ಪ್ರೊ. ಎ.ಎಂ. ಖುಸ್ರೋರವರ ಅಧ್ಯಕ್ಷತೆಯಲ್ಲಿ ನೇಮಿಸಲಾಯಿತು. ಒಟ್ಟು ೨೪ ಅಧ್ಯಾಯಗಳಲ್ಲಿ ೧೦ ಭಾಗಗಳಲ್ಲಿ ವಿವರಿಸಿದ ಈ ಬೃಹತ್ ವರದಿ

ಒಟ್ಟು ೧೦೭೪ ಪುಟಗಳನ್ನು ಒಳಗೊಂಡಿರುತ್ತದೆ. ಈ ಸಮಿತಿಯು ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡು ತನ್ನ ಸಲಹೆಗಳನ್ನು ನೀಡಿತು. ಅವುಗಳು

೧. ಕೃಷಿ ಪತ್ತಿನ ಬಗ್ಗೆ

೨. ಕೃಷಿ ಸಾಲ ಹಂಚುವ ಸಂಸ್ಥೆಗಳ ಬಗ್ಗೆ ಹಾಗೂ ಅವುಗಳ ಪ್ರಯೋಜನಗಳ ಬಗ್ಗೆ

೩. ಬೇಸಾಯ ಸಾಲ ವಿತರಣೆಯಲ್ಲಿ ಸಾಲದ ಶ್ರೇಣಿ ಸಂಸ್ಥೆಗಳ ಬಗ್ಗೆ

೪. ಸಾಲ ಹಂಚಲು ತಗಲುವ ವೆಚ್ಚ ಮತ್ತು ಆಡಳಿತದ ಬಗ್ಗೆ

೫. ನಬಾರ್ಡ್‌ನ ಸಂಘಟನೆ ಮತ್ತು ಆಡಳಿತದ ಬಗ್ಗೆ

ಈ ಸಮಿತಿಯು ಮುಖ್ಯ ಸಲಹೆಗಳೆಂದರೆ

೧. ಪ್ರಾಥಮಿಕ ಸಹಕಾರಿ ಸಂಘಗಳ ಕಾರ್ಯದರ್ಶಿಗೆ ಡಿ.ಸಿ.ಸಿ. ಬ್ಯಾಂಕುಗಳು ಸೂಕ್ತ ತರಬೇತಿಗೆ ವ್ಯವಸ್ಥೆ ಮಾಡಬೇಕು.

೨. ಸಂಘದ ವ್ಯವಹಾರವನ್ನು ಹೆಚ್ಚಿಸಿಕೊಂಡು ಅದರ ವಾರ್ಷಿಕ ಲಾಭದ ಹೆಚ್ಚಳಕ್ಕೆ ಕಾರಣರಾದ ಕಾರ್ಯದರ್ಶಿಗಳಿಗೆ ಉತ್ತೇಜನ ನೀಡಲು ಲಾಭದಲ್ಲಿ ಕೆಲವೊಂದು ಪ್ರಮಾಣದ ಹಣವನ್ನು ಪ್ರೋತ್ಸಾಹ ಧನವೆಂದು ಕೊಡಬೇಕು.

೩. ಈ ಎರಡು ರೀತಿಯ ಸಂಬಳದ ಹಣವನ್ನು ಕೊಡುವ ಮೊದಲು ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಸಹಕಾರ ನಿಬಂಧಕರೊಡನೆ ಸಮಾಲೋಚಿಸಿ ನಿರ್ಧರಿಸಬೇಕು.

೪. ಪಿ.ಎ.ಸಿ.ಎಸ್. ಗಳು ಗ್ರಾಮೀಣ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಠೇವಣಿ ಸಂಗ್ರಹಿಸುವುದನ್ನು ಪ್ರೋತ್ಸಾಹಿಸಬೇಕು.

೫. ಪ್ರತಿಯೊಂದು ಸಂಘದ ನಿವೇಶನಗಳ ಒಳರಚನೆ ಬ್ಯಾಂಕಿನ ಸ್ವರೂಪವನ್ನು ಹೊಂದಬೇಕು. ಇದಕ್ಕೆ ಸರ್ಕಾರ ಹಾಗೂ ಎನ್.ಸಿ.ಡಿ.ಸಿ. ಸಾಲ ಒದಗಿಸಬೇಕು.

೬. ಪಿ.ಎ.ಸಿ.ಎಸ್. ಗಳು ಪಡೆಯುವ ಠೇವಣಿಗೆ ಭಾರತದ ಠೇವಣಿ ವಿಮಾ ಸಂಸ್ಥೆ, ತನ್ನ ಠೇವಣಿ ವಿಮಾ ಯೋಜನೆಯನ್ನು ವಿಸ್ತರಿಸಬೇಕು.

೭. ಠೇವಣಿ ಸಂಗ್ರಹಣೆಯಲ್ಲಿ ತೊಡಗಿದ ಈ ಸಂಘಗಳು ಅವು ಸಂಗ್ರಹಿಸಿದ ಠೇವಣಿಯಲ್ಲಿ ಶೇಕಡ ೧೫ ರಷ್ಟನ್ನು ಜಿಲ್ಲಾ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ವಿಶೇಷ ಉಳಿತಾಯ ಖಾತೆಯಲ್ಲಿ ಠೇವಣಿಯಾಗಿ ಇಡಬೇಕು. ಈ ವಿಶೇಷ ಉಳಿತಾಯ ಯೋಜನೆಗೆ ಡಿ.ಸಿ.ಸಿ. ಬ್ಯಾಂಕುಗಳು ಇತರೇ ಉಳಿತಾಯ ಠೇವಣಿಗೆ ಕೊಡುವ ಬಡ್ಡಿಯ ದರಕ್ಕಿಂತ ೧.೫ ಶೇಕಡ ಹೆಚ್ಚು ಬಡ್ಡಿಯನ್ನು ಕೊಡಬೇಕು.

೮. ಈ ಸಂಸ್ಥೆಗಳು ಹೊಂದುವ ಒಟ್ಟು ಠೇವಣಿಯಲ್ಲಿ ಶೇಕಡ ೨೦ ರಷ್ಟು ಹಣವನ್ನು ಹೆಚ್ಚು ಲಾಭ ಪಡೆಯಲು ಸಾಧ್ಯವಿರುವ ಕೃಷಿಯೇತರ ವಲಯಗಳ ಚಟುವಟಿಕೆಗಳಿಗೆ ಸಾಲ ಕೊಡಬಹುದು.

೯. ರಾಜ್ಯ ಸಹಕಾರಿ ಬ್ಯಾಂಕುಗಳು ಹಾಗೂ ಡಿ.ಸಿ.ಸಿ. ಬ್ಯಾಂಕುಗಳು ಪತ್ತಿನ ಸಂಘಗಳಿಗೆ ಬ್ಯಾಂಕಿಂಗ್ ಕೌಂಟರ್ ತೆರೆಯಲು, ಗಿರಿವಿಯಾಗಿ ಇಡುವ ನಗನಾಣ್ಯಗಳ ಸುಭದ್ರತೆಗಾಗಿ ಭದ್ರತಾ ಕಪಾಟು ಮುಂತಾದ ಸಾಧನ ಸೌಲಭ್ಯ ಒದಗಿಸಿಕೊಡಬೇಕು.

೧೦. ಈ ಕಾರಣಕ್ಕಾಗಿ ಅಪೆಕ್ಸ್ ಬ್ಯಾಂಕು ಡಿ.ಸಿ.ಸಿ. ಬ್ಯಾಂಕುಗಳು ಸಹಕಾರಿ ಅಭಿವೃದ್ಧಿ ನಿಧಿಯನ್ನು ತೆರೆಯಬೇಕು.

೧೧. ಒಂದಕ್ಕಿಂತ ಹೆಚ್ಚು ಬೆಳೆಯನ್ನು ಬೆಳೆಯುವ ಭಾಗಗಳಲ್ಲಿಯ ಸಂಘಗಳು ನಗದು ಸಾಲವನ್ನು ಒದಗಿಸಲು ಪ್ರಯತ್ನಿಸಬೇಕು. ಅಂದರೆ ಯಾವುದೇ ಭಾಗದಲ್ಲಿ ರೈತರು ರಸಗೊಬ್ಬರ, ಉತ್ತಮ ಬೀಜ ಮುಂತಾದವುಗಳನ್ನು ಉಪಯೋಗಿಸಿ ಮಾದರಿ ಬೇಸಾಯವನ್ನು ಈಗಾಗಲೇ ಅನುಸರಿಸುತ್ತಿದ್ದರೆ ಅಂತಹ ಭಾಗದ ರೈತರಿಗೆ ವಸ್ತುಸಾಲ ಎಂದರೆ ಗೊಬ್ಬರ, ಬೀಜ, ಕ್ರಿಮಿನಾಶಕ ಮುಂತಾದವುಗಳನ್ನು ಪಡೆಯಲು ಒತ್ತಾಯಿಸಬಾರದು.

೧೨. ಮುಂಗಾರು ಸಾಲದ ನಗದು ಹಣವನ್ನು ಕೊಡದ ಹೊರತು ಹಿಂಗಾರು ಸಾಲದ ಹಣವನ್ನು ಕೊಡಬಾರದೆಂಬ ಕಟ್ಟಳೆಯನ್ನು ಕೈಬಿಡಬೇಕು.

೧೩. ಪ್ರತಿವರ್ಷ ಈ ಸಂಘಗಳು ಕ್ರಮಿಕ ಪತ್ತನ್ನು ತಯಾರಿಸಲು ವಿಳಂಬವಾಗುವುದರಿಂದ ಪ್ರತಿವರ್ಷ ಏನೂ ಬದಲಾವಣೆ ಇಲ್ಲದಿದ್ದರೆ ೩ ವರ್ಷಗಳಿಗೊಮ್ಮೆ ಕ್ರಮಿಕ ಪತ್ತನ್ನು ತಯಾರಿಸಬೇಕು.

೧೪. ಪತ್ತಿನ ಸಂಘಗಳು ರೈತರಿಂದ ಅಸಲು ಮತ್ತು ಬಡ್ಡಿಯನ್ನು ವಸೂಲು ಮಾಡಿ ಡಿ.ಸಿ.ಸಿ. ಬ್ಯಾಂಕುಗಳಿಗೆ ಸಾಲಕ್ಕೆ ಕಟ್ಟಿದಾಗ, ಡಿ.ಸಿ.ಸಿ. ಬ್ಯಾಂಕುಗಳು ಹಣವನ್ನು ಕೇವಲ ತನಗೆ ಬರಬೇಕಾದ ಬಡ್ಡಿಗಾಗಿ ಜಮಾ ಮಾಡದೆ ಅದನ್ನು ಅನುಕ್ರಮವಾಗಿ ಅಸಲು ಮತ್ತು ಬಡ್ಡಿಗಾಗಿ ಜಮಾ ಹಿಡಿಯಬೇಕು.

೧೫. ರಾಜ್ಯ ಸರ್ಕಾರಗಳು ಪ್ರಾಥಮಿಕ ಸಹಕಾರ ಸಂಘಗಳಿಂದ ಆಡಿಟ್ ಶುಲ್ಕವನ್ನು ಪಡೆಯಬಾರದು.

೧೬. ಅಪೆಕ್ಸ್ ಬ್ಯಾಂಕ್, ಸಾಮರ್ಥ್ಯವನ್ನು ಹೊಂದಿದ ಸಂಘಗಳನ್ನು ಬಲಪಡಿಸಲು ನಿರ್ದಿಷ್ಟ ಸಾಲಮಿತಿಯ ಯೋಜನೆಯನ್ನು ಹಾಕಿಕೊಂಡು ಅವುಗಳನ್ನು ಬಲಪಡಿಸುವ ಕಾರ್ಯಕ್ರಮ ಕೈಗೊಳ್ಳಬೇಕು.

೧೭. ಸಾಂಸ್ಥಿಕ ಬಲವರ್ಧನೆಯ ಯೋಜನೆಗೆ ಒಳಪಟ್ಟ ಪ್ರಾಥಮಿಕ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ರಾಜ್ಯ ಸರ್ಕಾರ ಶೇರು ಬಂಡವಾಳವನ್ನು ಒದಗಿಸಬೇಕು.

೧೮. ಸಾರ್ವಜನಿಕ ವಲಯದ ಬ್ಯಾಂಕು ಹಾಗೂ ಎನ್.ಸಿ.ಎಸ್.ಸಿ.ಗಳಿಗೆ ದೊರೆಯುವಂತೆ ಈ ಬ್ಯಾಂಕುಗಳು ಜನರಿಂದ ಪಡೆಯುವ ದೀರ್ಘಾವಧಿ ಸಾಲದ ಮೇಲಿನ ಸುಂಕದಲ್ಲಿ ರಿಯಾಯಿತಿ ದೊರೆಯಬೇಕು.

೧೯. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು ತಮ್ಮ ಸಾಲದ ನೀತಿಯಲ್ಲಿ ವೈವಿಧ್ಯತೆಯನ್ನು ಹೊಂದಿ ಒಣ ಬೇಸಾಯ, ಗೃಹನಿರ್ಮಾಣ ಮುಂತಾದುವುಗಳಿಗೆ ಸಾಲವನ್ನು ಹಂಚಬೇಕು. ನಬಾರ್ಡ್ ಈ ಬ್ಯಾಂಕುಗಳಿಗೆ ಮಧ್ಯಂತರ ಸಾಲ ಒದಗಿಸಬೇಕು.

೨೦. ಸಹಕಾರ ಸಂಘಗಳ ನಿಬಂಧಕರು ಕೆಲವೊಂದು ಅಧಿಕಾರಕ್ಕೆ ಒಳಪಟ್ಟು ಮೇಲ್ಮಟ್ಟದ ಸಹಕಾರ ಸಂಘಗಳು ಮತ್ತು ಕೆಳಮಟ್ಟದ ಸಹಕಾರ ಸಂಘಗಳ ಬಗ್ಗೆ ಅಂದರೆ ಮೇಲ್ಮಟ್ಟದ ಸಹಕಾರ ಸಂಘಗಳು ಆವಶ್ಯಕವೆಂದು ಕಂಡು ಬಂದರೆ ಕೆಳಮಟ್ಟದ ಸಹಕಾರಿ ಸಂಘಗಳ ಮಹಾಸಭೆಯನ್ನು ಕರೆಯಬಹುದು.

೨೧. ಸಹಕಾರಿ ಸಂಘಗಳಿಗೆ ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ಏಕರೂಪದ ಒಂದು ಕಾನೂನನ್ನು ರಚಿಸುವುದು. ಆವಶ್ಯಕ ಅಂದರೆ ರಾಜ್ಯಮಟ್ಟದಲ್ಲಿ ಸಾಲ ವಸೂಲಿ ವ್ಯಾಜ್ಯಗಳನ್ನು ತೀವ್ರವಾಗಿ ಬಗೆಹರಿಸಲು ನ್ಯಾಯ ಮಂಡಳಿಗಳನ್ನು ರಚಿಸಬೇಕು.

೨೨. ಗ್ರಾಮೀಣ ಶಾಖಾ ವ್ಯವಸ್ಥಾಪಕರಿಗೆ ಪುಕ್ಕಟೆಯಾಗಿ ವಸತಿ ಸೌಲಭ್ಯವನ್ನು ಕಲ್ಪಿಸಬೇಕು. ಅದಕ್ಕೆ ಸಂಬಳದಲ್ಲಿ ಬಾಡಿಗೆ ಮುರಿಯಬಾರದು.

೨೩. ಕನಿಷ್ಠ ಮೂರು ವರ್ಷಗಳವರೆವಿಗೆ ಗ್ರಾಮೀಣ ಅಭಿವೃದ್ಧಿ ಸಾಲ ಹಂಚುವಲ್ಲಿ ಸೇವೆ ಸಲ್ಲಿಸಿದ ವ್ಯವಸ್ಥಾಪಕನಿಗೆ ಒಂದು ವರ್ಷದ ವಾರ್ಷಿಕ ಬಡ್ತಿ ಒದಗಿಸಬೇಕು. ೩ ವರ್ಷದ ನಂತರ ಇವರು ಕೇಳಿದ ಗ್ರಾಮೀಣ ಶಾಖೆಗಳಿಗೆ ವರ್ಗಾಯಿಸಬೇಕು.

೨೪. ದೇಶದಲ್ಲಿರುವ ಅನೇಕ ಗ್ರಾಮೀಣ ಬ್ಯಾಂಕುಗಳು ನಷ್ಟದಲ್ಲಿರುವುದರಿಂದ ಅವುಗಳನ್ನು ಸೃಷ್ಟಿಸಿದ ಬ್ಯಾಂಕುಗಳಲ್ಲಿ ವಿಲೀನಗೊಳಿಸುವುದು ಸೂಕ್ತ.

೨೫. ಕೃಷಿ ಸಾಲ ಒಟ್ಟಾರೆ ಎಲ್ಲಾ ಸಂಸ್ಥೆಗಳಿಂದಲೂ ರಾಷ್ಟ್ರದಾದ್ಯಂತ ಸಮನಾಗಿ ಬೆಳೆದು ಬಂದಿಲ್ಲ, ಹೀಗಾಗಿ ರೈತರಿಗೆ ಸಾಕಷ್ಟು ಸಾಲ,

ಅನೇಕ ರಾಜ್ಯಗಳಲ್ಲಿ ಸಿಗುತ್ತಿಲ್ಲ. ಆದ್ದರಿಂದ ಬಿಹಾರ, ಒರಿಸ್ಸಾ, ಪಶ್ಚಿಮಬಂಗಾಳ ರಾಜ್ಯಗಳಿಗೆ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ನಿಗಮದ ಸ್ಥಾಪನೆ ಆಗಬೇಕು.

೨೬. ಬೆಳೆ ವಿಮಾ ಯೋಜನೆ ಕಳೆದ ೭-೮ ವರ್ಷಗಳಿಂದ ಸಹಕಾರಿ ಸಂಘದಲ್ಲಿ ಜಾರಿಯಲ್ಲಿದ್ದರೂ ರೈತನ ಎಲ್ಲಾ ಬೆಳೆಗೆ ಹಾಗೂ ಭಾರತದಲ್ಲಿ ಜಾರಿಯಲ್ಲಿರುವುದಿಲ್ಲ. ಇದು ಕೇವಲ ಕೆಲವೇ ಬೆಳೆಗೆ ಹಾಗೂ ಕೆಲವೊಂದು ಜಿಲ್ಲೆಗಳಲ್ಲಿ ಮಾತ್ರ ಜಾರಿಯಲ್ಲಿದೆ. ಇದರಿಂದ ರೈತನಿಗೆ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಬೆಳೆ ವಿಮಾ ಯೋಜನೆಯನ್ನು ಎಲ್ಲಾ ಬೆಳೆಗಳಿಗೂ ಭಾರತದಾದ್ಯಂತ ವ್ಯವಸ್ಥೆಗೊಳಿಸಲು ಪ್ರತ್ಯೇಕವಾದ ಬೆಳೆ ವಿಮಾ ಯೋಜನೆಯನ್ನು ಸ್ಥಾಪಿಸಬೇಕು.

೨೭. ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯ ಚಟುವಟಿಕೆಯನ್ನು ಉತ್ತಮಪಡಿಸಿಕೊಳ್ಳದಿದ್ದರೆ, ತಮ್ಮ ಆಸ್ತಿಯನ್ನು ಕಳೆದುಕೊಳ್ಳ-ಬೇಕಾಗುತ್ತದೆ. ಆದುದರಿಂದ, ಈ ಸಂಘಗಳು ತಮ್ಮ ಈಗಿನ ಕಾರ್ಯ ಚಟುವಟಿಕೆಗಳ ಜೊತೆಗೆ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸುವುದು ಸೂಕ್ತವೆಂದು ಸಲಹೆ ನೀಡಲಾಗಿದೆ.

ಈ ರೀತಿಯಲ್ಲಿ ಡಾ: ಎ.ಎಂ. ಖುಸ್ರೋರವರು ಮುಖ್ಯವಾದ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ.

ಹಳೇ ಮೈಸೂರು ರಾಜ್ಯದಲ್ಲಿ ೧೯೨೪ರ ವರೆಗೆ ಸಹಕಾರ ಪ್ರಚಾರದ ಬಗ್ಗೆ ಯೋಜನಾಬದ್ಧ ಕಾರ್ಯಕ್ರಮಗಳೇ ಇರಲಿಲ್ಲ. ಚಂದ್ರಶೇಖರ ಅಯ್ಯರ್ ಸಮಿತಿಯ ವರದಿಯ ಮೇರೆಗೆ ಒಂದು ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನಗಳು ನಡೆದು ಆಗಿನ ರಿಜಿಸ್ಟ್ರಾರರಾಗಿದ್ದ ಶ್ರೀ ಕೆ. ಹೆಚ್. ರಾಮಯ್ಯನವರ ಮುಂದಾಳುತನದಲ್ಲಿ ಸಹಕಾರಿಗಳ ಮತ್ತು ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳ ಸಭೆಯನ್ನು ಸೇರಿಸಿ ಸಂಸ್ಥೆಯ ನಿಯಮಗಳನ್ನು ತಯಾರಿಸಿತು. ಅದರ ಮೇರೆಗೆ ೧೯೨೪ರ ಸೆಪ್ಟೆಂಬರ್ ೨೭ ರಂದು ಮೈಸೂರು ಕೋ-ಆಪರೇಟಿವ್ ಪ್ರೊಪಾಗ್ಯಾಂಡಿಸ್ಟ್ ಇನ್‌ಸ್ಟಿಟ್ಯೂಟ್ ಎಂಬ ಹೆಸರಿನ ಹೊಸ ಸಂಸ್ಥೆಯು ಸ್ಥಾಪಿತವಾಯಿತು. ಅಂದಿನಿಂದ ಈ ಸಂಸ್ಥೆಯು ನಾನಾ ವಿಧವಾಗಿ ಸೇವೆ ಮಾಡುತ್ತಾ ಬಂದಿರುವುದು.

೧೯೫೭ರಲ್ಲಿ ಮೈಸೂರು ರಾಜ್ಯದ ಪುನರ್ಘಟಿತವಾಗಿ ಕರ್ನಾಟಕ ರಾಜ್ಯವಾದ ಬಳಿಕ ಈ ಸಂಸ್ಥೆಯ ಪುನರ್ಘಟನೆಯ ಆವಶ್ಯಕತೆಯು ಕಂಡು ಬಂದಿತು. ವಿಶಾಲ ಮೈಸೂರು ರಾಜ್ಯದಲ್ಲಿ ಅರ್ಥಾತ್ ಕರ್ನಾಟಕದಲ್ಲಿ ಹೊಸದಾಗಿ ಸೇರ್ಪಡೆ ಹೊಂದಿದ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಕೊಡಗು ಮತ್ತು ಮದ್ರಾಸ್ ಕರ್ನಾಟಕಗಳ ಪ್ರಾತಿನಿಧ್ಯವಿರಲಿಲ್ಲ. ನಂತರ ಅದಕ್ಕಾಗಿ ಹೊಸ ನಿಯಮಗಳನ್ನೊಳಗೊಂಡ ಪುನರ್ಘಟಿತ ಸಂಸ್ಥೆಯು "ಮೈಸೂರು ಸ್ಟೇಟ್ ಕೋ ಅಪರೇಟಿವ್ ಯೂನಿಯನ್" ಎಂದು ಮಾರ್ಪಟ್ಟಿತು. ನಂತರ ೧೯೮೭ ನೇ ಜುಲೈನಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಮುದ್ರಣಾಲಯ ಮತ್ತು ರಾಜ್ಯ ಸಹಕಾರ ಯೂನಿಯನ್ನುಗಳನ್ನು ಒಂದುಗೂಡಿಸಿ "ಕರ್ನಾಟಕ ರಾಜ್ಯ ಸಹಕಾರ ಮಂಡಳ" ಎಂಬ ಹೆಸರಿನಿಂದ ಕರೆಯಲಾಯಿತು.

ಉದ್ದೇಶಗಳು

ಸಹಕಾರ ಪ್ರಚಾರ, ಶಿಕ್ಷಣ, ತರಬೇತಿ, ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ವಿಕಸಿಸಲು ಸಹಾಯ ಮಾಡುವುದು, ಬೇರೆ ಬೇರೆ ಸಂಸ್ಥೆಗಳಲ್ಲಿ ಪರಸ್ಪರ ಲಾಭದ ಸಲುವಾಗಿ ಒಳ್ಳೆಯ ಸಂಬಂಧ ಕಲ್ಪಿಸುವುದು, ಇಂಡಿಯನ್ ಕೋ - ಆಪರೇಟಿವ್ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಸಹಕಾರ ಯೂನಿಯನ್ ಇವುಗಳೊಂದಿಗೆ ಸಹಕರಿಸಿ ಅವು ಗೊತ್ತುಪಡಿಸಿದ ಧೋರಣೆಗಳನ್ನು ಕಾರ್ಯರೂಪದಲ್ಲಿ ತರುವುದು, ಸಹಕಾರಿ ಆಂದೋಳನ ದಲ್ಲಿ ನಿರತರಾದ ಕಾರ್ಯಕರ್ತರನ್ನು, ಸದಸ್ಯರನ್ನು ಮತ್ತು ಮುಂದೆ ಆಗಬಹುದಾದ ಸದಸ್ಯರನ್ನು ಸಹಕಾರದ ಬಗ್ಗೆ ಶಿಕ್ಷಣ, ತರಬೇತಿ ನೀಡಿ ಜಾಗೃತರನ್ನಾಗಿಸುವುದು, ನಿಯತಕಾಲಿಕೆ, ಪುಸ್ತಕ ಮುಂತಾದವುಗಳ ಮತ್ತು ಇತರ ಸಾಹಿತ್ಯದ ಪ್ರಕಟಣೆಯ ಕಾರ್ಯ ಕೈಗೊಳ್ಳುವುದು, ಸಮ್ಮೇಳನಗಳನ್ನು ಜರುಗಿಸುವುದು, ಪರಿಷತ್ತುಗಳನ್ನು ಏರ್ಪಡಿಸುವುದು, ಗ್ರಂಥಾಲಯ ನಡೆಸುವುದು, ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುವುದು, ಸಹಕಾರ ವಿಷಯಗಳ ಬಗ್ಗೆ ಅವಶ್ಯವಿದ್ದಾಗ ಸರಕಾರಕ್ಕೆ ಹಾಗೂ ಸಂಘಗಳಿಗೆ ಸಲಹೆ ಸೂಚನೆಗಳನ್ನು ಮತ್ತು ಮಾರ್ಗದರ್ಶನ ಮಾಡುವುದು. ಈಗ ಸಹಕಾರ ಶಿಕ್ಷಣ ಮತ್ತು ತರಬೇತಿ ಮತ್ತು ಪ್ರಚಾರ ಕಾರ್ಯಗಳನ್ನು ಈ ಕೆಳಕಂಡ ಸಂಸ್ಥೆಗಳು ವಹಿಸಿಕೊಂಡಿವೆ.

೧. ಅಖಿಲ ಭಾರತ ರಾಷ್ಟ್ರೀಯ ಸಹಕಾರ ಯೂನಿಯನ್.

೨. ರಾಜ್ಯ ಸಹಕಾರ ಯೂನಿಯನ್‌ಗಳು (ರಾಜ್ಯ ಮಟ್ಟದಲ್ಲಿ).

೩. ಜಿಲ್ಲಾ ಸಹಕಾರ ಯೂನಿಯನ್‌ಗಳು (ಜಿಲ್ಲಾ ಮಟ್ಟದಲ್ಲಿ).

ಸಹಕಾರಿ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮವು ಎರಡು ವಿಧವಾಗಿದೆ.

೧. ಗೌರವಾನ್ವಿತ ಅಧಿಕಾರಿಗಳಿಗೆ, ಸದ್ಯದ ಸದಸ್ಯರಿಗೆ ಮುಂದೆ ಆಗಬಹುದಾದ ಸದಸ್ಯರಿಗೆ ಮತ್ತು ಸಾರ್ವಜನಿಕ ಶಿಕ್ಷಣ.

೨. ಸಹಕಾರಿ ಇಲಾಖೆಗಳ ಮತ್ತು ಸಹಕಾರಿ ಸಂಘ ಸಂಸ್ಥೆಗಳ ಸಿಬ್ಬಂದಿಯವರಿಗೆ ವಿವಿಧ ಮಟ್ಟದಲ್ಲಿ ತರಬೇತಿ.

೩. ಸಹಕಾರಿ ಸಂಘಗಳ ಗೌರವಾನ್ವಿತ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರಿಗೆ ಶಿಕ್ಷಣ ಕೊಡುವ ಕಾರ್ಯಕ್ರಮವನ್ನು ಕಾರ್ಯ ರೂಪದಲ್ಲಿ ತರುವ ಹೊಣೆಯನ್ನು ಹೊಸದಿಲ್ಲಿಯಲ್ಲಿರುವ ರಾಷ್ಟ್ರೀಯ ಸಹಕಾರ ಯೂನಿಯನ್ ವಹಿಸಿಕೊಂಡಿದೆ. ರಾಜ್ಯ, ಜಿಲ್ಲೆ ಮತ್ತು ಇತರ ಮಟ್ಟದಲ್ಲಿ ಇತರ ಮಟ್ಟದ ಯೂನಿಯನ್‌ಗಳು ಈ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ಕಾರ್ಯರೂಪದಲ್ಲಿ ತಂದಿವೆ.

ಜುಲೈ ೧೯೭೬ರಿಂದ ಸಹಕಾರಿ ತರಬೇತಿಯ ಹೊಣೆಯನ್ನು ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಆಶ್ರಯದಲ್ಲಿ ರಚಿತವಾಗಿರುವ ಸಹಕಾರಿ ತರಬೇತಿ ರಾಷ್ಟ್ರೀಯ ಮಂಡಳಿಯು (ಎನ್.ಸಿ.ಸಿ.ಟಿ) ವಹಿಸಿಕೊಂಡಿದೆ. ಈ ಮಂಡಳಿಯು ರಾಷ್ಟ್ರದಲ್ಲಿಯ ಸಹಕಾರ ತರಬೇತಿ ಚಟುವಟಿಕೆಗಳನ್ನು ಯೋಜಿಸುವ, ಸಂಘಟಿಸುವ, ನಿಯಂತ್ರಿಸುವ ಮತ್ತು ಹೊಂದಾಣಿಕೆ ಮಾಡುವ ಹೊಣೆ ಹೊತ್ತುಕೊಂಡಿದೆ.

ಉಚ್ಚ ಮಟ್ಟದ ಅಧಿಕಾರ ವರ್ಗದವರಿಗೆ ತರಬೇತಿ ಕಾರ್ಯಕ್ರಮ

ಉಚ್ಚ ಮಟ್ಟದ ಅಧಿಕಾರಿಗಳಿಗೆ ಅಂದರೆ ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯೂಟಿ ರಿಜಿಸ್ಟ್ರಾರ್, ರಾಜ್ಯ ಬ್ಯಾಂಕಿನ, ಜಿಲ್ಲಾ ಬ್ಯಾಂಕಿನ ಅಥವಾ ರಾಜ್ಯ ಅಥವಾ ಜಿಲ್ಲಾ ಮಟ್ಟದ ಮಾರಾಟ ಸಂಘಗಳ ಮ್ಯಾನೇಜರ್ ಮುಂತಾದವರಿಗೆ "ವೈಕುಂಠ ಮೆಹತಾ ರಾಷ್ಟ್ರೀಯ ಸಂಶೋಧನೆ ಮತ್ತು ಆಡಳಿತ ತರಬೇತಿ ಸಂಸ್ಥೆ"- ಪುಣೆ, ಇದರಲ್ಲಿ ಮೂವತ್ತೆಂಟು ವಾರಗಳ ವ್ಯವಹಾರ ನಿರ್ವಹಣೆ ಡಿಪ್ಲೊಮಾ (Diploma in Business Management) ತರಬೇತಿಯನ್ನು ಕೊಡಲಾಗುತ್ತಿದೆ. ಈ ಸಂಸ್ಥೆ, ಸಹಕಾರ ಕ್ಷೇತ್ರದಲ್ಲಿ ವ್ಯವಸ್ಥಾಪನಾ ತರಬೇತಿ ಮತ್ತು ಸಂಶೋಧನೆ ಬಗ್ಗೆ ಶಿಖರ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ.

ಮಧ್ಯಮ ದರ್ಜೆಯ ಅಧಿಕಾರಿಗಳ ತರಬೇತಿ ಕಾರ್ಯಕ್ರಮ

ಮಧ್ಯಮ ದರ್ಜೆಯ ಅಧಿಕಾರಿಗಳಿಗಾಗಿ ಅಂದರೆ ಲೆಕ್ಕಪರಿಶೋಧಕರು, ಅರ್ಬನ್ ಬ್ಯಾಂಕಿನ ಮತ್ತು ತಾಲ್ಲೂಕು ಮಾರಾಟ ಸಂಘಗಳ

ವ್ಯವಸ್ಥಾಪಕರು ಮುಂತಾದವರಿಗೆ, ಕಿರಿಯ ದರ್ಜೆಯ ಸಿಬ್ಬಂದಿಯವರಿಗೆ ಅಂದರೆ ಮೇಲ್ವಿಚಾರಕರು, ಕಿರಿಯ ಲೆಕ್ಕಪರಿಶೋಧಕರು, ಪತ್ತಿನ ಸಂಘಗಳ ಇತರೆ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ರಾಜ್ಯ ಸಹಕಾರ ಯೂನಿಯನ್ ನಡೆಸುತ್ತಿರುವ ೭ ಸಹಕಾರಿ ತರಬೇತಿ ಕಾಲೇಜಿನಲ್ಲಿ ತರಬೇತಿ ಮಾಡಲಾಗುತ್ತಿದೆ. ಈ ಕಾಲೇಜುಗಳಲ್ಲಿ ತರಬೇತಿ ಹೊಂದಿದ ಸಿಬ್ಬಂದಿಯವರಿಗೆ ಉಚಿತ ಶಿಕ್ಷಣದ ಏರ್ಪಾಟು, ಪ್ರವಾಸ ಖರ್ಚು, ಉಚಿತವಾದ ಹಾಸ್ಟಲ್ ಸೌಕರ್ಯವಲ್ಲದೆ ಪ್ರತಿ ತಿಂಗಳು ೬೦ ರೂಪಾಯಿಗಳ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಅಲ್ಲದೆ ವಿಶೇಷ ತರಬೇತಿ ಶಿಬಿರವನ್ನು ಪರಿಶಿಷ್ಟ ಜಾತಿ - ಪಂಗಡದವರಿಗೆ ತಿಂಗಳಿಗೆ ೩೦೦ ರೂಪಾಯಿ ಶಿಷ್ಯ ವೇತನ ನೀಡುತ್ತಾ ತರಬೇತಿ ಕಾರ್ಯಕ್ರಮವನ್ನು ರಾಜ್ಯ ಸಹಕಾರ ಮಹಾಮಂಡಳ ನಡೆಸುತ್ತಿದೆ.

ಈ ರೀತಿಯಲ್ಲಿ (೨೨-೦೪-೧೯೯೭) ರಂದು ಅಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಸಹಕಾರ ಚಳವಳಿಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಅಲ್ಲದೆ ಈ ಕೆಳಕಂಡ ಏಳು ಸಹಕಾರಿ ತರಬೇತಿ ಕೇಂದ್ರಗಳನ್ನು ನಡೆಸುತ್ತಿದೆ. ಅವುಗಳೆಂದರೆ (೧) ಬೆಂಗಳೂರು (೨) ಮೈಸೂರು (೩) ಮಡಕೇರಿ (೪) ಶಿವಮೊಗ್ಗ (೫) ಧಾರವಾಡ (೬) ಗುಲ್ಬರ್ಗಾ (೭) ಮೂಡಬಿದ್ರೆ. ಈ ಕೇಂದ್ರಗಳಲ್ಲಿ ಡಿಪ್ಲೊಮಾ ಇನ್-ಕೋಆಪರೇಷನ್ ಜೊತೆಗೆ ವಿವಿಧ ಸಹಕಾರ ಸಂಘಗಳ ಸಿಬ್ಬಂದಿಯವರಿಗೆ ವಿಶೇಷ ಅಲ್ಪಾವಧಿ ತರಬೇತಿ ಶಿಕ್ಷಣದ ಯೋಜನೆ ಮತ್ತು ಸೇವಾ ಸಹಕಾರ ಸಂಘದ ಕಾರ್ಯದರ್ಶಿಗಳಿಗೆ, ಪದಾಧಿಕಾರಿಗಳಿಗೆ ವ್ಯಾಪಾರ ಅಭಿವೃದ್ಧಿ ಯೋಜನೆಯ ತರಬೇತಿ ನಡೆಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ೧೬ ಎಂ.ಎಂ.ಪ್ರೊಜೆಕ್ಟರ್ ಮತ್ತು ಫಿಲಂಗಳು ಸಹ ಇವೆ. ಅಲ್ಲದೆ ಓವರ್‌ಹೆಡ್ ಪ್ರೊಜೆಕ್ಟರ್, ಫಿಲಂ ಚಾರ್ಟ್‌ಬೋರ್ಡ್, ಟಿ.ವಿ. ಟೇಪ್‌ರಿಕಾರ್ಡ್, ವಿ.ಸಿ.ಪಿ., ಸ್ಲೈಡ್ ಪ್ರೊಜೆಕ್ಟರ್ ಲಭ್ಯವಿದೆ.

ಗುಡ್ಡಗಾಡು ಗಿರಿಜನ ಮತ್ತು ಅಲೆಮಾರಿ ಸಹಕಾರ ಸಂಘಗಳ ಸದಸ್ಯರಿಗೆ ಸಹಕಾರ ಶಿಕ್ಷಣ ನೀಡುವುದಕ್ಕಾಗಿಯೇ ವಿಶೇಷ ಲ್ಯಾಂಪ್ಸ್ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಪ್ರಚಾರದ ಅಂಗವಾಗಿ ಸಹಕಾರ

ಚಲನ ಚಿತ್ರವನ್ನು ಗ್ರಾಮಾಂತರದಲ್ಲಿ ಬಿತ್ತರಿಸುವುದಕ್ಕೆ ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಮತ್ತು ಗುಲ್ಬರ್ಗಾ ವಿಭಾಗಕ್ಕೆ ಒಂದೊಂದು ಘಟಕವು ಕಾರ್ಯನಿರತವಾಗಿವೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಕರ್ನಾಟಕ ಸರ್ಕಾರ ಅನುದಾನ ರೂಪದಲ್ಲಿ ಸಹಾಯ ಧನವನ್ನು ನೀಡಿ ಮಹಾಮಂಡಳಕ್ಕೆ ಪ್ರೋತ್ಸಾಹ ಕೊಡುತ್ತಿದೆ.

ಸಾಮಾನ್ಯ ಶಿಕ್ಷಣಯೋಜನೆ

ಈ ಶಿಕ್ಷಣ ಯೋಜನೆಯು ಜಿಲ್ಲಾ ಯೂನಿಯನ್ನುಗಳ ಮುಖಾಂತರ ಕಾರ್ಯಗತವಾಗುತ್ತದೆ. ಜಿಲ್ಲೆಗಳಲ್ಲಿ ಸಹಕಾರಿ ಸಂಘಗಳ ಸದಸ್ಯರಿಗೆ ಮತ್ತು ಪದಾಧಿಕಾರಿಗಳಿಗೆ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲು ಜಿಲ್ಲೆಯ ಉಪ ವಿಭಾಗಕ್ಕೆ ಒಬ್ಬೊಬ್ಬರು ಸಹಕಾರ ಶಿಕ್ಷಣಾಧಿಕಾರಿಗಳಿರುತ್ತಾರೆ (Co - Operative Education Instructor). ಇವರಿಗೆ ಅವಶ್ಯವಿದ್ದ ತರಬೇತಿಯನ್ನು ದಿಲ್ಲಿಯಲ್ಲಿ ಕೊಡುತ್ತಾರೆ. ಈ ತರಬೇತಿ ವ್ಯವಸ್ಥೆಯನ್ನು ರಾಷ್ಟ್ರೀಯ ಸಹಕಾರ ಯೂನಿಯನ್ನು ನೀಡುತ್ತದೆ. ಈ ಸಹಕಾರ ಶಿಕ್ಷಣಾಧಿಕಾರಿಗಳು ಜಿಲ್ಲಾ ಸಹಕಾರ ಯೂನಿಯನ್ನಿನ ಮಾರ್ಗದರ್ಶನದಲ್ಲಿ ರಾಜ್ಯ ಸಹಕಾರಿ ಮಹಾಮಂಡಳದ ನಿಯಂತ್ರಣಕ್ಕೊಳಪಟ್ಟು ಕೆಲಸ ಮಾಡುತ್ತಿರುತ್ತಾರೆ.

ಸಹಕಾರ ಸಂಘಗಳ ಗೌರವಾನ್ವಿತ ಅಧಿಕಾರಿಗಳಿಗೆ, ಸದ್ಯದ ಸದಸ್ಯರಿಗೆ, ಭಾವಿ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ, ಸಹಕಾರ ಶಿಕ್ಷಣವನ್ನು ನೀಡುವ ಹೊಣೆ ರಾಜ್ಯ ಸಹಕಾರ ಮಹಾಮಂಡಳದ ಸಹಕಾರ ಶಿಕ್ಷಣಾಧಿಕಾರಿಯ ಮೇಲೆ ಇರುತ್ತದೆ. ಇವರ ಅಧೀನದಲ್ಲಿ ಪ್ರತಿ ವಿಭಾಗಕ್ಕೆ ಒಬ್ಬರಂತೆ ಸಹಾಯಕ ಶಿಕ್ಷಣಾಧಿಕಾರಿಗಳು ಇರುತ್ತಾರೆ. ಈ ಸಹಾಯಕ ಶಿಕ್ಷಣಾಧಿಕಾರಿಗಳ ಅಧೀನದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸಹಕಾರಿ ಶಿಕ್ಷಕರು ಕೆಲಸ ಮಾಡುತ್ತಾರೆ. ಅಲ್ಲದೆ ಮಹಿಳಾ ಸದಸ್ಯರಿಗೆ, ಪದಾಧಿಕಾರಿಗಳಿಗೆ ಶಿಕ್ಷಣ ಮತ್ತು ತರಬೇತಿ ನೀಡಲು ಮಹಿಳಾ ಸಹಕಾರ ಶಿಕ್ಷಾಣಾಧಿಕಾರಿಗಳು, ಮಹಿಳಾ ಸಹಕಾರಿ ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ. ಮಹಾಮಂಡಳವು ಹಮ್ಮಿಕೊಂಡಿರುವ ಶಿಕ್ಷಣ ಕಾರ್ಯಕ್ರಮಗಳೆಂದರೆ -

		ತರಗತಿಗಳು	ದಿನಗಳು
೧.	ಕಾರ್ಯದರ್ಶಿಗಳ ಶಿಬಿರಗಳು	೨	೭
೨.	ಆಡಳಿತ ಸಮಿತಿಯವರಿಗೆ ೩ ದಿವಸಗಳ ತರಗತಿ	ಸಿಇಒ ೨೦-೧೦	೯೦
೩.	ಸದಸ್ಯರಿಗೆ ಒಂದು ದಿನದ ತರಗತಿ	೩೦-೧೦	೪೦
೪.	ಅಬಲ ವರ್ಗದ ಸದಸ್ಯರಿಗೆ ಒಂದು ದಿನದ್ದು	೧೦-೧೦	೨೦
೫.	ಮಹಿಳೆಯರಿಗೆ ಒಂದು ದಿನದ ತರಗತಿ	೧೦-೧೦	೨೦
೬.	ದತ್ತು ಸಹಕಾರ ಸಂಘ ವರ್ಷಕ್ಕೆ	೧-೧	೧
೭.	ಯುವಕ ತರಗತಿ ವರ್ಷದಲ್ಲಿ ೨ ದಿನದ್ದು	೭	೭

೮. ಚರ್ಚಾಸ್ಪರ್ಧೆ ಪದವಿಪೂರ್ವ ವಿದ್ಯಾರ್ಥಿಗಳಿಗೆ, ಜಿಲ್ಲಾಮಟ್ಟ, ರಾಜ್ಯಮಟ್ಟ

೯. ಸಹಕಾರ ಸಪ್ತಾಹ

೧೦. ಸಹಕಾರ ಪತ್ರಿಕೆ

ವಿಶೇಷ ಕಾರ್ಯಗಳು

೧.	ಅಲ್ಪಾವಧಿ ತರಬೇತಿ ಶಿಬಿರ ಸಿಬ್ಬಂದಿಗೆ ವರ್ಷಕ್ಕೆ	೪
೨.	ನಾಯಕತ್ವ ತರಬೇತಿ ಶಿಬಿರ ಅಧಿಕಾರೇತರರಿಗೆ	೪
೩.	ವಿಚಾರಗೋಷ್ಠಿ, ಸಹಕಾರ ಕ್ಷೇತ್ರವಾರು	೪
೪.	ಜಾಗೃತಿ ಶಿಬಿರ, ಸಿಬ್ಬಂದಿ ಮತ್ತು ಸದಸ್ಯರು ಮತ್ತು ಇತರರಿಗೆ	೪
೫.	ಸಮ್ಮೇಳನ	೧
೬.	ದತ್ತು ಕೆಲಸ (ಸಂಘದ ಅಭಿವೃದ್ಧಿ)	೨

ಮೇಲ್ಕಾಣಿಸಿದ ಕೆಲಸಗಳನ್ನು ನಡೆಸುವುದಲ್ಲದೆ ಸಹಕಾರ ಶಿಕ್ಷಕರು ಸಂಘಗಳ ಸಾಮಾನ್ಯ ಸಭೆಗಳಿಗೆ ಹಾಜರಾಗುವುದಲ್ಲದೆ ಸಣ್ಣ ರೈತರ ಅಭಿವೃದ್ಧಿ ಮಂಡಳಿಯ ವಿಶೇಷ ಕಾರ್ಯಕ್ರಮಗಳಿಗೆ ಗಮನಕೊಟ್ಟು ಸಹಕಾರ ಪತ್ರಿಕೆಗೆ ಲೇಖನಗಳನ್ನು ಕಳುಹಿಸಿ ಕೊಡುತ್ತಾರೆ.

ಮಹಾಮಂಡಳದ ಸದಸ್ಯತ್ವ

೧. ಇಡೀ ರಾಜ್ಯವೇ ಕಾರ್ಯಕ್ಷೇತ್ರವಿದ್ದ ರಾಜ್ಯ ಸಹಕಾರಿ ಸಂಘಗಳು.

೨. ಜಿಲ್ಲಾ ಸಹಕಾರ ಸಂಘಗಳು.

ಬಂಡವಾಳ ರಾಜ್ಯ ಸಹಕಾರಿ ಮಹಾಮಂಡಳವು ತನ್ನ ಬಂಡವಾಳವನ್ನು ಕೆಳಗೆ ಕಾಣಿಸಿದ ಬಾಬುಗಳಿಂದ ಕೂಡಿಸಬಹುದು.

೧. ಸದಸ್ಯ ಸಹಕಾರ ಸಂಘಗಳಿಂದ ಷೇರು ಧನ.

೨. ಇತರ ಸಹಕಾರ ಸಂಘಗಳಿಂದ ವಂತಿಕೆ ಮತ್ತು ಠೇವಣಿಗಳನ್ನು ಪಡೆದುಕೊಳ್ಳುವುದು.

೩. ಸಹಕಾರ ಶಿಕ್ಷಣ ನಿಧಿ ವಸೂಲಿ ಮಾಡುವುದು.

೪. ಸಹಾಯನಿಧಿ, ಸಾಲ ಮತ್ತು ಸರ್ಕಾರದಿಂದ ಅನುದಾನ ಪಡೆದುಕೊಳ್ಳುವುದು.

೫. ಸರ್ಕಾರದಿಂದ ವಂತಿಕೆ ಪಡೆದುಕೊಳ್ಳುವುದು.

೬. ಸಹಕಾರದ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿ ಅವುಗಳ ಮಾರಾಟ ಮಾಡುವುದು.

ಆಡಳಿತ ಸಮಿತಿ : ಜಿಲ್ಲಾ ಸಹಕಾರಿ ಸಂಘದಿಂದ ಸದಸ್ಯರಿರುತ್ತಾರೆ. ರಾಜ್ಯಮಟ್ಟದ ಸಹಕಾರ ಸಂಘಗಳಿಂದ ಆಯ್ಕೆಯಾದ ಪ್ರತಿನಿಧಿಗಳಿರುತ್ತಾರೆ. ಮತ್ತು ಸ್ಥಾನಬಲದಿಂದ ಸರ್ಕಾರದ ಪತಿಯಿಂದ ರಿಜಿಸ್ಟ್ರಾರ್‌ರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಸಮಿತಿಯ ಸದಸ್ಯರಾಗಿರುತ್ತಾರೆ.

ಆಡಳಿತ ಸಮಿತಿಯು ತಮ್ಮೊಳಗೆ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಮತ್ತು ಕೋಶಾಧಿಕಾರಿಯನ್ನು ಚುನಾಯಿಸತಕ್ಕದ್ದು. ಆಡಳಿತ ಸಮಿತಿಯು ಕಾರ್ಯನಿರ್ವಹಣೆಗೆ ಬೇಕಾಗುವ ಮತ್ತು ಸಾಮಾನ್ಯವಾಗಿ ಸಭೆಯಿಂದ ಅಧಿಕಾರ ಕೊಡಲ್ಪಟ್ಟ ಎಲ್ಲಾ ಕಾರ್ಯಗಳನ್ನು ನೆರವೇರಿಸುವುದು ಅವಶ್ಯ ವಿಸ್ತರ, ಹಣಕಾಸಿನ ಸಮಿತಿ, ಪ್ರಚಾರ ಮತ್ತು ಸಂಘಟನಾ ಸಮಿತಿ,

ಶಿಕ್ಷಣ ಮತ್ತು ತರಬೇತಿ ಸಮಿತಿ ಮತ್ತು ಸಂಪಾದಕ ಸಮಿತಿಗಳನ್ನು ನಿಯಮಿಸಬಹುದು.

ಮಹಾಮಂಡಳಕ್ಕೆ ಪೂರ್ಣಾವಧಿಯ ಇಲಾಖೆಯಿಂದ ಜಂಟಿ ರಿಜಿಸ್ಟ್ರಾರ್‌ರವರು, ವ್ಯವಸ್ಥಾಪಕ ನಿರ್ದೇಶಕರಾಗಿ, ಉಪ-ನಿಬಂಧಕರು ಕಾರ್ಯದರ್ಶಿಯವರಾಗಿ ಜವಾಬ್ದಾರಿ ನಿರ್ವಹಿಸುತ್ತಾರೆ.

ಜಿಲ್ಲಾ ಸಹಕಾರ ಯೂನಿಯನ್‌ಗಳು

ಉದ್ದೇಶಗಳು

೧. ಸಹಕಾರ ಆಂದೋಲನದ ಬೆಳವಣಿಗೆಯ ಸಲುವಾಗಿ ಸಹಕಾರ ತತ್ತ್ವಜ್ಞಾನವನ್ನು ಪ್ರಸಾರ ಮಾಡುವುದು.

೨. ವಿವಿಧ ಪ್ರಕಾರದ ಸಂಘಗಳನ್ನು ಸ್ಥಾಪಿಸುವ ಯೋಜನೆ ತಯಾರಿಸುವುದು, ಇದ್ದ ಸಂಘಗಳು ಪ್ರಗತಿ ಪರವಾಗಿ ಕೆಲಸ ಮಾಡುವಂತೆ ಸಹಾಯ ಮಾಡುವುದು.

೩. ಜಿಲ್ಲೆಯಲ್ಲಿಯ ಸಹಕಾರಿ ಆಂದೋಲನ ಪ್ರಮುಖವಾಗಿ ಕೆಲಸ ಮಾಡುವುದು.

೪. ಜಿಲ್ಲೆಯಲ್ಲಿನ ಸಹಕಾರಿ ಸಂಘಗಳ ಹಿತಾಸಕ್ತಿಯನ್ನು ರಕ್ಷಿಸುವುದು.

೫. ಜಿಲ್ಲೆಯಲ್ಲಿಯ ಸದಸ್ಯ ಸಹಕಾರಿ ಸಂಘಗಳಿಗೆ ಸಹಾಯ ಮತ್ತು ಮಾರ್ಗದರ್ಶನ ಮಾಡುವುದು.

೬. ಜಿಲ್ಲೆಯಲ್ಲಿರುವ ಜನಸಾಮಾನ್ಯರಿಗೆ ಆಂದೋಲನೆಯಲ್ಲಿಯ ಕೆಲಸಗಾರರಿಗೆ ಮತ್ತು ಸಂಘಗಳ ಸದಸ್ಯರು ಮತ್ತು ಪದಾಧಿಕಾರಿಗಳಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿ ಏರ್ಪಾಡು ಮಾಡುವುದು.

೭. ಸಂಚಾರಿ ವಾಚನಾಲಯಗಳನ್ನು ಪ್ರಾರಂಭಿಸುವುದು, ಪುಸ್ತಕ, ನಿಯತಕಾಲಿಕೆ, ಸಹಾಯ ಮತ್ತು ವಿಕಸನದ ಬಗ್ಗೆ ಸಾಹಿತ್ಯ ಮತ್ತು ಲೇಖನಗಳನ್ನು ಪ್ರಸಿದ್ಧಿಪಡಿಸುವುದು.

೮. ಅವಶ್ಯವೆನಿಸಿದಾಗ ಜಿಲ್ಲಾಮಟ್ಟದಲ್ಲಿ ಸಭೆ, ಸಮ್ಮೇಳನಗಳನ್ನು ಏರ್ಪಡಿಸುವುದು.

ಸದಸ್ಯತ್ವ

ಜಿಲ್ಲಾ ಮಧ್ಯವರ್ತಿ ಬ್ಯಾಂಕು, ಜಿಲ್ಲಾ ಔದ್ಯೋಗಿಕ ಬ್ಯಾಂಕು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ಮಾರಾಟ ಸಹಕಾರ ಸಂಘಗಳು, ಅರ್ಬನ್ ಬ್ಯಾಂಕುಗಳು, ಗೃಹನಿರ್ಮಾಣ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಹಾಲು ಉತ್ಪಾದಕರ ಯೂನಿಯನ್‌ಗಳು, ಗ್ರಾಹಕರ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಸಂಘಗಳು, ಪ್ರತಿ ತಾಲ್ಲೂಕಿನ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು ಹಾಗೂ ಇತರ ಸಹಕಾರ ಸಂಘಗಳು, ಯೂನಿಯನ್ನಿನ ಸದಸ್ಯತ್ವ ಪಡೆದಿರುತ್ತವೆ.

ಬಂಡವಾಳ

ಸದಸ್ಯ ಸಹಕಾರ ಸಂಘಗಳಿಂದ ಷೇರು ಹಣ, ಸಹಕಾರ ಸಾಹಿತ್ಯ ಮತ್ತು ಪುಸ್ತಕಗಳ ಮಾರಾಟದಿಂದ, ಯಾವುದೇ ಮೂಲದಿಂದ ಬರಬಹುದಾದ ಕೊಡುಗೆ ಮತ್ತು ಸಹಾಯಧನ, ಸರಕಾರ, ರಾಜ್ಯ ಸಹಕಾರ ಯೂನಿಯನ್ ಮತ್ತು ರಾಷ್ಟ್ರೀಯ ಸಹಕಾರ ಯೂನಿಯನ್ನಿಂದ ಸಹಾಯ ಧನ ಮತ್ತು ದತ್ತುಗಳಿಂದ ಅಲ್ಲದೆ ಸಾಲ ಪಡೆದುಕೊಳ್ಳುವುದು.

ಆಡಳಿತ ಸಮಿತಿ

ಪ್ರತಿ ತಾಲ್ಲೂಕಿನಲ್ಲಿಯ ಎಲ್ಲಾ ಪ್ರಾಥಮಿಕ ವ್ಯವಸಾಯ ಸಹಕಾರ ಸಂಘಗಳ ವತಿಯಿಂದ ಒಬ್ಬೊಬ್ಬ ನಿರ್ದೇಶಕ, ಪ್ರಾಥಮಿಕ ಮಾರಾಟ ಸಂಘಗಳಿಂದ ಒಬ್ಬ ನಿರ್ದೇಶಕ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ವತಿಯಿಂದ ಒಬ್ಬ ನಿರ್ದೇಶಕ, ಅರ್ಬನ್ ಬ್ಯಾಂಕುಗಳ ವತಿಯಿಂದ ಒಬ್ಬ ನಿರ್ದೇಶಕ, ಡಿ.ಸಿ.ಸಿ. ಬ್ಯಾಂಕಿನಿಂದ ಒಬ್ಬರು, ಕೈಗಾರಿಕಾ ಸಹಕಾರ ಸಂಘದಿಂದ ಒಬ್ಬರು, ಹಾಲು ಉತ್ಪಾದಕರ ಸಹಕಾರ ಸಂಘದಿಂದ ಒಬ್ಬರು, ಮಹಿಳಾ ಸಹಕಾರ ಸಂಘದಿಂದ ಒಬ್ಬರು, ಗೃಹನಿರ್ಮಾಣ

ಸಹಕಾರ ಸಂಘದಿಂದ ಒಬ್ಬರು ಚುನಾಯಿಸಲ್ಪಡುತ್ತಾರೆ. ಅಲ್ಲದೆ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು ಇಲಾಖೆಯ ವತಿಯಿಂದ ನಾಮ ನಿರ್ದೇಶಕರಾಗಿರುತ್ತಾರೆ.

ನಿರ್ದೇಶಕರ ಅಧಿಕಾರಾವಧಿ ಮೂರು ವರ್ಷಗಳಾಗಿರುತ್ತದೆ. ಆಡಳಿತ ಸಮಿತಿಯು ಎರಡು ತಿಂಗಳಿಗೊಮ್ಮೆ ಮಾಸಿಕ ಸಭೆ ನಡೆಸಿ ಯೂನಿಯನ್ನಿನ ಬಗ್ಗೆ ಚರ್ಚಿಸಿರುತ್ತದೆ. ಅವರು ತಮ್ಮೊಳಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮತ್ತು ಉಪಾಧ್ಯಕ್ಷರನ್ನಾಗಿ, ಖಜಾಂಚಿಯಾಗಿ ಆಯ್ಕೆ ಮಾಡಿಕೊಳ್ಳುವವರು.

ಯೂನಿಯನ್ನಿಗೆ ರಾಜ್ಯ ಸಹಕಾರ ಮಹಾ ಮಂಡಳದಿಂದ ನಿಯೋಜಿಸಿರುವ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು ಕಾರ್ಯದರ್ಶಿಯಾಗಿ, ಮತ್ತು ಜಿಲ್ಲಾ ಸಹಕಾರ ಶಿಕ್ಷಕರು ಕೆಲಸ ನಿರ್ವಹಿಸುತ್ತಿರುತ್ತಾರೆ. ಆಡಳಿತ ಮಂಡಳಿಯು ಜಿಲ್ಲಾ ಯೂನಿಯನ್ನಿಗೆ ಒಬ್ಬ ಮ್ಯಾನೇಜರ್ ಮತ್ತು ಅವಶ್ಯವಿದ್ದ ಇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳುತ್ತಾರೆ. ಅಧ್ಯಕ್ಷರ ಸಾಮಾನ್ಯ ನಿಯಂತ್ರಣದಲ್ಲಿ ಸಂಸ್ಥೆಯು ಕಾರ್ಯ ನಡೆಸುತ್ತಿದೆ. ಜಿಲ್ಲಾ ಸಹಕಾರ ಯೂನಿಯನ್, ರಾಜ್ಯಸರ್ಕಾರ ಮಹಾ ಮಂಡಳಿಯ ನಿಯಂತ್ರಣದೊಂದಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥಿತಗೊಳಿಸಲಾಗುತ್ತಿದೆ. ಪ್ರತಿ ವರ್ಷವು ರಾಜ್ಯ ಮಹಾಮಂಡಳದ ನಿರ್ದೇಶನದಂತೆ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಸಹಕಾರ ಶಿಕ್ಷಕರು, ಸದಸ್ಯರಿಗೆ, ಪದಾಧಿಕಾರಿಗಳಿಗೆ, ಸಿಬ್ಬಂದಿಯವರಿಗೆ ಸಹಕಾರ ಶಿಕ್ಷಣ ತರಬೇತಿ ಕಾರ್ಯಕ್ರಮಗಳನ್ನು ಮತ್ತು ವಾರ್ಷಿಕ ಕಾರ್ಯಕ್ರಮಗಳನ್ನು ನಡೆಸಿ ವರದಿಯನ್ನು ಸಲ್ಲಿಸುತ್ತಾರೆ. ಸಂಬಂಧಪಟ್ಟ ಮೇಲಧಿಕಾರಿಗಳಿಂದ ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಿಸಿ ಉತ್ತಮ ಸಲಹೆ ಸೂಚನೆಗಳನ್ನು ನೀಡಲಾಗುತ್ತದೆ.

ಸಹಕಾರಿ ಧ್ವಜದ ಬಗ್ಗೆ ಮಾಹಿತಿ

ಜಾಗತಿಕ ಸಹಕಾರಿಗಳು ಸದ್ಯಕ್ಕೆ ಸಪ್ತರಂಗಿನ, ಕಾಮನ ಬಿಲ್ಲಿನ ಧ್ವಜವನ್ನೇ ಸಹಕಾರಿ ಧ್ವಜವನ್ನಾಗಿ ಅಂಗೀಕರಿಸಿದ್ದಾರೆ. ಧ್ವಜವು ಒಂದು ಮಹತ್ವದ ಸಂಕೇತ, ಆ ಧ್ವಜವು ಉಜ್ವಲ ವಿಚಾರಗಳ ಉದಾತ್ತ ಧ್ಯೇಯಗಳನ್ನು ಸೂಚಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಸಹಕಾರಿ ಧ್ವಜದ ಸಂಕೇತವೇನು? ಅದರಲ್ಲಿ ಏಳು ಬಣ್ಣಗಳೇಕೆ? ಕಾಮನಬಿಲ್ಲನ್ನು ಹೋಲುವುದೇಕೆ? ಮೊದಲಾದ ಸಂಗತಿಗಳನ್ನು ಅರಿತುಕೊಳ್ಳುವುದು ಸೂಕ್ತ.

ಕಾಮನಬಿಲ್ಲು ನೈಸರ್ಗಿಕವಾಗಿರುವಂತೆ ಸಹಕಾರವು ನೈಸರ್ಗಿಕವಾಗಿ ಉಳಿಯಬೇಕು ಅಂದರೆ ಕಾಮನ ಬಿಲ್ಲಿನಂತೆ ಅಂದವಾಗುವುದು. ನೈಸರ್ಗಿಕವಾದ ಕಾಮನಬಿಲ್ಲು ಜನಮನವನ್ನು ತಣಿಸುವಂತೆ ಆ ರೀತಿ ಬೆಳೆದ ಸಹಕಾರವು ಜನರ ಹಿತವನ್ನು ಸಹಜವಾಗಿ ಸಾಧಿಸುತ್ತದೆ. ಕಾಮನಬಿಲ್ಲು ನಿರ್ಮಲವಾಗಿರುವಂತೆ ಸಹಕಾರವು ನಿರ್ಮಲವಾಗಿರಬೇಕು.

ಇದರಲ್ಲಿ ಏಳು ಬಣ್ಣಗಳೇಕೆ? ಒಂದೊಂದು ಬಣ್ಣಕ್ಕೂ ಒಂದೊಂದು ಉದ್ದೇಶವಿದೆ. ಏಳು ಬಣ್ಣಗಳು ಸೇರಿ ಸಮ್ಮಿಶ್ರ ಸಹಕಾರದ ಉದ್ದೇಶಗಳನ್ನು ಪ್ರತಿರೂಪಿಸುತ್ತದೆ. ಕಾಮನಬಿಲ್ಲಿನಲ್ಲಿ ಕೆಂಪು, ಕಿತ್ತಳೆ, ಅರಿಶಿಣ, ಹಸಿರು, ಶ್ಯಾಮಲ, ನೀಲಿ ಮತ್ತು ಬೂದು ಬಣ್ಣಗಳಿವೆ. ಈ ಏಳು ಬಣ್ಣಗಳೇ ಸಹಕಾರಿ ಧ್ವಜದಲ್ಲಿರುತ್ತವೆ. (ಸಹಕಾರಿ ಧ್ವಜವನ್ನು ಹಾರಿಸುವಾಗ ಕೆಂಪು ಬಣ್ಣವು ಮೇಲೆ ಇರುವಂತೆ ನೋಡಿಕೊಳ್ಳಬೇಕು).

ಮೊದಲನೆಯದಾದ ಕೆಂಪು ಬಣ್ಣವು ಸಹಕಾರಿ ಬೇಸಾಯವನ್ನು ತೋರಿಸುತ್ತದೆ. ಇದಕ್ಕಾಗಿಯೇ ಈಗ ಭಾರತದಲ್ಲಿ ಸಹಕಾರಿ ಬೇಸಾಯಕ್ಕೆ ಎಂದಿಲ್ಲದ ಮಹತ್ವ ಬಂದಿದೆ. ಎರಡನೆಯದು ಕಿತ್ತಳ. ಇದು ಸಹಕಾರಿ

ಉದ್ದಿಮೆಯನ್ನು ತೋರಿಸುತ್ತದೆ. ದೊಡ್ಡದೊಡ್ಡ ಉದ್ದಿಮೆಗಳು ಸಹಕಾರಿ ತತ್ತ್ವದ ಮೇರೆಗೆ ಸಂಘಟಿಸುವುದರಿಂದ ಆಗುವ ಲಾಭಗಳ ಬಗ್ಗೆ ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮೂರನೆಯದು ಅರಿಶಿನ. ಇದು ಸಹಕಾರಿ ಮಾರಾಟ ಮತ್ತು ವ್ಯಾಪಾರವನ್ನು ಸೂಚಿಸುತ್ತದೆ. ಈಗ ಎಲ್ಲೆಡೆಯಲ್ಲಿ ಸಹಕಾರಿ ಮಾರಾಟವನ್ನು ಪ್ರೋತ್ಸಾಹಿಸಲಾಗುತ್ತದೆ. ನಾಲ್ಕನೆಯದು ಹಸಿರು, ಇದು ಸಹಕಾರ ಪತ್ತು ಅಥವಾ ಹಣಕಾಸನ್ನು ಸೂಚಿಸುತ್ತದೆ. ಐದನೆಯದು ಶ್ಯಾಮಲ, ಇದು ಸಹಕಾರಿ ಆರೋಗ್ಯವನ್ನು, ಆರನೆಯದು ನೀಲಿ, ಇದು ಸಹಕಾರಿ ಶಿಕ್ಷಣ ಮತ್ತು ಪ್ರಚಾರವನ್ನು, ಏಳನೆಯದು ಬೂದು ಬಣ್ಣ ಇದು ಮಾನವನ ಇತರ ಚಟುವಟಿಕೆಗಳನ್ನು ಸೂಚಿಸುತ್ತದೆ.

ಈ ಎಲ್ಲಾ ರಂಗಗಳಲ್ಲಿ ಸಹಕಾರವು ಪ್ರವೇಶಿಸಿದಾಗ ಸಹಕಾರವು ಪರಿಪೂರ್ಣವಾದಂತೆ. ಪ್ರಕೃತ, ಕರ್ನಾಟಕ ರಾಜ್ಯದಲ್ಲಿ ಸಹಕಾರವು ಈಗ ಈ ಎಲ್ಲಾ ರಂಗಗಳಲ್ಲಿ ಸಾವಧಾನವಾಗಿ ಪ್ರವೇಶಿಸುತ್ತಿರುವುದು ಸುದೈವದ ಸಂಗತಿಯಾಗಿದೆ.

ನಬಾರ್ಡ್

ಹಲವು ವರ್ಷಗಳಿಂದ ನಬಾರ್ಡ್‌ನ್ನು ಪ್ರತ್ಯೇಕವಾಗಿ ಐ.ಡಿ.ಬಿ.ಐ.ನ ತಳಹದಿಯ ಮೇಲೆ ಸ್ಥಾಪನೆ ಮಾಡಬೇಕೆಂಬ ಸಲಹೆಯಿತ್ತು. ಭಾರತೀಯ ಸಹಕಾರಿ ಕಾಂಗ್ರೆಸ್ ಅನೇಕ ಅವಧಿಯಲ್ಲಿ ಇಂತಹ ಬ್ಯಾಂಕನ್ನು ಸ್ಥಾಪನೆ ಮಾಡುವ ಬಗ್ಗೆ ಅಭಿಪ್ರಾಯ ತಳೆದು ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಆಧಾರದ ಮೇಲೆ, ಆರ್.ಬಿ.ಐ. ಕೃಷಿ ಬ್ಯಾಂಕನ್ನು ಸ್ಥಾಪನೆ ಮಾಡುವ ಬಗ್ಗೆ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿ ಕೃಷಿ ಸಂಸ್ಥೆಗಳಿಗೆ ಸಾಲ ಒದಗಿಸುವುದು, ಅಲ್ಲದೆ ಗ್ರಾಮ ಕೈಗಾರಿಕೆಗಳಿಗೆ ಸಾಲದ ಪೂರೈಕೆಯನ್ನು ಪರಿಶೀಲಿಸಿ ಈಗಾಗಲೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಪೂರೈಕೆಯಲ್ಲಿ ನಿರತವಾದ ಸಂಸ್ಥೆಯನ್ನು ಒಂದುಗೂಡಿಸಲು ಪರಿಶೀಲಿಸಿ ತನ್ನ ವರದಿ ಸಲ್ಲಿಸಿತ್ತು. ಈ ಸಮಿತಿಯ ಶಿಫಾರಸನ್ನು ಕೇಂದ್ರ ಸರ್ಕಾರ ಸ್ವೀಕಾರ ಮಾಡಿ ಲೋಕಸಭೆ ಯಲ್ಲಿ ನಬಾರ್ಡ್ ಸ್ಥಾಪನೆ ಮಾಡುವ ಬಗ್ಗೆ ಪ್ರತ್ಯೇಕ ಕಾಯಿದೆಯನ್ನು ಪಾಸು

ಮಾಡಿತು. ಈ ಕಾಯ್ದೆಯ ಅಂಗವಾಗಿ ೧೨.೭.೧೯೮೨ ರಂದು ನಬಾರ್ಡ್ ರಾಷ್ಟ್ರಮಟ್ಟದ ಸಂಸ್ಥೆಯಾಗಿ ಸ್ಥಾಪಿಸಲ್ಪಟ್ಟಿತು. ಈ ಮೊದಲು ರಾಷ್ಟ್ರೀಯ ಕೃಷಿ ಮತ್ತು ಹಣಕಾಸು ಹಾಗೂ ಅಭಿವೃದ್ಧಿ ಸಂಸ್ಥೆಯ ಸಾಲದ ಯೋಜನೆ ಹಾಗೂ ಆರ್.ಬಿ.ಐ. ಕೃಷಿ ಹಾಗೂ ಗ್ರಾಮ ಕೈಗಾರಿಕೆಗಳ ಸಾಲದ ವಿಭಾಗ ಇವುಗಳನ್ನು ಜೊತೆ ಸೇರಿಸಿ ನಬಾರ್ಡ್ ಸಂಸ್ಥೆಯನ್ನು ರಚಿಸಲ್ಪಾಯಿತು. ನಬಾರ್ಡ್ ನೇರವಾಗಿ ಅಪೆಕ್ಸ್ ಬ್ಯಾಂಕಿಗೆ ಅಲ್ಪಾವಧಿ, ಮಧ್ಯಮಾವಧಿ ಸಾಲವನ್ನು ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ದೀರ್ಘಾವಧಿ ಸಾಲವನ್ನು ವಿವಿಧ ಸಂಸ್ಥೆಗಳ ಮೂಲಕ ಕೈಗಾರಿಕೆಗೆ ಬೇಕಾಗುವ ಸಾಲವನ್ನು ಪೂರೈಸುವ ರಾಷ್ಟ್ರಮಟ್ಟದ ಏಕೈಕ ಕೃಷಿ ಅಭಿವೃದ್ಧಿ ಬ್ಯಾಂಕಾಗಿರುತ್ತದೆ.

ಉದ್ದೇಶಗಳು

ಇದರ ಮುಖ್ಯ ಉದ್ದೇಶ ಕೃಷಿ ಅಭಿವೃದ್ಧಿಯನ್ನು ಒಳಗೊಂಡು ತೋಟಗಾರಿಕೆ, ಪಶುಸಂಗೋಪನೆ, ಕೋಳಿ ಸಾಕಾಣಿಕೆ, ಇವೇ ಮುಂತಾದ ಕಾರ್ಯ ಚಟುವಟಿಕೆಗಳಿಗೆ ಸಾಲ ಸೌಲಭ್ಯಗಳನ್ನು ಅಲ್ಲದೆ ವಿವಿಧ ಕ್ಷೇತ್ರದ ಆರ್ಥಿಕ ಕಾರ್ಯ ಚಟುವಟಿಕೆಗಳಿಗೆ ಸಾಲ ಸೌಲಭ್ಯಗಳನ್ನು ಪೂರೈಸಿ ಸಂಪೂರ್ಣವಾಗಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು, ಅಂದರೆ ಅಲ್ಪಾವಧಿ ಮಧ್ಯಮಾವಧಿ ದೀರ್ಘಾವಧಿ ಸಾಲಗಳನ್ನು ಪೂರೈಸುವುದು.

ಬಂಡವಾಳ

ಆರ್.ಬಿ.ಐ. ನೊಂದಿಗೆ ಸರ್ಕಾರ ಪ್ರಾಥಮಿಕವಾಗಿ ೧೦೦ ಕೋಟಿ ರೂಪಾಯಿಗಳ ಬಂಡವಾಳವನ್ನು ಇದಕ್ಕೆ ಒದಗಿಸಿದೆ. ಇದರ ಹಣಕಾಸಿನ ಮೂಲಗಳು ಹಿಂದೆ ಆರ್.ಬಿ.ಐ. ನ ರಾಷ್ಟ್ರೀಯ ಕೃಷಿ ಹಾಗೂ ಅಭಿವೃದ್ಧಿ ಸಂಸ್ಥೆಯ ಪೂರ್ಣ ಹಣಕಾಸು ಕೃಷಿ ಹಾಗೂ ಗ್ರಾಮೀಣ ಕೈಗಾರಿಕೆಗೆ ಇಲಾಖೆಯಿಂದ ಪೂರೈಸಲ್ಪಡುವ ಹಣಕಾಸು, ನಬಾರ್ಡ್‌ನ ಮೂಲ ಸಂಪನ್ಮೂಲಗಳಾಗಿದೆ. ಅಲ್ಲದೆ ನಬಾರ್ಡ್ ಸಾಲ ಪತ್ರಗಳನ್ನು ಹೊರಡಿಸಿ ಮಾರಾಟ ಮಾಡಲು ಕೇಂದ್ರ ಸರ್ಕಾರ ಅಸಲು ಮತ್ತು ಬಡ್ಡಿಗಾಗಿ ಭದ್ರತೆಯಾಗಿರುತ್ತದೆ. ಅಲ್ಲದೆ ೧೨ ತಿಂಗಳು ಮೇಲ್ಪಟ್ಟು ಠೇವಣಿಗಳ ಸ್ವೀಕಾರ ಮಾಡಲು ಸರ್ಕಾರ ಸ್ಥಳೀಯ ಸಂಸ್ಥೆಗಳು, ಬ್ಯಾಂಕುಗಳು ಮತ್ತು

ಅಧಿಕೃತವಾಗಿ ಸರ್ಕಾರದಿಂದ ಮಾನ್ಯತೆ ಪಡೆದ ವ್ಯಕ್ತಿಗಳಿಂದ ಹಣಕಾಸನ್ನು ಸಂಗ್ರಹಿಸುವುದು. ವಿದೇಶಿ ಹಣವನ್ನು ಕೇಂದ್ರ ಸರ್ಕಾರ ಭದ್ರತೆಯ ಮೇರೆಗೆ ಪಡೆಯಬಹುದು.

ವ್ಯವಸ್ಥಾಪನೆ

ನಬಾರ್ಡ್ ವ್ಯವಸ್ಥಾಪನೆಯು ಈ ಕೆಳಗೆ ನಮೂದಿಸಿದ ಕಾರ್ಯಕಾರಿ ಮಂಡಳಿಯ ನಿರ್ದೇಶನದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಆರ್.ಬಿ.ಐ. ನ ಗೌರ್ನರ್ ಇದರ ಅಧ್ಯಕ್ಷರಾಗಿಯೂ ಗ್ರಾಮಾಂತರ ಆರ್ಥಿಕ ಹಾಗೂ ಅಭಿವೃದ್ಧಿ ತಜ್ಞರಿಂದ ಕೂಡಿದ ಇಬ್ಬರು ಸದಸ್ಯರಿಂದ ೩ ಜನ ಸದಸ್ಯರು ಸಹಕಾರಿ ಬ್ಯಾಂಕಿನ ತಜ್ಞರು ೪ ವಾಣಿಜ್ಯ ಬ್ಯಾಂಕಿನ ಪರಿಣಿತರು ಇರುತ್ತಾರೆ. ೩ ಜನ ಸದಸ್ಯರು ಆರ್.ಬಿ.ಐ. ನಿಂದ ಪ್ರತಿನಿಧಿಸಲ್ಪಡುವರು. ಭಾರತ ಸರ್ಕಾರದ ಒಬ್ಬ ಅಧಿಕಾರಿ ಅಲ್ಲದೆ ಸರ್ಕಾರ ಇಬ್ಬರನ್ನು ಪೂರ್ಣಾವಧಿ ನಿರ್ದೇಶಕರನ್ನಾಗಿ ನೇಮಿಸುತ್ತದೆ.

ಎನ್.ಸಿ.ಡಿ.ಸಿ. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಕಾರ್ಪೋರೇಷನ್

ಎ.ಡಿ. ಗೋರವಾಲ ಸಮಿತಿಯ ಸಲಹೆ ಮೇರೆಗೆ ೧೯೫೬ರಲ್ಲಿ ಎನ್.ಸಿ.ಡಿ.ಸಿ. ಯನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಮತ್ತು ವೇರ್ ಹೌಸಿಂಗ್ ಬೋರ್ಡ್ ಎಂಬುದಾಗಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು. ನಂತರ ೧೯೬೩ರಲ್ಲಿ ಈ ಸಂಸ್ಥೆಯನ್ನು ಪುನರ್ ನಾಮಕರಣ ಮಾಡಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮವಾಗಿ ಪುನರ್ ರಚಿಸಲಾಯಿತು. ನಂತರ ಈ ಸಂಸ್ಥೆ ಭಾರತದಲ್ಲಿರುವ ಸಹಕಾರಿ ಸಂಘಗಳಿಗೆ ಬೇಕಾಗುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತನ್ನ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸಿತು.

ಉದ್ದೇಶಗಳು

೧. ಒಕ್ಕಲುತನದ ಉತ್ಪಾದನೆ, ರೂಪಾಂತರ ಮಾರಾಟ ಸಂಗ್ರಹಣೆ ಇತರೆ ಗೊತ್ತುಪಡಿಸಿದ ಪದಾರ್ಥಗಳನ್ನು ಆಯಾತ ಮತ್ತು ನಿರ್ಯಾತ ಮಾಡುವುದು.

೨. ರಾಜ್ಯ ಸರ್ಕಾರಗಳಿಗೆ ಸಹಕಾರಿ ವಿಕಾಸ ಕಾರ್ಯಗಳಿಗಾಗಿ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದಕ್ಕೆ ಸಾಲ ಮತ್ತು ಸಹಾಯಧನ ಒದಗಿಸುವುದು.

೩. ಕೇಂದ್ರ ಸರ್ಕಾರದ ವತಿಯಿಂದ ಸರ್ಕಾರ ಸಂಸ್ಥೆಗಳು ಖರೀದಿಸುವ ಒಕ್ಕಲುತನದ ಹುಟ್ಟುವಳಿ, ಆಹಾರ ಧಾನ್ಯ ಇತರೆ ಗೊತ್ತುಪಡಿಸಿದ ಪದಾರ್ಥಗಳಿಗಾಗಿ ರಾಜ್ಯ ಸರ್ಕಾರಗಳಿಗೆ ಹಣ ಪೂರೈಸುವುದು.

೪. ರಾಷ್ಟ್ರವ್ಯಾಪ್ತಿಯ ಮತ್ತು ರಾಜ್ಯಕ್ಕಿಂತ ಹೆಚ್ಚಿನ ಕಾರ್ಯಕ್ಷೇತ್ರ ಹೊಂದಿರುವ ಸಹಕಾರ ಸಂಘಗಳಿಗೆ ನೇರವಾಗಿ ಸಾಲ ಮತ್ತು ಸಹಾಯಧನ ಒದಗಿಸುವುದು.

೫. ಸಹಕಾರ ಸಂಘಗಳ ಮುಖಾಂತರ ಪೂರೈಸಬಹುದಾದ ಬೀಜ, ಗೊಬ್ಬರ, ಕೃಷಿ ಉಪಕರಣ ಮತ್ತು ಇತರೆ ವಸ್ತುಗಳ ಪೂರೈಕೆಗಾಗಿ ಯೋಜನೆ ತಯಾರಿಸುವುದು ಮತ್ತು ಯೋಜನೆಯನ್ನು ಕಾರ್ಯಗತ ಮಾಡುವುದು.

೬. ಸಹಕಾರ ಸಂಘಗಳಿಗೆ ಸರ್ಕಾರದ ಭರವಸೆಯ ಮೇಲೆ ಸಾಲ ನೀಡುವುದು.

೭. ರಾಷ್ಟ್ರ ಮತ್ತು ರಾಜ್ಯ ಸಹಕಾರ ಸಂಘಗಳ ಷೇರು ಬಂಡವಾಳದಲ್ಲಿ ಹಣ ತೊಡಗಿಸುವುದು.

೮. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಗೆ ಸಾಲ ಒದಗಿಸುವುದು.

೯. ಜಿಲ್ಲಾಮಟ್ಟದ ಪತ್ತಿನ ಸಹಕಾರ ಸಂಘಗಳಿಗೆ, ಟಿ.ಎ.ಪಿ.ಸಿ.ಎಂ.ಎಸ್. ಗಳಿಗೆ ಉಗ್ರಾಣಗಳನ್ನು ನಿರ್ಮಿಸಲು ಸಾಲ ಸೌಲಭ್ಯ ಕೊಡುವುದು.

೧೦. ರಾಷ್ಟ್ರ ಮತ್ತು ರಾಜ್ಯ ಮತ್ತು ಜಿಲ್ಲಾಮಟ್ಟದ ವೇರ್ ಹೌಸಿಂಗ್ ಕಾರ್ಪೊರೇಷನ್‌ಗಳಿಗೆ ಉಗ್ರಾಣಗಳನ್ನು ನಿರ್ಮಿಸಲು ಸಾಲ ಸೌಲಭ್ಯ ಒದಗಿಸುವುದು.

೧೧. ಹಿಂದುಳಿದ ರಾಜ್ಯಗಳ ಸಹಕಾರಿ ಅಭಿವೃದ್ಧಿ ಕಾರ್ಯಗಳಲ್ಲಿ ಅಂದರೆ ಬುಡಕಟ್ಟು ಜನಾಂಗದ ಸಹಕಾರ ಸಂಘಗಳ ಮುಖಾಂತರ ಸಾಲ ಸೌಲಭ್ಯ ಒದಗಿಸುವುದು.

೧೨. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಕಾರ ಡೈರಿ, ಮೀನುಗಾರಿಕೆ, ಹಂದಿ ಸಾಕಣೆ ಮತ್ತು ಗುಡಿ ಕೈಗಾರಿಕೆಗಳಿಗ ಸಾಲ ಒದಗಿಸುವುದು.

ಬಂಡವಾಳ

ಈ ಸಂಸ್ಥೆಗೆ ಪ್ರಾರಂಭದಲ್ಲಿ ಕೇಂದ್ರ ಸರ್ಕಾರ ೧೦೦ ಕೋಟಿ ರೂಪಾಯಿಗಳ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಧಿಯನ್ನು ಕ್ರೋಢೀಕರಿಸಿ ಕೊಡಲಾಯಿತು. ಅಲ್ಲದೆ ಇತರ ವಾಣಿಜ್ಯ ಬ್ಯಾಂಕುಗಳಿಂದ ಮತ್ತು ವಿದೇಶಿ ಬ್ಯಾಂಕುಗಳಿಂದ ಬಂಡವಾಳವನ್ನು ಕ್ರೋಢೀಕರಿಸಲಾಯಿತು.

ಆಡಳಿತ

ಕೇಂದ್ರ ಸರ್ಕಾರದ ಔದ್ಯೋಗಿಕ ಮತ್ತು ನಾಗರಿಕ ಪೂರೈಕೆ ಮಂತ್ರಿಗಳ ಅಧ್ಯಕ್ಷರಾಗಿರುತ್ತಾರೆ. ಅದೆ ಖಾತೆಯ ರಾಜ್ಯ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ. ನಂತರ ಈ ಉಪಾಧ್ಯಕ್ಷರು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಾರೆ. ಈ ಸಂಸ್ಥೆಯ ಪ್ರಧಾನ ಕಛೇರಿ ದೆಹಲಿಯಲ್ಲಿರುವುದು.

ರಾಜ್ಯದ ವಿವಿಧ ವಿಭಾಗಗಳಲ್ಲಿ ಬೆಂಗಳೂರನ್ನು ಒಳಗೊಂಡು ೭ ಪ್ರಾದೇಶಿಕ ಕಛೇರಿಯನ್ನು ಹೊಂದಿರುತ್ತದೆ. ಇದು ಸಾಮಾನ್ಯ ಸಭೆ ಮತ್ತು ವ್ಯವಸ್ಥಾಪನಾ ಸಮಿತಿಯ ಮುಖಾಂತರ ಕಾರ್ಯ ನಿರ್ವಹಿಸುತ್ತದೆ. ಸಾಮಾನ್ಯ ಸಭೆಯಲ್ಲಿ ೫೧ ಜನ ಸದಸ್ಯರು ಮತ್ತು ವ್ಯವಸ್ಥಾಪನಾ ಸಮಿತಿಯಲ್ಲಿ ೧೨ ಜನ ಸದಸ್ಯರಿರುತ್ತಾರೆ.

ಸಹಕಾರ ಸಪ್ತಾಹ

ಅಂತಾರಾಷ್ಟ್ರೀಯ ಸಂಪ್ರದಾಯವನ್ನು ಅನುಸರಿಸಿ ರಾಷ್ಟ್ರೀಯ ಸಹಕಾರಿ ಯೂನಿಯನ್ ಪ್ರತಿ ವರ್ಷ ನವಂಬರ್ ೧೪ ರಿಂದ

೨೦ ರವರೆಗೆ ರಾಷ್ಟ್ರದಾದ್ಯಂತ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಪ್ರತಿ ವರ್ಷ ಆಚರಿಸುತ್ತದೆ. ಅದನ್ನು ಅನುಸರಿಸಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ರಾಜ್ಯದಾದ್ಯಂತ ಸಹಕಾರಿ ಸಪ್ತಾಹವನ್ನು ಆಚರಿಸುತ್ತದೆ.

ಭಾರತದ ಸಹಕಾರಿ ಚಳವಳಿಯ ಬೆಳವಣಿಗೆಗೆ ಜವಾಹರಲಾಲ್ ನೆಹರೂ ನೀಡಿದ ಕಾಣಿಕೆ ಅಪಾರ, ಸ್ಮರಣೀಯ. ಆ ಕಾರಣದಿಂದಾಗಿ ನೆಹರೂರವರ ನೆನಪು ಸಹಕಾರದಲ್ಲಿ ಸದಾ ಹಸಿರಾಗಿರಲು ಸಹಕಾರಿ ಕಾಮನ್‌ವೆಲ್ತ್ ಸ್ಥಾಪನೆಯಾಗಬೇಕೆಂದು ನೆಹರೂರವರು ಬಯಸಿದ್ದರು. ಈ ದಿಸೆಯಲ್ಲಿ ಇದರ ಸಂಕೇತವಾಗಿ ನೆಹರೂರವರ ಹುಟ್ಟುಹಬ್ಬದಂದು ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸಲಾಗುತ್ತದೆ; ನವೆಂಬರ್ ೧೪ರಿಂದ ೨೦ರವರೆಗೆ ನಡೆಯುವ ಈ ಸಪ್ತಾಹ ಅರ್ಥಪೂರ್ಣವಾಗ ಬೇಕೆಂಬುದು ಎಲ್ಲರ ಆಶಯ.

ಸಪ್ತಾಹದ ಅವಧಿಯಲ್ಲಿ ಎಲ್ಲಾ ಕ್ಷೇತ್ರದ ಸಹಕಾರಿ ಸಂಘಗಳು ಸಹಕಾರಿ ಬಾವುಟವನ್ನು ಧ್ವಜಾರೋಹಣ ಮಾಡುವುದರೊಂದಿಗೆ ಮತ್ತು ಕಳೆದ ಒಂದು ವರ್ಷದ ಸಾಧಕ ಬಾಧಕ ವಿಮರ್ಶೆ ಮಾಡುವುದು, ಮುಂದಿನ ವರ್ಷಕ್ಕೆ ಯೋಜನೆ ರೂಪಿಸುವುದು, ಸಹಕಾರ ಸಂಘದ ಸದಸ್ಯರು ಮತ್ತು ಸಾರ್ವಜನಿಕರಲ್ಲಿ ಸಹಕಾರ ತತ್ತ್ವಗಳ ಅರಿವು ಮೂಡಿಸುವುದು. ಆದ್ದರಿಂದ ಈ ಅವಧಿಯಲ್ಲಿ ಸದಸ್ಯರನ್ನು ಪ್ರಜ್ಞಾವಂತರಾಗಿಸುವಲ್ಲಿ, ಸಹಕಾರಿ ಸಂಘಗಳನ್ನು ಪುನರ್‌ಜೀವನ ಗೊಳಿಸುವಲ್ಲಿ ತನ್ನನ್ನು ತಾನೇ ತೊಡಗಿಸುವಂತೆ ಪ್ರೇರೇಪಿಸುವುದು ಈ ಸಪ್ತಾಹದ ಮುಖ್ಯ ಉದ್ದೇಶವಾಗಿರುತ್ತದೆ.

ಈ ಅವಧಿಯಲ್ಲಿ ಎಲ್ಲಾ ಸಹಕಾರ ಸಂಘಗಳು ಸಭೆ ಸಮ್ಮೇಳನಗಳನ್ನು ನಡೆಸಿ ಸಂಘದ ಪ್ರಗತಿಯ ಬಗ್ಗೆ ಚರ್ಚಿಸುವುದು. ನಂತರ ಮುಂದಿನ ಯೋಜನೆಯ ಬಗ್ಗೆ ಕ್ರಮ ಕೈಗೊಳ್ಳುವುದು. ಈ ರೀತಿ ಈ ಸಹಕಾರಿ ಸಪ್ತಾಹವನ್ನು ನಾಡಹಬ್ಬವಾಗಿ ಆಚರಿಸಲಾಗುತ್ತದೆ.

ಸಹಕಾರ ಗೀತ

ಮಳೆಬಿಲ್ಲ ಬಣ್ಣದಲಿ ಮಿರುಗುವಾತಾಧ್ವಜವ
ತಳೆದು ನಾಗರಿಕತೆಯ ಹಾದಿ ಹಿಡಿದು
ಒಂದೆ ಗುರಿಯನ್ನು ನಂಬಿ, ಸಹಕಾರರಥವಿದನು
ಮುಂದು ಮುಂದಕೆ ನಡೆಸುತಿರುವವರಿಗೆ –
ನಾವಿಂದು ಬಾಗುವೆವು ಸೋದರ ಸ್ನೇಹದಲಿ
ಈ ವಿಶ್ವದೆಲ್ಲ ಸಹಕಾರಿಗಳಿಗೆ.

ಬೆಳೆದು ಕೊಡುವನಿಗಿಲ್ಲ, ಕೊಂಡುಣ್ಣುವನಿಗಿಲ್ಲ;
ಗಳಿಸುವನು ಲಾಭವನು ನಡುವಣವನು!
ಕೂಡಿ ಕೊಳ್ಳುವ ಮಂತ್ರವನು ಜಪಿಸಿ ಸಾಧಿಸುತ
ದೂಡಬೇಕೀ ನಮ್ಮ ದೌರ್ಬಲ್ಯವ
ಇಲ್ಲಿ ಸಿದ್ಧಿಗೆ ಹಗೆಗಳಷ್ಟು ಬರಲೇನಂತೆ ?
ಗೆಲ್ಲುವುದೆ ದಿಟ ಕೊನೆಗೆ ಸಹಕಾರವು!

ಎತ್ತ ನೋಡಿದರತ್ತ ಮಿಡತೆ ಸಾಲಿಟ್ಟಂತೆ
ಮುತ್ತಿಹರು ಲಾಭಕೋರರು ನೆಲವನು!
ಹದಗೆಟ್ಟು ಹುರುಡಿನಲಿ ನುಗ್ಗಿ ನೂಕುತ, ಜಗಕೆ
ಕದನರಂಗದ ಪಾಡನೊಡ್ಡಿರುವರು.
ದಹಿಸುವೀ ಘೋರದಿಂದಿಳೆಯನ್ನುಜ್ಜೀವಿಸಲು
ಸಹಕಾರವೊಂದೆ ನಮಗಮೃತಧಾರೆ.

ಒಂದುಗೂಡಿರಿ ಜಗದ ಸಕಲ ಸಹಕಾರಿಗಳೆ,
ಎಂದಿಗೂ ಸಡಿಲದಿಹ ಮೈತ್ರಿಯೊಳಗೆ,
ಸ್ವಾತಂತ್ರ್ಯ ಶಾಂತಿ ದಯೆ ಧರ್ಮವನ್ನು ಶ್ರದ್ಧೆಯಲಿ,
ಪ್ರೀತಿಯಲಿ ರೂಢಿಸುವ ದೀಕ್ಷೆಗೊಳಿರಿ,
ಕದಲದೀ ತತ್ತ್ವಗಳೆ ದಿಟದ ನಾಗರಿಕತೆಯ
ಸದನವನು ನಿಲ್ಲಿಸುವ ಕಂಬಸಾಲು

– ತೀ. ನಂ. ಶ್ರೀಕಂಠಯ್ಯ